ಸಂಪುಟ: 04 ಸಂಚಿಕೆ: 341 ಪುಟಗಳು: 08 ಶನಿವಾರ 22 ಫೆಬ್ರವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಜೀವನದಲ್ಲಿ ಯಾರಿಗೆ ಯಾವುದೇ ಲಗತ್ತುಗಳು ಇಲ್ಲವೋ ಅವರು ನಿಜವಾಗಿಯೂ ಇತರರನ್ನು ಪ್ರೀತಿಸಬಹುದು, ಏಕೆಂದರೆ ಅವರ ಪ್ರೀತಿ ಶುದ್ಧ ಮತ್ತು ದೈವಿಕವಾಗಿರುತ್ತದೆ.

## ಅನಾಥ ಮಕ್ಕಳಿಗೆ ವಸತಿ ಶಾಲೆಗಳಲ್ಲಿ ನೇರ ಪ್ರವೇಶ ಕಲ್ಪಿಸಿ: ಆದೇಶ

• ಉದಯವಾಹಿನಿ, ಬೆಂಗಳೂರು

ತಂದೆ-ತಾಯಿ ಇಲ್ಲದ ಮಕ್ಕಳಿಗೆ ವಸತಿ ಶಾಲೆಗಳಲ್ಲಿ ನೇರ ಪ್ರವೇಶ ಕಲ್ಪಿಸುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ತಂದೆ ತಾಯಿ ಇಲ್ಲದ ಮಕ್ಕಳನ್ನು ಭಿಕ್ಷಾಟಣೆ ಮತ್ತು ಇತರೆ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ ವಸತಿ ಶಾಲೆಗಳಿಗೆ 6 ನೇ ತರಗತಿಗೆ ತಂದೆ ತಾಯಿ ಇಲ್ಲದ ಮಕ್ಕಳಿಗೆ ನೇರ ಪ್ರವೇಶಾತಿ ಕಲ್ಪಿಸಲು ಕೂಡಲೇ ಅಗತ್ಯ ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ ಎಂದು ಸರ್ಕಾರದ ಉಪ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸುತ್ತೋಲೆ ಹೊರಡಿಸಿದ್ದಾರೆ. ರಾಜ್ಯದ ವಸತಿ ಶಾಲೆಗಳಲ್ಲಿ 6 ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ 2025-26ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ (ರಾಜ್ಯ ಪಠ್ಯಕ್ರಮ) ಮತ್ತು ಡಾ|| ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳ 6ನೇ ತರಗತಿಗೆ ಉಚಿತ (ಸಿಬಿಎಸ್ಇ) (ಆಂಗ್ಲ ಮಾಧ್ಯಮ) ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯದ ಸಿಖ್, ಬೌದ್ಧ, ಜೈನ್, ಕ್ರಿಶ್ಚಿಯನ್, ಮುಸ್ಲಿಂ ಮತ್ತು ಪಾರ್ಸಿ ಶೇ.75 ಪರಿಶಿಷ್ಟ ಜಾತಿ, ಪರಿಶಿಷ್ಠ ವರ್ಗ ಹಾಗೂ ಇತರೆ ಹಿಂದುಳಿದ ವರ್ಗದವರಿಗೆ ಶೇ.25 ಸೀಟುಗಳು ಲಭ್ಯವಿರುತ್ತದೆ.

## ಹಿಂದೂ ನೌಕರರು ರಜೆ ಕೇಳಿದ್ರೆ ಸರ್ಕಾರಿ ಕಚೇರಿಗಳೇ ಖಾಲಿ

• ಉದಯವಾಹಿನಿ, ಬೆಂಗಳೂರು

ಹಿಂದೂ ನೌಕರರು ಉಪವಾಸ ಆಚರಣೆಗೆ ರಜೆ ಕೇಳಿದ್ರೆ, ಸರ್ಕಾರಿ ಕಚೇರಿಗಳೇ ಖಾಲಿ ಆಗುತ್ತೆ ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಹೇಳಿದ್ದಾರೆ. ರಂಜಾನ್ ಉಪವಾಸದ ವೇಳೆ ನೌಕರರಿಗೆ 1 ಗಂಟೆ ರಿಲೀಫ್ ಕೊಡಿ ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ಕೆಪಿಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ ಎ.ಹುಸೇನ್ ಮನವಿ ಮಾಡಿದ್ದಾರೆ, ಈ ಕುರಿತು ಮುತಾಲಿಕ್ ಪ್ರತಿಕ್ರಿಯೆ ನೀಡಿದ್ದಾರೆ. ಹಿಂದೂಗಳು ಕೂಡ ಶಿವರಾತ್ರಿ, ಸೇರಿದಂತೆ ಅನೇಕ ಹಬ್ಬಗಳಲ್ಲಿ ಉಪವಾಸ ಮಾಡ್ತಾರೆ. ಅದಕ್ಕೂ ಅವಕಾಶ ನೀಡ್ತಾರಾ ಶುಕ್ರವಾರದ ನಮಾಜೂ ಅವಕಾಶ ಕೊಡಿ ಅಂತ ಕೇಳ್ತಾರೆ. ಇದಕ್ಕೆಲ್ಲ ಸರ್ಕಾರ ಅನುಮತಿ ನೀಡಬಾರದು ನೀಡಿದ್ರೆ ಹೋರಾಟ ಮಾಡಬೇಕಾಗುತ್ತೆ, ಹಿಂದೂ ನೌಕರರು ಉಪವಾಸ ಆಚರಣೆಗೆ ರಜೆ ಕೇಳಿದ್ರೆ, ಸರ್ಕಾರಿ ಕಚೇರಿಗಳೇ ಖಾಲಿ ಆಗುತ್ತೆ ಎಂದು ಎಚ್ಚರಿಕೆ ನೀಡಿದ್ದಾರೆ.

## ಕುಂಭಮೇಳಕ್ಕೆ ತೆರಳಿದ್ದ ಬೀದರ್‌ನ ಐವರು ಅಪಘಾತದಲ್ಲಿ ಸಾವು

• ಉದಯವಾಹಿನಿ, ಬೆಂಗಳೂರು

ಉತ್ತರ ಪ್ರದೇಶದ ಪ್ರಯಾಗ್ ರಾಜ್ ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ತೆರಳುತ್ತಿದ್ದ ಬೀದರ್ ನ ಐವರು ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಘಟನೆ ಬಗ್ಗೆ, ತೀವ್ರ ಸಂತಾಪ ಸೂಚಿಸಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ, ಮೃತರ ಕುಟುಂಬಕ್ಕೆ ಪರಿಹಾರ ಘೋಷಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಈಶ್ವರ ಖಂಡ್ರೆ, ಬೀದರ್ ನ ಲಾಡಗೇರಿಯ 14 ಜನರು ಕುಂಭಮೇಳಕ್ಕೆ ತೆರಳುತ್ತಿದ್ದರು. ಕ್ರೂಸರ್ ವಾಹನ ಹಾಗೂ ಲಾರಿ ನಡುವೆ ಡಿಕ್ಕಿಯಾಗಿ ಐವರು ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ 8 ಜನರು ಗಾಯಗೊಂಡಿರುವ ಮಾಹಿತಿಯಿದೆ. ಘಟನೆ ತೀವ್ರ ನೋವುಂಟುಮಾಡಿದೆ. ಮೃತರ ಕುಟುಂಬಕ್ಕೆ 5 ಲಕ್ಷ ಪರಿಹಾರ ನೀಡಲಾಗುವುದು ಎಂದರು. ಮೃತರ ಪಾರ್ಥಿವ ಶರೀರವನ್ನು ಬೀದರ್ ಗೆ ಕರೆತರುವ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಗಾಯಾಳುಗಳು ಬೇಗನೇ ಗುಣಮುಖರಾಗಲಿ ಎಂದರು.

## ಚಿಲ್ಲರೆ ವಹಿವಾಟಿಗೂ ಅವಕಾಶ ಸಂಪುಟ ಸಭೆಯಲ್ಲಿ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣಗಳಲ್ಲಿ ಸಗಟು ಮಾರಾಟದೊಂದಿಗೆ ಚಿಲ್ಲರೆ ವಹಿವಾಟಿಗೂ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಪಿಎಂಸಿಗಳಲ್ಲಿ ಚಿಲ್ಲರೆ ವಹಿವಾಟಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ ತಿದ್ದುಪಡಿ ಮಸೂದೆ -2025ಕ್ಕೆ ಅನುಮೋದನೆ ನೀಡಲಾಗಿದೆ. ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಅವರು, ಬಜೆಟ್ ಅಧಿವೇಶನದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ತಿದ್ದುಪಡಿ ಮಸೂದೆ ಮಂಡಿಸಲಾಗುವುದು ಎಂದು ತಿಳಿಸಿದ್ದಾರೆ.

### ಅಭಿವೃದ್ಧಿ ಹೊಂದಿದ ಭಾರತಕ್ಕೆ ಪ್ರತಿ ವಲಯದಲ್ಲೂ ಅತ್ಯುತ್ತಮ ನಾಯಕತ್ವದ ಅಗತ್ಯವಿದೆ - ಮೋದಿ
### ಮರಾಠಿ ಸಾಹಿತ್ಯ ಉತ್ಸವ: ಶರದ್ ಪವಾರ್ ಮನ ಗೆದ್ದ ಪ್ರಧಾನಿ ಮೋದಿ! ಪ್ರೇಕ್ಷಕರಿಂದ ಚಪ್ಪಾಳೆಯ ಸುರಿಮಳೆ
### ಭಾಷೆಯ ಆಧಾರದ ಮೇಲೆ ಸಮಾಜ ವಿಭಜಿಸುವ ಪ್ರಯತ್ನಗಳಿಂದ ದೂರವಿರಿ

# ಜನರಿಂದ ಜಗತ್ತು

**ಅಭಿವೃದ್ಧಿಗೆ ಭದ್ರ ಬುನಾದಿ**



• ಉದಯವಾಹಿನಿ, ನವದೆಹಲಿ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ದೆಹಲಿಯ ಭಾರತ್ ಮಂಟಪದಲ್ಲಿ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್ ಶಿಪ್ ಸಮ್ಮೇಳನದ ಮೊದಲ ಆವೃತ್ತಿಯನ್ನು ಉದ್ಘಾಟಿಸಿದರು.

ರಾಷ್ಟ್ರ ನಿರ್ಮಾಣದಲ್ಲಿ ನಾಗರಿಕರ ಅಭಿವೃದ್ಧಿ ಬಹಳ ಮುಖ್ಯವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ನಾಯಕರ ಅಭಿವೃದ್ಧಿ ಬಹಳ ಮುಖ್ಯವಾಗಿರುತ್ತದೆ. ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್ ಶಿಪ್ ಸ್ಥಾಪನೆಯು ವಿಕಸಿತ ಭಾರತದ ಪ್ರಯಾಣದತ್ತ ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದು ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ ಹೇಳಿದರು.

ಕೆಲವು ಕಾರ್ಯಕ್ರಮಗಳು ಹೃದಯಕ್ಕೆ ಬಹಳ ಹತ್ತಿರವಾಗಿರುತ್ತವೆ, ಇಂದಿನ ಕಾರ್ಯಕ್ರಮವು ಅವುಗಳಲ್ಲಿ ಒಂದಾಗಿದೆ. ರಾಷ್ಟ್ರ ನಿರ್ಮಾಣಕ್ಕಾಗಿ, ಉತ್ತಮ ನಾಗರಿಕರ ಅಭಿವೃದ್ಧಿ ಅತ್ಯಗತ್ಯ. ಯಾವುದೇ ಉನ್ನತ ಸ್ಥಾನವನ್ನು ಏರಲು ಅಥವಾ ವಿಶಾಲತೆಯನ್ನು ಸಾಧಿಸಲು, ಆರಂಭದಿಂದಲೇ ಅಡಿಪಾಯ ಹಾಕಬೇಕು. ಪ್ರತಿಯೊಂದು ಕ್ಷೇತ್ರದಲ್ಲೂ ಅಸಾಧಾರಣ ನಾಯಕರ ಅಭಿವೃದ್ಧಿ ನಿರ್ಣಾಯಕ ಮತ್ತು ಕಾಲದ ಅವಶ್ಯಕತೆಯಾಗಿದೆ.

ಅದಕ್ಕಾಗಿಯೇ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್ ಸ್ಥಾಪನೆಯು ಭಾರತದ ಅಭಿವೃದ್ಧಿ ಹೊಂದಿದ ಭವಿಷ್ಯದ ಪ್ರಯಾಣದಲ್ಲಿ ಮಹತ್ವದ ಮತ್ತು ಪ್ರಮುಖ ಹೆಜ್ಜೆಯಾಗಿದೆ. 'ಸೋಲ್' ಎಂಬ ಹೆಸರೇ ಕಾಕತಾಳೀಯವಲ್ಲ - ಈ ಸಂಸ್ಥೆಯು ಭಾರತದ ಸಾಮಾಜಿಕ ಜೀವನದ ಆತ್ಮವಾಗುತ್ತದೆ ಎಂದು ಹೇಳಿದರು. ಜಾಗತಿಕ ಶಕ್ತಿಶಾಲಿಯಾಗಿ ಹೊರ ಹೊಮ್ಮುತ್ತಿರುವ ಭಾರತ, ಪ್ರತಿಯೊಂದು ಕ್ಷೇತ್ರದಲ್ಲೂ ಆವೇಗವನ್ನು ಹೆಚ್ಚಿಸಲು ನಮಗೆ ವಿಶ್ವ ದರ್ಜೆಯ ನಾಯಕರು ಬೇಕು ಎಂದರು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಾಯಕತ್ವವನ್ನು ಬೆಳೆಸುವತ್ತ ಸೋಲ್ ಮಹತ್ವದ ಹೆಜ್ಜೆಯಾಗಿದೆ. ಭೂತಾನಿನ ಪ್ರಧಾನಿ ಶೆರಿಂಗ್ ಟೋಬಗೆ ಕೂಡ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಟೋಬ್ಗೆ, ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿದರು, ಮೋದಿಯವರನ್ನು ಹಿರಿಯ ಸೋದರ ಮತ್ತು ಮಾರ್ಗದರ್ಶಕ ಎಂದು ಬೋಧಿಸಿದರು. ನಿಮ್ಮನ್ನು ಭೇಟಿಯಾಗುವ ಅವಕಾಶ ಸಿಕ್ಕಾಗಲೆಲ್ಲಾ ನಾನು ಸಂತೋಷದಿಂದ ತುಂಬಿ ತುಳುಕುತ್ತೇನೆ.

**1** ಸಾರ್ವಜನಿಕ ನೀತಿ, ವ್ಯವಹಾರ ಮತ್ತು ಸಾಮಾಜಿಕ ವಲಯ ಸೇರಿದಂತೆ ವಿವಿಧ ಕ್ಷೇತ್ರಗಳ ನಾಯಕರನ್ನು ಒಟ್ಟುಗೂಡಿಸುವ ಗುರಿ

**2** ಪ್ರತಿಯೊಂದು ಅಂಶದಲ್ಲೂ ಅತ್ಯುತ್ತಮ ನಾಯಕತ್ವದ ಅಗತ್ಯವಿದೆ

**3** ನಾವು ಜಾಗತಿಕ ಚಿಂತನೆ ಮತ್ತು ಸ್ಥಳೀಯ ಪಾಲನೆಯೊಂದಿಗೆ ಮುಂದುವರಿಯಬೇಕು

### ವಿಶ್ವದ ನಂಬರ್ ಒನ್ ದೇಶ

ಸ್ವಾಮಿ ವಿವೇಕಾನಂದರು ಭಾರತವನ್ನು ಗುಲಾಮಗಿರಿಯಿಂದ ಹೊರತರಲು ಬಯಸಿದ್ದರು ಮತ್ತು ಅವರಿಗೆ 100 ನಾಯಕರು ಇದ್ದರೆ, ಅವರು ಭಾರತಕ್ಕೆ ಸ್ವಾತಂತ್ರ ನೀಡುವುದಲ್ಲದೆ, ವಿಶ್ವದ ನಂಬರ್ ಒನ್ ದೇಶವನ್ನಾಗಿ ಮಾಡಬಹುದು ಎಂದು ನಂಬಿದ್ದರು. ನಾವೆಲ್ಲರೂ ಈ ಮಂತ್ರದೊಂದಿಗೆ ಮುಂದುವರಿಯಬೇಕು ಎಂದು ಹೇಳಿದರು. ಮುಂಬರುವ ದಿನಗಳಲ್ಲಿ ಭಾರತದ ಪ್ರಭಾವವು ಎಲ್ಲಾ ವಲಯಗಳಲ್ಲಿ ಹಲವು ಪಟ್ಟು ಹೆಚ್ಚಾಗುತ್ತದೆ. ಒಂದು ರೀತಿಯಲ್ಲಿ ಭಾರತದ ಸಂಪೂರ್ಣ ದೃಷ್ಟಿಕೋನ ಮತ್ತು ಭವಿಷ್ಯವು ಬಲವಾದ ನಾಯಕತ್ವ ಪೀಳಿಗೆಯ ಮೇಲೆ ಅವಲಂಬಿತವಾಗಿರುತ್ತದೆ, ಆದ್ದರಿಂದ ನಾವು ಜಾಗತಿಕ ಚಿಂತನೆ ಮತ್ತು ಸ್ಥಳೀಯ ಪಾಲನೆಯೊಂದಿಗೆ ಮುಂದುವರಿಯಬೇಕು ಎಂದು ಅಭಿಪ್ರಾಯಪಟ್ಟರು.

### ಅತ್ಯುತ್ತಮ ನಾಯಕತ್ವದ ಅಗತ್ಯವಿದೆ

21ನೇ ಶತಮಾನದ 'ಅಭಿವೃದ್ಧಿ ಹೊಂದಿದ ಭಾರತ'ಕ್ಕಾಗಿ ಪ್ರತಿಯೊಬ್ಬ ಭಾರತೀಯನು ಹಗಲಿರುಳು ಶ್ರಮಿಸುತ್ತಿದ್ದಾನೆ. ಇಂತಹ ಪರಿಸ್ಥಿತಿಯಲ್ಲಿ 140 ಕೋಟಿ ಜನರಿರುವ ದೇಶದಲ್ಲಿ ನಮಗೆ ಜೀವನದ ಪ್ರತಿಯೊಂದು ವಲಯದಲ್ಲಿ, ಪ್ರತಿಯೊಂದು ಕೋನದಲ್ಲಿ, ಪ್ರತಿಯೊಂದು ಅಂಶದಲ್ಲೂ ಅತ್ಯುತ್ತಮ ನಾಯಕತ್ವದ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ರಾಷ್ಟ್ರ ನಿರ್ಮಾಣಕ್ಕೆ ಉತ್ತಮ ನಾಗರಿಕರ ಅಭಿವೃದ್ಧಿ ಅಗತ್ಯ, ವೈಯಕ್ತಿಕ ಅಭಿವೃದ್ಧಿಯ ಮೂಲಕ ರಾಷ್ಟ್ರ ನಿರ್ಮಾಣ, 'ಜನರಿಂದ ಜಗತ್ತು', ಯಾವುದೇ ಎತ್ತರವನ್ನು ಸಾಧಿಸಲು, ಅದು ಜನರಿಂದ ಮಾತ್ರ ಪ್ರಾರಂಭವಾಗುತ್ತದೆ. ಇದಕ್ಕಾಗಿ ಉತ್ತಮ ನಾಯಕರ ಅಭಿವೃದ್ಧಿ ಅಗತ್ಯವಾಗಿದೆ, ಆದ್ದರಿಂದ 'ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್ ಶಿಪ್' ಸ್ಥಾಪನೆಯು ಭಾರತದ ಅಭಿವೃದ್ಧಿ ಪ್ರಯಾಣದಲ್ಲಿ ಒಂದು ಪ್ರಮುಖ ಮತ್ತು ದೊಡ್ಡ ಹೆಜ್ಜೆಯಾಗಿದೆ ಎಂದರು.

### ಏನಿದು ಸೋಲ್...

ಇದು ಗುಜರಾತ್ ನಲ್ಲಿ ತಲೆಯೆತ್ತಲಿರುವ ಸಂಸ್ಥೆಯಾಗಿದ್ದು, ಶ್ರೇಣಿ, ಬದ್ಧತೆ ಮತ್ತು ರಾಜಕೀಯ ಮಹತ್ವಾಕಾಂಕ್ಷೆಯನ್ನು ಹೊರತುಪಡಿಸಿ ಸಾರ್ವಜನಿಕ ಸೇವೆಯಲ್ಲಿ ಇಚ್ಛೆಯಿರುವ ಭವಿಷ್ಯದ ನಾಯಕರುಗಳಿಗೆ ತರಬೇತಿ ನೀಡುವುದಾಗಿದೆ. ಸೋಲ್ ಸಮ್ಮೇಳನದಲ್ಲಿ ರಾಜಕೀಯ, ಕ್ರೀಡೆ, ಉದ್ಯಮ, ಕಲೆ, ಮಾಧ್ಯಮ ಮತ್ತು ಸಾರ್ವಜನಿಕ ನೀತಿಯ ಕ್ಷೇತ್ರಗಳ ನಾಯಕರು ತಮ್ಮ ಒಳನೋಟ ಮತ್ತು ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಗುಜರಾತ್ ರಾಜ್ಯದ ಗಾಂಧಿನಗರದಲ್ಲಿ ಸೋಲ್ ಕ್ಯಾಂಪಸ್ ನ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಗಿಫ್ಟ್ ಸಿಟಿ ರಸ್ತೆಯ ಬಳಿ ಇರುವ ಗುಜರಾತ್ ಜೈವಿಕ ತಂತ್ರಜ್ಞಾನ ವಿಶ್ವ ವಿದ್ಯಾಲಯದ 22 ಎಕರೆ ಪ್ರದೇಶದಲ್ಲಿ ಹರಡಿದೆ. ಸುಮಾರು 150 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕ್ಯಾಂಪಸ್ ಎರಡು ವರ್ಷಗಳಲ್ಲಿ ಪೂರ್ಣವಾಗುವ ನಿರೀಕ್ಷೆಯಿದೆ.

### ಭೂತಾನಿನ ಪ್ರಧಾನಿ ಶೆರಿಂಗ್ ಟೊಬಗೆ

ಈ ಎರಡು ದಿನಗಳ ಸಮ್ಮೇಳನದಲ್ಲಿ ರಾಜಕೀಯ, ಕ್ರೀಡೆ, ಕಲೆ, ಮಾಧ್ಯಮ, ಆಧ್ಯಾತ್ಮಿಕತೆ, ಸಾರ್ವಜನಿಕ ನೀತಿ, ವ್ಯವಹಾರ ಮತ್ತು ಸಾಮಾಜಿಕ ಕ್ಷೇತ್ರದ ವ್ಯಕ್ತಿಗಳು ತಮ್ಮ ಯಶೋಗಾಥೆಗಳನ್ನು ಹಂಚಿಕೊಳ್ಳಲಿದ್ದಾರೆ ಎಂದರು.



ನನ್ನ ಮಾರ್ಗದರ್ಶಕ ನೀವು. ನಿಮ್ಮನ್ನು ಭೇಟಿಯಾದಾಗಲೆಲ್ಲಾ, ಸಾರ್ವಜನಿಕ ಸೇವಕನಾಗಿ ಇನ್ನಷ್ಟು ಶ್ರಮಿಸಲು ನನಗೆ ಸ್ಫೂರ್ತಿ ಸಿಗುತ್ತದೆ ಎಂದರು.

ಸೋಲ್ ಉಪಕ್ರಮವನ್ನು ಶ್ಲಾಘಿಸಿದ ಟೋಬಗೆ, ಇದು ನಿಜವಾದ ನಾಯಕರನ್ನು ಬೆಳೆಸುವಲ್ಲಿ ಮೋದಿಯವರ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ. ಇದು ಒಂದು ಆದರ್ಶ ಅವಕಾಶ, ಇಲ್ಲಿ ನಾನು ವಿಶ್ವದ ಶ್ರೇಷ್ಠ ನಾಯಕ ಪ್ರಧಾನಿ ಮೋದಿಯವರಿಂದ ನಾಯಕತ್ವದ ಬಗ್ಗೆ ಕಲಿಯಲಿದ್ದೇನೆ ಎಂದರು. ಇಂದು ಮತ್ತು ನಾಳೆ ನಡೆಯುವ ಎರಡು ದಿನಗಳ ಸಮಾವೇಶವು ರಾಜಕೀಯ, ಕ್ರೀಡೆ, ಕಲೆ, ಮಾಧ್ಯಮ, ಸಾರ್ವಜನಿಕ ನೀತಿ, ವ್ಯವಹಾರ ಮತ್ತು ಸಾಮಾಜಿಕ ವಲಯ ಸೇರಿದಂತೆ ವಿವಿಧ ಕ್ಷೇತ್ರಗಳ ನಾಯಕರನ್ನು ಒಟ್ಟುಗೂಡಿಸುವ ಗುರಿಯನ್ನು ಹೊಂದಿದೆ. ಇದು ಯುವ ಪ್ರೇಕ್ಷಕರಿಗೆ ಯಶಸ್ಸು ಮತ್ತು ವೈಫಲ್ಯಗಳ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಸ್ಫೂರ್ತಿ ನೀಡುವುದರ ಜೊತೆಗೆ ಸಹಯೋಗ ಮತ್ತು ಚಿಂತನೆಯ ನಾಯಕತ್ವದ ಪರಿಸರ ವ್ಯವಸ್ಥೆಯನ್ನು ರಚಿಸಲು ಪ್ರಯತ್ನಿಸುತ್ತದೆ.

## ಶಾಲಾ ವಿದ್ಯಾರ್ಥಿಗಳಿಗೆ ಮೊಟ್ಟೆ-ಬಾಳೆಹಣ್ಣು ವಿತರಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ 1-10 ನೇ ತರಗತಿ ಶಾಲಾ ವಿದ್ಯಾರ್ಥಿಗಳಿಗೆ ಮೊಟ್ಟೆ-ಬಾಳೆಹಣ್ಣು ವಿತರಣೆ ಬಗ್ಗೆ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 01 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಠಿಕಾಂಶ ಆಹಾರವಾಗಿ ಮೊಟ್ಟೆ ಅಥವಾ ಬಾಳೆಹಣ್ಣನ್ನು ಮಾತ್ರ ವಿತರಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಿ ಆದೇಶಿಸಲಾಗಿದೆ. ಶಾಲೆಗಳಲ್ಲಿ ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ವಿತರಣೆ ಮಾಡುತ್ತಿದ್ದ ಚಿಕ್ಕಿಯನ್ನು



**ಸರ್ಕಾರ ಮಹತ್ವದ ಆದೇಶ.!**

ಇನ್ನು ಮುಂದೆ ವಿತರಣೆ ಮಾಡುವುದನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಿದೆ. ಅದರಂತೆ ಇನ್ನು ಮುಂದೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 01 ರಿಂದ 10ನೇ ತರಗತಿವರೆಗೆ ವಾರದಲ್ಲಿ ಎರಡು ದಿನ ಸರ್ಕಾರದ ವತಿಯಿಂದ ನೀಡುವ ಪೂರಕ ಪೌಷ್ಠಿಕ ಆಹಾರ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಶನ್ ವತಿಯಿಂದ ವಾರದಲ್ಲಿ ಉಳಿದ ನಾಲ್ಕು ದಿನಗಳಿಗೆ ನೀಡುವ ಪೂರಕ ಪೌಷ್ಠಿಕ ಆಹಾರದಲ್ಲಿ ಮೊಟ್ಟೆಯನ್ನು ನೀಡಲು, ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ಮಾತ್ರ ವಿತರಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದೆ. ಇನ್ನು ಮುಂದೆ ಯಾವುದೇ ಕಾರಣಕ್ಕೂ ಶಾಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರವಾಗಿ ಚಿಕ್ಕಿಯನ್ನು ವಿತರಿಸದಂತೆ ಸೂಕ್ತ ಕ್ರಮ ವಹಿಸಲು ಶಾಲಾ ಮುಖ್ಯ ಶಿಕ್ಷಕರಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಸೂಚಿಸುವಂತೆ ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು ಪಿಎಂ ಪೋಷಣ್ ಹಾಗೂ ತಾಲ್ಲೂಕು ಸಹಾಯಕ ನಿರ್ದೇಶಕರು ಪಿ.ಎಂ. ಪೋಷಣ್ ಇವರುಗಳಿಗೆ ಈ ಮೂಲಕ ಸೂಚನೆ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

## ನಮ್ಮ ಮೆಟ್ರೋ ಸಂಚಾರ ಅವಧಿ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು



ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂ.ಪಿ.ಎಲ್.) ಕ್ರಿಕೆಟ್ ಪಂದ್ಯ ನಡೆಯುವ ದಿನಗಳಂದು ನಮ್ಮ ಮೆಟ್ರೋ ಸಂಚಾರ ಅವಧಿಯನ್ನು ರಾತ್ರಿ 25 ನಿಮಿಷ ವಿಸ್ತರಿಸಲು ಬಿಎಂಆರ್ ಸಿಎಲ್ ನಿರ್ಧರಿಸಿದೆ. ಫೆಬ್ರವರಿ 21, 22, 24, 25, 26, 27, 28, ಮಾರ್ಚ್ 1 ರಂದು ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಗಳು ನಡೆಯಲಿವೆ. ಈ ದಿನಗಳಂದು ರಾತ್ರಿ 11.20ಕ್ಕೆ ಮೆಟ್ರೋ ನೇರಳೆ ಮಾರ್ಗ ಮತ್ತು ಹಸಿರು ಮಾರ್ಗಗಳ ನಾಲ್ಕು ಟರ್ಮಿನಲ್‌ಗಳಿಂದ ಕೊನೆಯ ಮೆಟ್ರೋ ರೈಲುಗಳು ಹೊರಡುತ್ತವೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೋ ನಿಲ್ದಾಣದಿಂದ ನಾಲ್ಕು ಟರ್ಮಿನಲ್ ಗಳ ಕಡೆಗೆ ರಾತ್ರಿ 11:55 ಕ್ಕೆ ರೈಲುಗಳು ಹೊರಡಲಿವೆ. ಸಾಮಾನ್ಯ ದಿನಗಳಲ್ಲಿ ಕೊನೆಯ ರೈಲುಗಳು ನಾಲ್ಕು ಟರ್ಮಿನಲ್ ಗಳಿಂದ ರಾತ್ರಿ 11 ಗಂಟೆಗೆ, ಮೆಜೆಸ್ಟಿಕ್‌ನಿಂದ ಟರ್ಮಿನಲ್‌ಗಳ ಕಡೆಗೆ ರಾತ್ರಿ 11:30ಕ್ಕೆ ಹೊರಡುತ್ತಿದ್ದವು.

## ಹೊಸದಾಗಿ ನಿರ್ಮಾಣ ಮಾಡುವ ಎಲ್ಲಾ ಮೆಟ್ರೊ ಮಾರ್ಗದಲ್ಲಿ ಡಬಲ್-ಡೆಕ್ಕರ್ ಫ್ಲೈಓವರ್

### ಮೆಟ್ರೋ ಆಯ್ತು ಇದೀಗ ಉಪನಗರ ರೈಲು ಯೋಜನೆಯಲ್ಲೂ ಡಬಲ್ ಡೆಕ್ಕರ್ ಮೊದಲ ರಸ್ತೆ ಎಲ್ಲಿ ಬರುತ್ತೆ ಗೊತ್ತಾ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ನಗರದ ಟ್ರಾಫಿಕ್ ಜಾಮ್ ಕಡಿಮೆ ಮಾಡುವ ಉದ್ದೇಶದಿಂದ ಹೊಸದಾಗಿ ನಿರ್ಮಾಣ ಮಾಡುವ ಎಲ್ಲಾ ಮೆಟ್ರೊ ಮಾರ್ಗದಲ್ಲಿ ಡಬಲ್-ಡೆಕ್ಕರ್ ಫ್ಲೈಓವರ್ ಮಾಡಲಾಗುತ್ತಿದೆ. ಇದೇ ಮಾದರಿಯನ್ನು ಉಪನಗರ ರೈಲು ಯೋಜನೆಯಲ್ಲೂ ಅಳವಡಿಸಲಾಗುತ್ತಿದೆ.

ಉಪನಗರ ರೈಲು ಯೋಜನೆಯ ಕೆಂಗೇರಿ -ವೈಟ್‌ಫೀಲ್ಡ್ (ಪಾರಿಜಾತ ಮಾರ್ಗ- ಕಾರಿಡಾರ್ 3)ನ 35 ಕಿ.ಮೀ. ಪೈಕಿ, ಕೆಎಸ್‌ಆರ್ ಬೆಂಗಳೂರು- ಕೆಂಗೇರಿ ನಡುವಿನ 16 ಕಿ.ಮೀ ಫ್ಲೈಓವರ್ ಮಾರ್ಗದಲ್ಲಿ ಡಬಲ್ ಡೆಕ್ಕರ್ ಯೋಜನೆ ರೂಪಿಸಲಾಗುತ್ತಿದೆ.

**350 ಕೋಟಿ ರೂ. ವಿನಿಯೋಗ**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವ ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿಮಿಟೆಡ್ (ಕೆ-ರೈಡ್) ಈ ಯೋಜನೆಗೆ ತಾತ್ವಿಕವಾಗಿ ಒಪ್ಪಿಕೊಂಡಿದೆ. ಬಿಬಿಎಂಪಿ ಇದಕ್ಕಾಗಿ 350 ಕೋಟಿ ರೂ. ವಿನಿಯೋಗಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಡಬಲ್ ಡೆಕ್ಕರ್ ಉಪನಗರ ಕಾರಿಡಾರ್ ಮೆಜೆಸ್ಟಿಕ್ (ಬೆಂಗಳೂರು ನಗರ) ನಿಂದ ಜಗಜೀವನರಾಮ್ ನಗರ, ವಿಜಯನಗರ, ಕೆಂಗೇರಿ, ನೈಸ್ ರಸ್ತೆ ಮತ್ತು ಕೆಂಪೇಗೌಡ ಲೇಔಟ್‌ಗೆ ನೇರ ಸಂಪರ್ಕ ಕಲ್ಪಿಸುತ್ತದೆ. ಕೆ-ರೈಡ್ ಕಾರಿಡಾರ್ ಅನ್ನು ಡಬಲ್ ಡೆಕ್ಕರ್ ರಚನೆಯಾಗಿ ನಿರ್ಮಿಸಲಿದೆ. ಲೆವೆಲ್-1ರಲ್ಲಿ ಎರಡು ಲೇನ್‌ಗಳ ರಸ್ತೆ ಫ್ಲೈಓವರ್(ತಲಾ 7.5 ಮೀಟರ್ ಕ್ಯಾರೇಜ್ ಅಗಲ) ಮತ್ತು ಲೆವೆಲ್-2 ನಲ್ಲಿ ಉಪನಗರ ರೈಲು ಸಂಚರಿಸಲಿದೆ.



### ಮೆಟ್ರೊ ಹಂತ -3ರ ಯೋಜನೆಯಲ್ಲೂ ಅನುಷ್ಠಾನ

'' ಜೆ.ಪಿ. ನಗರ ಹಂತ 4 ರಿಂದ ಕೆಂಪಾಪುರವರೆಗಿನ ಕಾರಿಡಾರ್-1 (32.15 ಕಿ.ಮೀ) ಮತ್ತು ಹೊಸಹಳ್ಳಿಯಿಂದ ಕಡಬಗೆರೆವರೆಗಿನ ಕಾರಿಡಾರ್-2 (12.5 ಕಿ.ಮೀ) ಸೇರಿದಂತೆ ಬೆಂಗಳೂರಿನಲ್ಲಿ ಮುಂಬರುವ ಎಲ್ಲಾ ಮೆಟ್ರೊ ಮಾರ್ಗಗಳನ್ನು ಡಬಲ್ ಡೆಕ್ಕರ್ ಫ್ಲೈಓವರ್ ಯೋಜನೆಗಳ ಭಾಗವಾಗಿ ನಿರ್ಮಿಸಲಾಗುವುದು,'' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ''41 ಕಿ.ಮೀ. ಡಬಲ್ ಡೆಕ್ಕರ್ ಕಾರಿಡಾರ್(ರಸ್ತೆ-ಕಮ್-ಮೆಟ್ರೋ ರೈಲು) ನಿರ್ಮಾಣಕ್ಕೆ 18,000 ಕೋಟಿ ರೂ. ವೆಚ್ಚವಾಗಲಿದೆ,'' ಎಂದು ಅಂದಾಜಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**61 ಕಿ.ಮೀ. ಎತ್ತರಿಸಿದ ಮಾರ್ಗ :** 148 ಕಿ.ಮೀ. ಬೆಂಗಳೂರು ಉಪನಗರ ರೈಲು ಯೋಜನೆ ನಾಲ್ಕು ಕಾರಿಡಾರ್ ಒಳಗೊಂಡಿದೆ. ನಾಲ್ಕು ಕಾರಿಡಾರ್‌ನಿಂದ ಸುಮಾರು 61 ಕಿ.ಮೀ. ಎತ್ತರಿಸಿದ ಮಾರ್ಗ ಹೊಂದಿದ್ದು, ಮುಂದಿನ ದಿನಗಳಲ್ಲಿ ಈ ಎಲ್ಲಾ ಎತ್ತರಿಸಿದ ಮಾರ್ಗದಲ್ಲೂ ಡಬಲ್ ಡೆಕ್ಕರ್ ಯೋಜನೆ ರೂಪಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೆಎಸ್‌ಆರ್ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣ- ದೇವನಹಳ್ಳಿ (ಕಾರಿಡಾರ್-1) 18.98 ಕಿ.ಮೀ, ಬೈಯಪ್ಪನಹಳ್ಳಿ ಟರ್ಮಿನಲ್ -ಚಿಕ್ಕಬಾಣಾವರ (ಕಾರಿಡಾರ್ -2) 12 ಕಿ.ಮೀ, ಹಾಗೂ ಹೀಲಲಿಗೆ - ರಾಜಾನುಕುಂಟೆ (ಕಾರಿಡಾರ್-3) 13.29 ಕಿ.ಮೀ. ಎತ್ತರಿಸಿದ ಮಾರ್ಗದಲ್ಲಿ ರೈಲುಗಳು ಸಂಚರಿಸಲಿವೆ.

ಈ ಎಲ್ಲಾ ಕಡೆ ಡಬ್ಬಲ್ ಡೆಕ್ಕರ್ ನಿರ್ಮಾಣಕ್ಕೆ ಇನ್ನಷ್ಟು ಭೂ ಸ್ವಾಧೀನ ಅಗತ್ಯವಿದೆ. ಹಣಕಾಸಿನ ಅಗತ್ಯ ಕೂಡ ಇದೆ. ನಗರದ ಟ್ರಾಫಿಕ್ ಜಾಮ್ ಹಿನ್ನೆಲೆಯಲ್ಲಿ ಇದೊಂದು ಉತ್ತಮ ಬೆಳಣಿಗೆಯಾಗಿದೆ ಎನ್ನುತಾರೆ ಅಧಿಕಾರಿಯೊಬ್ಬರು.

**ಸಂಚಾರ ಸಮಯ ಇಳಿಕೆ:** ರಾಗಿಗುಡ್ಡದಿಂದ - ಸಿಲ್ಕ್ ಬೋರ್ಡ್‌ವರೆಗಿನ 3 ಕಿ.ಮೀನಲ್ಲಿ ನಗರದ ಮೊದಲ ಡಬಲ್ ಡೆಕ್ಕರ್ (ಮೊದಲ ಲೈನ್‌ನಲ್ಲಿ ಮೆಟ್ರೊ, ಎರಡನೇ ಲೈನ್‌ನಲ್ಲಿ ವಾಹನ ಸಂಚಾರ) ಯೋಜನೆಯಾಗಿದ್ದು, ಈ ಮಾರ್ಗ ಯಶಸ್ವಿಯಾಗಿದೆ. ಡಬಲ್ ಡೆಕ್ಕರ್ ಆರಂಭಕ್ಕೂ ಮುನ್ನ, ಈ ಮಾರ್ಗದಲ್ಲಿ ಮೂರು ಕಿ.ಮೀ. ಸಂಚಾರಕ್ಕೆ 15 ರಿಂದ 20 ನಿಮಿಷ ಬೇಕಿತ್ತು. ಈ ಅವಧಿ 5 ನಿಮಿಷಕ್ಕೆ ಇಳಿಕೆಯಾಗಿದೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,755 /Gram24ct ₹8,025/Gram22ct | ಬೆಳ್ಳಿ: ₹100.40/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

# ಪ್ರಾಙ್ನಾಭಿವರ್ಧನಾತ್ಪುಂಸಃ

**ಜಾತಕರ್ಮ ವಿಧೀಯತೇ**
**ಮಂತ್ರವತ್ಪ್ರಾಶನಂ ಚಾಸ್ಯ**
**ಹಿರಣ್ಯಮಧುಸರ್ಪಿಷಾಂ.**

ಮನುಸ್ಮೃತಿಯ ಎರಡನೇ ಅಧ್ಯಾಯದ ಇಪ್ಪತ್ತೊಂಭತ್ತನೇ ಶ್ಲೋಕ. ಹದಿನಾರು ಸಂಸ್ಕಾರಗಳಲ್ಲಿ ಒಂದಾದ ಜಾತಕರ್ಮ ಸಂಸ್ಕಾರವನ್ನು ವಿವರಿಸುವುದು. ಹುಟ್ಟಿದ ಗಂಡು ಮಗುವಿಗೆ ಮಾಡುವ ಸಂಸ್ಕಾರ. ಮಗು ಹುಟ್ಟಿದ ಬಳಿಕ ಹೊಕ್ಕಳ ಬಳ್ಳಿಯನ್ನು ಕೊಯ್ಯುವ ಮೊದಲೇ ಜಾತಕರ್ಮ ಸಂಸ್ಕಾರವನ್ನು ಮಾಡಬೇಕು. ಮಗುವು ತಾಯಿಯ ಹಾಲು ಕುಡಿಯುವ ಮುನ್ನ ಮಾಡಬೇಕು ಎಂಬ ತಾತ್ಪರ್ಯ. ಮಂತ್ರ ಪೂರ್ವಕವಾಗಿ ದೇವರ ಪ್ರಸಾದರೂಪದಲ್ಲಿ ಮಗುವಿನ ನಾಲಿಗೆಗೆ ಜೇನುತುಪ್ಪ ಸವರುವುದು ಬಂಗಾರವನ್ನು ತಾಗಿಸುವುದು ಜಾತಕರ್ಮ. ಇದನ್ನು ಚ್ಯವನಪ್ರಾಶನ ಎಂದೂ ಕರೆಯುವರು. ಮಗುವು ಅಮೃತವನ್ನು ಸವಿಯಲಿ ಯಾವ ಕೊರತೆಯೂ ಆಗದಿರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವುದು ಭಾವಿಸುವುದು ಅದರಂತೆ ಕಾಳಜಿ ವಹಿಸುವುದು ಉದ್ದೇಶ. ದೇಹ ಪರಮಾತ್ಮ ನೆಲೆಸಿದ ದೇಗುಲ. ಆಹಾರ ಶುದ್ಧ ಪವಿತ್ರವಾಗಿರಲಿ. ಪವಿತ್ರ ಆಹಾರ ಪವಿತ್ರ ಜೀವನ.

## ಮಹಾಭಾರತ ಪ್ರವಚನ ಮಾಲಿಕೆ-6 (ಆದಿಪರ್ವ, ಸಭಾಪರ್ವ)

• **ಉದಯವಾಹಿನಿ, ಬೆಂಗಳೂರು,**

ಶ್ರೀ ಪೂರ್ಣಪ್ರಜ್ಞ ಪ್ರತಿಷ್ಠಾನದ ವತಿಯಿಂದ ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಫೆಬ್ರವರಿ 23 ರಿಂದ 28ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಮಹಾಭಾರತದ ಆದಿಪರ್ವ ಮತ್ತು ಸಭಾಪರ್ವ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ ಬೆಂಗಳೂರು-560028



## ಬೆಂಗಳೂರಿನಲ್ಲಿ ಪರಿಚಯಸ್ಥ ಮಹಿಳೆ ಮೇಲೆ ಗ್ಯಾಂಗ್ ರೇಪ್

• **ಉದಯವಾಹಿನಿ, ಬೆಂಗಳೂರು,**

ಪರಿಚಯಸ್ಥ ಮಹಿಳೆ ಮೇಲೆ ನಾಲ್ವರು ಯುವಕರು ಸಾಮೂಹಿಕ ಅತ್ಯಾಚಾರ ಎಸಗಿರುವ ಘಟನೆ ನಗರದ ಕೋರಮಂಗಲದಲ್ಲಿ ನಡೆದಿದೆ. ಕೋರಮಂಗಲದ ಜ್ಯೋತಿ ನಿವಾಸ ಜಂಕ್ಷನ್ ಬಳಿಯಿರುವ ಖಾಸಗಿ ಹೋಟೆಲ್‌ನ ಟೆರೇಸ್ ಮೇಲೆ ಕಾಮುಕರು ಪರಿಚಯಸ್ಥ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದಾರೆ.



ಈ ಕುರಿತು ಸಂತ್ರಸ್ತ ಮಹಿಳೆ ಮುಂಜಾನೆ 5 ಗಂಟೆ ಸುಮಾರಿಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬಳಿಕ ಪ್ರಕರಣ ದಾಖಲಿಸಿಕೊಂಡಿರುವ ಕೋರಮಂಗಲ ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಕೃತ್ಯ ಎಸಗಿದ ಕಾಮುಕರಿಗಾಗಿ ಹುಡುಕಾಟ ನಡೆಸಿದ್ದಾರೆ. ಸದ್ಯ ಸಂತ್ರಸ್ತ ಮಹಿಳೆಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಒಂದು ತಿಂಗಳ ಹಿಂದೆಯಷ್ಟೇ ನಗರದ ಕೆ.ಆರ್ ಮಾರ್ಕೆಟ್‌ನಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದ ಘಟನೆ ನಡೆದಿತ್ತು.

## ಮಾನವೀಯತೆ ಮರೆತ ಶೇಷಾದ್ರಿಪುರಂ ಪೊಲೀಸರು ತಡರಾತ್ರಿವರೆಗೆ ಠಾಣೆಯಲ್ಲಿ ಗರ್ಭಿಣಿ ಪರದಾಟ

• **ಉದಯವಾಹಿನಿ, ಬೆಂಗಳೂರು,**

ಮಾನವೀಯತೆಯನ್ನು ಮರೆತು ರಾತ್ರಿ 10 ಗಂಟೆಯವರೆಗೆ ಗರ್ಭಿಣಿ ಮಹಿಳೆಯನ್ನು ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಇರಿಸಿಕೊಂಡಿರುವ ಘಟನೆ ನಡೆದಿದೆ. ಪತಿಯೊಂದಿಗೆ ಗರ್ಭಿಣಿ ಮಹಿಳೆ ಕೆ.ಸಿ.ಜನರಲ್ ಆಸ್ಪತ್ರೆಗೆ ಇಂಜೆಕ್ಷನ್ ತೆಗೆದುಕೊಳ್ಳಲು ಬಂದಿದ್ದಳು. ಈ ವೇಳೆ ಆಧಾರ್ ಕಾರ್ಡ್ ಪರಿಶೀಲನೆ ಮಾಡಿದಾಗ ಮಹಿಳೆಯ ವಯಸ್ಸು 18 ವರ್ಷ, 20 ದಿನ ಎಂದು ಗೊತ್ತಾಗಿದೆ. ಆದರೆ ಮಹಿಳೆ ಈಗ 4 ತಿಂಗಳ ಗರ್ಭಿಣಿಯಾಗಿದ್ದು, 18 ವರ್ಷಕ್ಕೂ ಮುಂಚೆಯೇ ಮದುವೆ ಮಾಡಿರುವುದಾಗಿ ತಿಳಿದುಬಂದಿದೆ. ಇದರಿಂದ ಕೆ.ಸಿ.ಜನರಲ್ ಆಸ್ಪತ್ರೆಯ ವೈದ್ಯರು ಶೇಷಾದ್ರಿಪುರಂ ಪೊಲೀಸರಿಗೆ ಮಾಹಿತಿ ನೀಡಿದ್ದು, ಮಧ್ಯಾಹ್ನ 2 ಗಂಟೆಗೆ ಪತಿ, ಪತ್ನಿಯನ್ನ ಪೊಲೀಸರು ಶೇಷಾದ್ರಿಪುರಂ ಠಾಣೆಗೆ ಕರೆತಂದಿದ್ದಾರೆ. ನಿಯಮಗಳ ಪ್ರಕಾರ ಸಂಜೆ 6 ಗಂಟೆಯೊಳಗೆ ಮಹಿಳೆಯನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಿಕೊಡಬೇಕು. ಆದರೆ ರಾತ್ರಿ 10 ಗಂಟೆವರೆಗೆ ಗರ್ಭಿಣಿಯನ್ನು ಠಾಣೆಯಲ್ಲಿಯೇ ಇರಿಸಿಕೊಂಡು ಅಮಾನವೀಯತೆ ಮೆರೆದಿದ್ದಾರೆ. ಬಳಿಕ ಠಾಣೆಯ ಬಳಿ ಮಾಧ್ಯಮದವರು ಬಂದ ನಂತರ ಮಹಿಳೆಯನ್ನು ಸಖಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದಾರೆ.

## ಪಿಜಿ ವೈದ್ಯಕೀಯ: ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ಕೆಇಎ

• **ಉದಯವಾಹಿನಿ, ಬೆಂಗಳೂರು,**

2024ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಿದ್ದು, ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಫೆ.24ರವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಮಾಪ್ ಅಪ್ ಸುತ್ತಿನ ಸೀಟು ಹಂಚಿಕೆ ನಂತರ ರದ್ದುಪಡಿಸಿಕೊಂಡ ಸೀಟು ಹಾಗೂ ಹಂಚಿಕೆಯಾಗದೆ ಉಳಿದಿರುವ ಸೀಟುಗಳನ್ನು ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಈ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಗಡವಾಗಿ 5 ಲಕ್ಷ ರೂ. (ಕಾಷನ್ ಡೆಪಾಸಿಟ್) ಪಾವತಿಸಬೇಕು. ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಫೆ.24ರ ರಾತ್ರಿ 8ಕ್ಕೆ ಪ್ರಕಟಿಸಲಾಗುತ್ತದೆ. ಫೆ.25ರಂದು ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಶುಲ್ಕ ಪಾವತಿಸಿ, ಕಾಲೇಜಿಗೆ ವರದಿ ಮಾಡಿಕೊಳ್ಳಲು ಫೆ.28 ಕೊನೆ ದಿನ. ಎಂಸಿಸಿ ಸೂಚನೆ ಅನ್ವಯ ಈ ದಿನಾಂಕ ವಿಸ್ತರಣೆ ಇರುವುದಿಲ್ಲ ಎಂದು ವಿವರಿಸಿದ್ದಾರೆ.

ಸೀಟು ಹಂಚಿಕೆ ನಂತರ ಮುಂಗಡ ಹಣವನ್ನು ಶುಲ್ಕದ ಜೊತೆ ಹೊಂದಾಣಿಕೆ ಮಾಡಲಾಗುತ್ತದೆ. ಸೀಟು ಹಂಚಿಕೆ ನಂತರ ಶುಲ್ಕ ಪಾವತಿಸಿ, ಕಾಲೇಜಿಗೆ ಪ್ರವೇಶ ಪಡೆಯದಿದ್ದಲ್ಲಿ ಮುಂಗಡ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಅಲ್ಲದೆ, ದಂಡ ಕೂಡ ವಿಧಿಸಲಾಗುತ್ತದೆ. ಅಂತಹವರನ್ನು ಮುಂದಿನ ವರ್ಷದ ಎಂಸಿಸಿ ಕೌನ್ಸಲಿಂಗ್ ಸೇರಿದಂತೆ ಪಿಜಿ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಿರ್ಬಂಧಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಕೆಇಎ ಅಥವಾ ಎಂಸಿಸಿಯಿಂದ ಅಥವಾ ಇತರೆ ರಾಜ್ಯಗಳಲ್ಲಿ ಮೊದಲ ಅಥವಾ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ಇಟ್ಟುಕೊಳ್ಳದೇ ಇರುವವರು ಮತ್ತು ಎಂಸಿಸಿಯ ಮೂರನೇ ಅಥವಾ ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಸೀಟು ಹಂಚಿಕೆಯಾಗದಿರುವವರು ಮಾತ್ರ ಈ ಸುತ್ತಿನಲ್ಲಿ ಭಾಗವಹಿಸಬಹುದು.

# ಲೋಕಾಯುಕ್ತದಿಂದ ಪಾರಾದ ಸಿಎಂ ನವರಿಗೆ ಇ.ಡಿ ಸಂಕಷ್ಟ !

## ನಗರಾಭಿವೃದ್ಧಿ ಪ್ರಾಧಿಕಾರ ಆಕ್ರಮ ನಿವೇಶನ ಪಡೆದ ಪ್ರಕರಣದಲ್ಲಿ ಲೋಕಾಯುಕ್ತ ತನಿಖಾಧಿಕಾರಿಗಳಿಂದ ಕ್ಲೀನ್ ಚಿಟ್

• **ಉದಯವಾಹಿನಿ, ಬೆಂಗಳೂರು,**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ( ಮೂಡಾ)ದ ಆಕ್ರಮ ನಿವೇಶನ ಪಡೆದ ಪ್ರಕರಣದಲ್ಲಿ ಲೋಕಾಯುಕ್ತ ತನಿಖಾಧಿಕಾರಿಗಳಿಂದ ಕ್ಲೀನ್ ಚಿಟ್ ಪಡೆದು ನಿರಾಳರಾಗಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತ್ತೆ ಕಾನೂನಿನ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ.

ಏಕೆಂದರೆ, ಲೋಕಾಯುಕ್ತ ತನಿಖಾಧಿಕಾರಿಗಳ ಬಿ ರಿಪೋರ್ಟ್ ವರದಿಯನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ದೂರುದಾರ ಸ್ನೇಹಮಯಿ ಕೃಷ್ಣ ಅವರುಗಳು ಬೆಂಗಳೂರಿನ ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯ ಇಲ್ಲವೇ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮುಂದಾಗಿದ್ದಾರೆ.


ಮುಂದಿನ ವಾರ ಇ.ಡಿ ಹಾಗೂ ಸ್ನೇಹಮಯಿ ಕೃಷ್ಣ ಇಬ್ಬರೂ ಪ್ರತ್ಯೇಕವಾಗಿ ನ್ಯಾಯಾಲಯದಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಕೆ ಮಾಡಲು ಸಜ್ಜಾಗಿದ್ದಾರೆ. ಇದಕ್ಕಾಗಿ ವಕೀಲರು ಲೋಕಾಯುಕ್ತ ತನಿಖಾ ಅಧಿಕಾರಿಗಳು ಉಲ್ಲೇಖಿಸಿರುವ

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಸೇರಿದ 14 ನಿವೇಶನಗಳ ಹಸ್ತಾಂತರದ ಹಿಂದೆ ಹಲವಾರು ಅವ್ಯವಹಾರಗಳು ನಡೆದಿರುವುದಕ್ಕೆ ಸಾಕ್ಷಿಗಳು ಪತ್ತೆಯಾಗಿದೆ ಎಂದು ಇ.ಡಿ(ಜಾರಿ ನಿರ್ದೇಶನಲಯ) ಬಹಿರಂಗಪಡಿಸಿದೆ. ಬೇನಾಮಿ ಹಾಗೂ ಇನ್ನಿತರ ಅವ್ಯವಹಾರಗಳ ಮೂಲಕ 1,098 ನಿವೇಶನಗಳನ್ನು ಆಕ್ರಮವಾಗಿ ಹಂಚಿಕೆ ಮಾಡಲಾಗಿದೆ ಇದರ ಮೌಲ್ಯ ಬರೋಬ್ಬರಿ 700 ಕೋಟಿ ರೂಪಾಯಿ ಎಂದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಹೇಳಿತ್ತು.**



**ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಕೆ**

ಅಂಶಗಳನ್ನು ಅಧ್ಯಯನ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಇ.ಡಿ ಪರ ವಾದ ಮಂಡಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ್ ಕಾಮತ್ ಅವರು, ಈ ಹಿಂದೆ ಲೋಕಾಯುಕ್ತ ತನಿಖಾಧಿಕಾರಿಗಳು ಪ್ರಕರಣವೊಂದೆ ಸಂಬಂಧ ಕ್ಲೀನ್ ಚಿಟ್ ನೀಡಿದ್ದನ್ನು ಪ್ರಶ್ನಿಸಿರುವುದನ್ನು ಉಲ್ಲೇಖ ಮಾಡಿದ್ದಾರೆ. ಹೀಗಾಗಿ ಬರುವ ದಿನಗಳಲ್ಲಿ ಇ.ಡಿ ಅಧಿಕಾರಿಗಳು ಹೈಕೋರ್ಟ್ ಮೆಟ್ಟಿಲೇರುವುದು ಖಚಿತವಾಗಿದೆ. ಮುಖ್ಯಮಂತ್ರಿಗಳ ಪತ್ನಿ 14 ನಿವೇಶನಗಳನ್ನು ಮುಡಾಗೆ ಹಿಂತಿರುಗಿಸಿದ್ದಾರೆ. ಜೆಟ್ ವಿಮಾನದ ವೇಗದಲ್ಲಿ ಆ ಸೈಟ್‌ಗಳನ್ನು ವಾಪಸ್ ಪಡೆಯಲಾಗಿದೆ. ಸಾಮಾನ್ಯ ಜನ ಹೋದರೆ ತಿಂಗಳಾದರೂ ಕೆಲಸ ಆಗುವುದಿಲ್ಲ. ಸಿಎಂ ಪತ್ನಿ ಮನವಿ ಕೊಟ್ಟರೆ ಆ ಕ್ಷಣವೇ ಕೆಲಸವಾಗಿದೆ. ಪ್ರಕರಣ ದಾಖಲಿಸಿದಾಗ 14 ನಿವೇಶನ ಮುಖ್ಯಮಂತ್ರಿಗಳ ಪತ್ನಿ ವಶದಲ್ಲಿತ್ತು. ಅದು ಅಪರಾಧದ ಸಂಪತ್ತಾಗಿರುವುದರಿಂದ ತನಿಖೆ ನಡೆಯಬೇಕಾದ ಅಗತ್ಯವಿದೆ. ಇ.ಡಿ ಸಮನ್ಸ್‌ನಲ್ಲಿ ಯಾವುದೇ ಆರೋಪಗಳನ್ನು ಮಾಡಿಲ್ಲ, ಮಾಹಿತಿಗಾಗಿ ಜಾರಿಗೊಳಿಸಿದೆ. ಲೋಕಾಯುಕ್ತ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿರಬಹುದು. ಆದರೆ ಕೋರ್ಟ್ ಇನ್ನೂ ಬಿ ರಿಪೋರ್ಟ್ ಅಂಗೀಕರಿಸಿಲ್ಲ. ವರದಿ ಪ್ರಶ್ನಿಸಲು ಇಡಿಗೂ ಅಧಿಕಾರವಿದೆ



ಎಂದು ಪೀಠಕ್ಕೆ ವಿವರಿಸಿದ್ದಾರೆ. ಮುಡಾದ 14 ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಹಸ್ತಾಂತರಿಸಿರುವ ಹಿಂದೆ ಹಲವಾರು ಅವ್ಯವಹಾರಗಳು ನಡೆದಿರುವುದಕ್ಕೆ ಹಲವು ಪುರಾವೆಗಳನ್ನು ಜಾರಿ ನಿರ್ದೇಶನಾಲಯ ಪತ್ತೆ ಮಾಡಿದೆ ಎಂದು ಮೂಲಗಳಿಂದ ಮಾಹಿತಿ ದೊರೆತಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉರುಳಾಗಿ ಪರಿಣಮಿಸಿದೆ. ಇನ್ನೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮಾಡಲಾದ ಭೂ ಪರಿವರ್ತನೆಯಲ್ಲಿ ಶಾಸನಬದ್ಧ ಮಾರ್ಗಸೂಚಿಗಳ ಉಲ್ಲಂಘನೆಯಾಗಿದೆ. ಸಾಕ್ಷ್ಯ ತಿರುಚುವಿಕೆಯಲ್ಲಿ ಸಾಕ್ಷಿ ಲಭಿಸಿದೆ. ಕಚೇರಿ ಕಾರ್ಯವಿಧಾನಗಳ ಉಲ್ಲಂಘನೆ, ಅನವಶ್ಯಕ ಒಲವು ತೋರಿರುವುದು, ಪ್ರಭಾವದ ಬಳಕೆ, ಪೋರ್ಜರಿ ಮಾಡಿರುವುದಕ್ಕೆ ಸಾಕ್ಷ್ಯಗಳು ಇ.ಡಿ ತನಿಖೆಯಲ್ಲಿ ಪತ್ತೆಯಾಗಿವೆ ಎಂಬುದನ್ನು ಈ ಹಿಂದೆ ಬಹಿರಂಗಪಡಿಸಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರಿಗೆ ನಿವೇಶನ ಸಿಕ್ಕಾಗ ಅವರ ಪುತ್ರ ಯತೀಂದ್ರ ಮುಡಾ ಮಂಡಳಿಯಲ್ಲಿದ್ದರು. ಪತಿ ಸಿದ್ದರಾಮಯ್ಯ ವಿಪಕ್ಷ ನಾಯಕರಾಗಿದ್ದರು. ಮುಡಾದಿಂದ ಕೆಲವೊಂದು ನಿರ್ಮಾಣ ಕಾಮಗಾರಿ ನಡೆಸುತ್ತಿದ್ದ ಜಾಗವನ್ನೇ ಸಿದ್ದರಾಮಯ್ಯ ಬಾಮೈದ ಮಲ್ಲಿಕಾರ್ಜುನ ಖರೀದಿಸಿದ್ದಾರೆ ಎಂದು ಇ.ಡಿ ತನಿಖೆಯಿಂದ ತಿಳಿದುಬಂದಿದೆ ಎಂಬುದು ತನಿಖಾಧಿಕಾರಿಗಳ ವಾದವಾಗಿದೆ.

## ಬೇಸಿಗೆ ಪರಿಸ್ಥಿತಿ ಎದುರಿಸಲು ಕ್ರಮಕೈಗೊಳ್ಳುವಂತೆ ಒತ್ತಾಯ

• **ಉದಯವಾಹಿನಿ, ಬೆಂಗಳೂರು,**

ಕೂಡಲೇ ಬೇಸಿಗೆಯ ತಿಂಗಳುಗಳಲ್ಲಿ ಎದುರಾಗಬಹುದಾದ ಪರಿಸ್ಥಿತಿಯನ್ನು ಅಂದಾಜಿಸಿ ಕುಡಿಯುವ ನೀರು, ವಿದ್ಯುತ್ ಪೂರೈಕೆಯನ್ನು ರೈತ ಸಮುದಾಯ ಸಂಕಷ್ಟಕ್ಕೆ ಸಿಲುಕದಂತೆ ಎಲ್ಲಾ ರೀತಿಯ ನೆರವು ನೀಡಲು ಸರ್ಕಾರ ಮುಂದಾಗಬೇಕು ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಜನರು ಬವಣೆಯ ಬಲೆಯಲ್ಲಿ ಸಿಲುಕದಂತೆ ಮುಂದಾಲೋಚನೆಯ ಯೋಜನೆಯನ್ನು ಈ



**ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತರ ಕಾಳಜಿಯ ಮಾತು ಹಾಗಿರಲಿ. ರೈತರನ್ನು ಶೋಷಿಸಿದ್ದೇ ಹೆಚ್ಚು. ರೈತರು ಉಪಟಳ, ಉಪದ್ರವ ನಿರಂತರ ಅನುಭವಿಸುತ್ತಲೇ ಇದ್ದಾರೆ. ಇದೀಗ ಗಡಿ ಜಿಲ್ಲೆ ಚಾಮರಾಜನಗರದ ಹನೂರು ತಾಲ್ಲೂಕಿನ ಕೆಲ ಗ್ರಾಮದ ರೈತರು ವಿದ್ಯುತ್ ಅಡಚಣೆಯಿಂದ ರೋಸಿ ಹೋಗಿ ಸೆಸ್ಕ್ ಅಧಿಕಾರಿಗಳಿಗೆ ದಿಗ್ಬಂಧನ ಮಾಡಿ ತಮ್ಮ ಆಕ್ರೋಶಭರಿತ ಆಕ್ರಂದನ ವ್ಯಕ್ತಪಡಿಸಿದ್ದಾರೆ ಎಂದು ಸರ್ಕಾರದ ಗಮನ ಸೆಳೆದಿದ್ದಾರೆ.**

ಕ್ಷಣ ದಿಂದಲೇ ಆರಂಭಿಸುವಂತೆ ಒತ್ತಾಯಿಸಿದ್ದಾರೆ. ಪರಿಸ್ಥಿತಿಯ ಭೀಕರತೆ ನಿಯಂತ್ರಣಕ್ಕೆ ತರಲಾರದಷ್ಟು ಉಲ್ಬಣಿಸುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳದೆ ಹೋದರೆ ಘನಘೋರ ಪರಿಸ್ಥಿತಿ ಬೇಸಿಗೆಯ ನಿರ್ಮಾಣವಾದರೆ ಅದರ ಹೊಣೆಯನ್ನು ಸರ್ಕಾರ ಪರಿಸರದ ಮೇಲೆ ಹೊರಿಸಿ ಕೈ ತೊಳೆದುಕೊಳ್ಳಲು ಸಾಧ್ಯವೇ ಇಲ್ಲ ಎಂದು ಹೇಳಿದ್ದಾರೆ. ಬಿರು ಬೇಸಿಗೆ ತಾಪ ಆರಂಭದಲ್ಲೇ ಜನರನ್ನು ಹೈರಾಣಾಗಿಸುತ್ತಿದೆ, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಯಾವ ಮಟ್ಟಕ್ಕೆ ತಲುಪಬಹುದು ಎಂಬ ಆತಂಕ ಎಲ್ಲರನ್ನೂ ಕಾಡುತ್ತಿದೆ. ಅದರಲ್ಲೂ ಕೃಷಿಕರ ಸ್ಥಿತಿ ಊಹಿಸಲಸಾಧ್ಯ, ಪರಿಸ್ಥಿತಿ ತಲುಪುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

## ಶ್ರೀ ವಸಂತವಲ್ಲಭರಾಯ ಸ್ವಾಮಿಗೆ ಶಯನೋತ್ಸವ

• **ಉದಯವಾಹಿನಿ, ಬೆಂಗಳೂರು**

ಉತ್ತರಹಳ್ಳಿಯ ವಸಂತಪುರದಲ್ಲಿ ಸ್ವಯಂ ವ್ಯಕ್ತವಾಗಿ ಸುಮಾರು 1300ವರ್ಷಗಳಿಂದ ನೆಲೆಸಿರುವ ಶ್ರೀ ವಸಂತವಲ್ಲಭರಾಯ ಸ್ವಾಮಿಗೆ ಶಯನೋತ್ಸವವು ಸುಗಂಧ ಪರಿಮಳಯುಕ್ತ ಮಂಟಪದಲ್ಲಿ ವೈಭವಯುತವಾಗಿ ನಡೆಯಿತು, ತಲಗೆಟ್ಟಪುರ ಮಾಜಿ ಶಾನೋಭೋಗ ದಿವಂಗತ ನಾರಾಯಣ ಮೂರ್ತಿ ಮತ್ತು ಕುಟುಂಬದವರು ಶತಮಾನಗಳಿಂದ ಈ ಸೇವೆಯನ್ನು ಮಾಡಿಕೊಂಡು ಬಂದಿದ್ದು ಟಿ. ಎನ್. ಶಾಂತಕುಮಾರ್ ಮತ್ತು ಕುಟುಂಬದವರು ಅದನ್ನು ಮುಂದುವರಿಕೊಂಡು ಬಂದಿದ್ದು ಅದ್ದೂರಿಯಾಗಿ ಆಚರಿಸಿದರು, ಶ್ರೀಸ್ವಾಮಿಗೆ ಬ್ರಹ್ಮ ರಥೋತ್ಸವ ಹಾಗು ಉತ್ಸಾವಾದಿಗಳು ನಡೆದು ಕೊನೆಗೆ ಸ್ವಾಮಿಗೆ ವಿಶ್ರಾಂತಿಯನ್ನು ನೀಡುವದೇ ಶಯನೋತ್ಸವ ವಾಗಿದೆ, ಪ್ರಧಾನ ಅರ್ಚಕ ರಘುರಾಮ್

**ಶ್ರೀಸ್ವಾಮಿಗೆ ಬ್ರಹ್ಮ ರಥೋತ್ಸವ**



ಉದಯವಾಹಿನಿ ಚಿತ್ರ

ಭಟ್ ಅವರು ಧಾರ್ಮಿಕ ವಿಧಿ ವಿಧಾನಗಳನ್ನು ನೆಡಸಿ ಆರತಿಯನ್ನು ಮಾಡಿ ಚಾಲನೆ ನೀಡಿದರು, ಉತ್ಸವ ದಲ್ಲಿ ಪಾಲ್ಗೊಂಡಿದ್ದ ನೂರಾರು ಭಕ್ತರಿಗೆ ತೀರ್ಥ ಪ್ರಸಾದದ ವ್ಯವಸ್ಥೆಯನ್ನು ಟಿ. ಎನ್. ಶಾಂತಕುಮಾರ್ ಮತ್ತು ಕುಟುಂಬದವರು ಅಚ್ಚುಕಟ್ಟಾಗಿ ಮಾಡಿದ್ದರು, ಈ ಸಂದರ್ಭದಲ್ಲಿ ಜನಾರ್ಧನರಾವ್, ಎನ್. ಕೆ. ರಾಮಚಂದ್ರ ರಾವ್ ಅಕ್ಷಯ ವಿಪ್ರ ಮಹಾಸಭಾದ ಅಧ್ಯಕ್ಷ ರಾಘವೇಂದ್ರ ರಾವ್, ಪ್ರಧಾನ ಕಾರ್ಯದರ್ಶಿ ಎನ್ ಎಸ್ ಸುಧೀಂದ್ರ ರಾವ್, ಲಿಖಿತ ಉದಯಶಂಕರ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

## ಗೃಹಲಕ್ಷ್ಮಿ ಫಲಾನುಭವಿಗಳಿಗೆ ಗುಡ್ ನ್ಯೂಸ್; 3 ತಿಂಗಳ ಹಣ ಬಾಕಿ ಖಾತೆಗೆ

• **ಉದಯವಾಹಿನಿ, ಬೆಂಗಳೂರು,**

ಸಾಲು ಸಾಲು ಟೀಕೆ, ಆಕ್ರೋಶದ ನಂತರ ರಾಜ್ಯ ಸರ್ಕಾರ ಎಚ್ಚೆತ್ತಿದೆ. ಮೂರು ತಿಂಗಳಿಂದ ಬಂದ್ ಆಗಿದ್ದ ಗೃಹಲಕ್ಷ್ಮಿ ಜಮೆ ಪ್ರಕ್ರಿಯೆಗೆ ನಾಳೆ ಮರು ಚಾಲನೆ ಸಿಗಲಿದೆ. ನವೆಂಬರ್ ತಿಂಗಳ ದುಡ್ಡು ಫಲಾನುಭವಿಗಳ ಖಾತೆಗೆ ಜಮೆ ಆಗಲಿದೆ. ಡಿಸೆಂಬರ್ ತಿಂಗಳ ದುಡ್ಡನ್ನು ಮುಂದಿನ ಸೋಮವಾರ ಫಲಾನುಭವಿಗಳ ಖಾತೆಗೆ ಹಾಕುವ ಕೆಲಸ ಆಗಲಿದೆ. ಗೃಹಲಕ್ಷ್ಮಿ




ಹಣ ಸ್ಥಗಿತವಾದ ಬಗ್ಗೆ ' ಸತತವಾಗಿ ವರದಿ ಬಿತ್ತರಿಸಿತ್ತು. ಅಂದ ಹಾಗೇ, ಹಣ ಜಮೆ ಮಾಡುವ ಪ್ರಕ್ರಿಯೆಯನ್ನು ಬದಲಾವಣೆ ಮಾಡಿದ ಕಾರಣ ಸ್ವಲ್ಪ ವಿಳಂಬ ಆಗಿತ್ತು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ ಹೇಳಿಕೊಂಡಿದೆ.

ಇನ್ಮುಂದೆ ಗೃಹಲಕ್ಷ್ಮಿ ಹಣ ತಾಲ್ಲೂಕು ಪಂಚಾಯತ್ ಇಓಗಳ ಮೂಲಕ ಬಿಡುಗಡೆ ಆಗಲಿದೆ.

## ಮಧ್ಯರಾತ್ರಿ ವ್ಹೀಲಿಂಗ್ ಮಾಡಿದ್ದ ಪುಂಡರು ಅರೆಸ್ಟ್



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು,**

ಹಬ್ಬದ ಸಂಭ್ರಮದಲ್ಲಿ ಮಧ್ಯರಾತ್ರಿ ಮಾರಕಾಸ್ತ್ರ ಹಿಡಿದು ವ್ಹೀಲಿಂಗ್ ಮಾಡಿದ್ದ ಪುಂಡರನ್ನು ಪೊಲೀಸರು ಬಂಧಿಸಿದ್ದಾರೆ. ಇದೇ ತಿಂಗಳ 13ರಂದು ಮಧ್ಯರಾತ್ರಿ ಶಬ್ ಎ ಬಾರತ್ ಹಬ್ಬದ ಪ್ರಯುಕ್ತ 25ಕ್ಕೂ ಹೆಚ್ಚು ಮಂದಿ ಕೆಜಿ ಹಳ್ಳಿಯ ನೂರ್ ಮಸೀದಿ ಬಳಿ ಸೇರಿದ್ದರು. ಈ ವೇಳೆ ರೀಲ್ಸ್ ಹುಚ್ಚಿಗಾಗಿ ಅರ್ಫಾತ್, ಸಾಹಿಲ್ ಸೇರಿದಂತೆ ಇನ್ನಿತರರು ಸೇರಿ ವ್ಹೀಲಿಂಗ್ ಪ್ಲ್ಯಾನ್ ಮಾಡಿದ್ದಾರೆ. ಪ್ಲ್ಯಾನ್ ಮಾಡಿದ ಪುಂಡರ ಗ್ಯಾಂಗ್ ಕೆಜಿ ಹಳ್ಳಿಯ ಮೇನ್‌ರೋಡ್‌ನಲ್ಲಿ ತ್ರಿಬಲ್ ರೈಡಿಂಗ್‌ನಲ್ಲಿ ಹೋಗಿದ್ದಾರೆ. ಅಲ್ಲಿಂದ ಹೊಸಕೋಟೆ ಟೋಲ್‌ವರೆಗೂ ಹೋಗಿ ಮತ್ತೆ ಅದೇ ರೀತಿ ಕೆಜಿ ಹಳ್ಳಿಗೆ ವಾಪಸ್ ಆಗಿದ್ದಾರೆ. ಏರಿಯಾಗಳಲ್ಲಿ ರಯಾಶ್ ಡ್ರೈವ್ ಮಾಡ್ತಿದ್ದ ಟೀಂ ಆ ಮಧ್ಯರಾತ್ರಿ ಲಾಂಗ್ ಹಿಡಿದು ವ್ಹೀಲಿಂಗ್ ಮಾಡಿತ್ತು. ಹಬ್ಬದ ಪ್ರಯುಕ್ತ ಪೂರ್ವ ವಿಭಾಗದಲ್ಲಿ ಹೆಚ್ಚು ಪೊಲೀಸರಿಂದ ಬಿಗಿ ಬಂದೋಬಸ್ತ್ ಮಾಡಿಕೊಳ್ಳಲಾಗಿತ್ತು. ಆದರೂ ಕೂಡ ಪುಂಡರ ಗ್ಯಾಂಗ್ ಮಾರಕಾಸ್ತ್ರ ಹಿಡಿದು ರಯಾಶ್ ಡ್ರೈವ್ ಮಾಡಿದ್ದಾರೆ. ಈ ಬಗ್ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ತಮ್ಮ ಫೇಸ್‌ಬುಕ್ ಪೇಜ್‌ನಲ್ಲಿ ಪೋಸ್ಟ್ ಮಾಡಿದ್ದರು.

ಸಾಮಾಜಿಕ ಜಾಲತಾಣದಲ್ಲಿ ಬೆಂಗಳೂರು ಪೊಲೀಸರ ವಿರುದ್ಧ ಟೀಕೆ ವ್ಯಕ್ತವಾಗಿತ್ತು. ಸದ್ಯ ಐದು ಆರೋಪಿಗಳನ್ನು ಬಂಧಿಸಲಾಗಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಪೊಲೀಸ್ ಕಮಿಷನರ್, ಉಳಿದವರಿಗಾಗಿ ಹುಡುಕಾಟ ನಡೆಸುವಂತೆ ಸೂಚನೆ ನೀಡಿದ್ದು, ತನಿಖೆ ಮುಂದುವರೆದಿದೆ. ಡಿಜೆ ಹಳ್ಳಿ ಮತ್ತು ಕೆಜಿ ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಉತ್ತೀರ್ಣಕ್ಕೆ ಕನಿಷ್ಠ 35 ಅಂಕದ ಬದಲು 33ಕ್ಕೆ ಇಳಿಸಿ ಸರ್ಕಾರಕ್ಕೆ ಖಾಸಗಿ ಶಾಲೆಗಳಿಂದ ಒತ್ತಾಯ

• **ಉದಯವಾಹಿನಿ, ಬೆಂಗಳೂರು,**

ಎಸ್‌ಎಸ್‌ಎಲ್‌ಸಿ ಉತ್ತೀರ್ಣಕ್ಕೆ ಕನಿಷ್ಠ 35 ಅಂಕದ ಬದಲು 33ಕ್ಕೆ ಇಳಿಸಿ ಎಂದು ಸರ್ಕಾರಕ್ಕೆ ಖಾಸಗಿ ಶಾಲೆಗಳು ಒತ್ತಾಯ ಮಾಡಿವೆ. ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದ ಖಾಸಗಿ ಶಾಲೆಗಳ ಒಕ್ಕೂಟ ಕನಿಷ್ಠ 35 ಅಂಕಗಳ ಬದಲಾಗಿ ಈ ವರ್ಷದಿಂದಲೇ ಪಾಸ್ ಮಾನದಂಡವನ್ನು 33 ಅಂಕಗಳಿಗೆ ಬದಲಾವಣೆ ಮಾಡುವಂತೆ ಒತ್ತಾಯಿಸಿದೆ.

ಸಿಬಿಎಸ್‌ಸಿ, ಐಸಿಎಸ್‌ಸಿ ಪಠ್ಯಕ್ರಮದಲ್ಲಿ ಪಾಸ್ ಅಂಕ 33 ಇದೆ. ಇದೇ ಮಾದರಿಯಲ್ಲಿ ರಾಜ್ಯ ಪಠ್ಯಕ್ರಮ ಮತ್ತು ಕನ್ನಡ ಮಾಧ್ಯಮ ಶಾಲೆಗಳಲ್ಲಿ 33 ಅಂಕಗಳಿಗೆ ವಿದ್ಯಾರ್ಥಿಗಳನ್ನು ಪಾಸ್ ಮಾಡಬೇಕು ಎಂದು ಹೇಳಿದೆ.

ಈಗಾಗಲೇ 33 ಅಂಕದ ಮಾದರಿ ಜಾರಿಗೆ ಶಿಕ್ಷಣ ಇಲಾಖೆಯ ಜೊತೆ ಖಾಸಗಿ ಶಾಲೆಗಳು ಸಭೆ ಮಾಡಿದ್ದವು. ಆದರೆ ಈವರೆಗೂ ಶಿಕ್ಷಣ ಇಲಾಖೆ ಈ ಪ್ರಸ್ತಾಪವನ್ನು ಪರಿಗಣನೆ ಮಾಡಿರಲಿಲ್ಲ. ಹೀಗಾಗಿ ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದು ಮನವಿ ಮಾಡಿದೆ. ಅಂಕ ಕಡಿತದ ಬಗ್ಗೆ

**ಸರ್ಕಾರಕ್ಕೆ ಖಾಸಗಿ ಶಾಲೆಗಳು ಒತ್ತಾಯ**

### ಖಾಸಗಿ ಶಾಲೆಗಳ ಒತ್ತಾಯಕ್ಕೆ ಕಾರಣ ಏನು!

**10ನೇ ತರಗತಿ ಉತ್ತೀರ್ಣಕ್ಕೆ ಕನಿಷ್ಠ 33 ಅಂಕಗಳು ಸಾಕು ಎಂಬ ನಿಯಮ CBSE, ICSE ಸೇರಿ ವಿವಿಧ ಬೋರ್ಡ್‌ಗಳಲ್ಲಿ ಇದೆ. ಬೇರೆ ಬೋರ್ಡ್‌ನಲ್ಲಿ 100ಕ್ಕೆ ವಿದ್ಯಾರ್ಥಿಗಳು 33 ಅಂಕ ಪಡೆದರೆ ಪಾಸ್ ಆಗುತ್ತಾರೆ. 100 ರಲ್ಲಿ ಇಂಟಲ್ ಅಸೆಸ್ಮೆಂಟ್ ಅಂಕ 20ನ್ನು ಕೇಂದ್ರ ಬೋರ್ಡ್‌ಗಳು ಸಂಪೂರ್ಣವಾಗಿ ಪರಿಗಣಿಸುತ್ತವೆ.**



ಉದಯವಾಹಿನಿ ಚಿತ್ರ

ನಿರ್ಧಾರ ಮಾಡುವಂತೆ ಸಭಾಪತಿ ಬಸವರಾಜ್ ಹೊರಟ್ಟಿ ಸಹ ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದಾರೆ.

ಕೇಂದ್ರದ ಪಠ್ಯ ಕ್ರಮದ ಶಾಲೆಗಳಲ್ಲಿ 33 ಪಾಸ್ ಅಂಕ ಇದ್ದು ರಾಜ್ಯ ಪಠ್ಯದಲ್ಲಿ 35 ಅಂಕ ಇರುವುದು ತಾರತಮ್ಯ ಮಾಡಿದಂತೆ ಆಗುತ್ತದೆ. ರಾಜ್ಯಪಠ್ಯ ಕ್ರಮದಲ್ಲಿ 20 ಇಂಟರ್ನಲ್ ಅಸೆಸ್ಮೆಂಟ್ ಅಂಕಗಳಲ್ಲಿ ಸಂಪೂರ್ಣ ಅಂಕಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ತಾರತಮ್ಯದಿಂದ ಕೇಂದ್ರ ಬೋರ್ಡ್‌ಗಳಲ್ಲಿ ಫಲಿತಾಂಶ ಜಾಸ್ತಿ ಆಗುತ್ತಿದೆ. ಪೋಷಕರು ಕೇಂದ್ರ ಬೋರ್ಡ್ ಇರುವ ಶಾಲೆಗೆ ಮಕ್ಕಳನ್ನ ಸೇರಿಸುತ್ತಿದ್ದಾರೆ. ಹೀಗೆ ಆದರೆ ರಾಜ್ಯಪಠ್ಯ ಕ್ರಮದ ಶಾಲೆಗಳಿಗೆ ಕನ್ನಡಕ್ಕೆ ಅನ್ಯಾಯ ಆಗಲಿದೆ. ಹೀಗಾಗಿ ಕೇಂದ್ರ ಬೋರ್ಡ್ ಮಾದರಿಯಲ್ಲೇ ಎಸ್‌ಎಸ್‌ಎಲ್‌ಸಿ ಪಾಸ್ ಅಂಕ 33ಕ್ಕೆ ಇಳಿಸಬೇಕು.

# ಬೆಂಗಳೂರು 2ನೇ ವಿಮಾನ ನಿಲ್ದಾಣಕ್ಕೆ ಸದ್ದಿಲ್ಲದೆ ರೆಡಿಯಾಯ್ತು

## ಸಂಚಾರ ಮತ್ತು ವಿಮಾನ ಹಾರಾಟ ದಟ್ಟಣೆಯನ್ನು ಗಮನದಲ್ಲಿರಿಸಿಕೊಂಡು ಸ್ಥಳ ಆಯ್ಕೆ

• **ಉದಯವಾಹಿನಿ, ಬೆಂಗಳೂರು,**

ಬಹುನಿರೀಕ್ಷಿತ ಬೆಂಗಳೂರು ಎರಡನೇ ವಿಮಾನ ನಿಲ್ದಾಣ ಎಲ್ಲಿ ಎನ್ನುವ ಪ್ರಶ್ನೆಗೆ ಇನ್ನೂ ಅಧಿಕೃತ ಉತ್ತರ ಸಿಕ್ಕಿಲ್ಲ. ಆದರೆ, ಈ ಏರ್‌ಪೋರ್ಟ್‌ಗಾಗಿ ಈಗಾಗಲೇ ಹಲವು ಸ್ಥಳಗಳನ್ನು ನಿಗದಿ ಮಾಡಲಾಗಿದೆ. ಸರ್ಕಾರ ಕೂಡ ಈಗಾಗಲೇ ಎರಡನೇ ಏರ್‌ಪೋರ್ಟ್ ನಿರ್ಮಾಣಕ್ಕೆ ತುದಿಗಾಲಲ್ಲಿ ನಿಂತಿದ್ದು, ಕೆಲವೇ ದಿನಗಳಲ್ಲಿ ಈ ಬಗ್ಗೆ ಅಧಿಕೃತ ಘೋಷಣೆ ಮಾಡುವುದಾಗಿ ಹೇಳಿದೆ. ಆದರೆ, ಸದ್ದಿಲ್ಲದೆ ಈಗಾಗಲೇ ಎರಡನೇ ಏರ್‌ಪೋರ್ಟ್‌ಗಾಗಿ ರಸ್ತೆ ರೆಡಿಯಾಗಿದೆ.

ಬೆಂಗಳೂರಿನ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸಲು 11 ಕಿ.ಮೀ ಉದ್ದದ ಮೇಜರ್ ಆರ್ಟೀರಿಯಲ್ ರಸ್ತೆ (ಎಂಎಆರ್) ಕಾಮಗಾರಿ ಈಗಾಗಲೇ ಪ್ರಗತಿಯಲ್ಲಿದೆ. ಇದು ಬೆಂಗಳೂರಿನ ಮೊದಲ 10 ಲೇನ್ ರಸ್ತೆಯಾಗಲಿದ್ದು, 300 ಅಡಿ ಅಗಲ ಇರುವ ಈ ರಸ್ತೆ ಬಿಡಿಎ ಕೆಂಪೇಗೌಡ ಲೇಔಟ್ ಮೂಲಕ ಹಾದು ಹೋಗಲಿದೆ. ಸದ್ಯ ಇಲ್ಲಿ ಒತ್ತುವರಿ ತೆರವು ಮಾಡುವ ಕೆಲಸ ಕೂಡ ನಡೆಯುತ್ತಿದ್ದು, ಇನ್ನು ಮೂರೇ ತಿಂಗಳಲ್ಲಿ ಕೆಲಸ ಪೂರ್ಣಗೊಳ್ಳಲಿದೆ. ಈ ರಸ್ತೆಯನ್ನು ಎರಡನೇ ಏರ್‌ಪೋರ್ಟ್ ಉದ್ದೇಶದಿಂದಲೇ ನಿರ್ಮಿಸಲಾಗುತ್ತಿದೆ ಎಂದೂ ಹೇಳಲಾಗಿದೆ.

ಮಾಗಡಿ ರಸ್ತೆ ಹಾಗೂ ಮೈಸೂರು ರಸ್ತೆಯನ್ನು ಸಂಪರ್ಕಿಸುವ ಈ ರಸ್ತೆಗಾಗಿ ಚಲ್ಲಘಟ್ಟ ಬಳಿ ರೈಲ್ವೆ ಕೆಳಸೇತುವೆ ನಿರ್ಮಾಣಕ್ಕೆ

**ಬೆಂಗಳೂರು ಸಮೀಪ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಗೆ ಶೀಘ್ರವೇ ಸ್ಥಳ ಘೋಷಿಸುತ್ತೇವೆ. ವಿಮಾನ ನಿಲ್ದಾಣ ಸ್ಥಾಪನೆಗೆ ಹಲವು ಪ್ರದೇಶಗಳ ಪ್ರಸ್ತಾವನೆ ಬಂದಿತ್ತು. ಅವುಗಳನ್ನು ಪರಿಶೀಲಿಸಲಾಗಿದ್ದು, ಮುಂದಿನ ದಶಕಗಳಲ್ಲಿ ಆಗುವ ಬೆಳವಣಿಗೆ, ಸಂಚಾರ ಮತ್ತು ವಿಮಾನ ಹಾರಾಟ ದಟ್ಟಣೆಯನ್ನು ಗಮನದಲ್ಲಿರಿಸಿಕೊಂಡು ಸ್ಥಳ ಆಯ್ಕೆ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಹೇಳಿದ್ದಾರೆ.**

ರೈಲ್ವೆ ಇಲಾಖೆ ಕೂಡ ಅನುಮೋದನೆ ನೀಡಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 2019ರಲ್ಲೇ ಇದಕ್ಕಾಗಿ ಮನವಿ ಮಾಡಿತ್ತು. ಆಗ ಕೋವಿಡ್ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ಯೋಜನೆ ನಿಧಾನವಾಯಿತು. ಈ ಒಂದರ ವೆಚ್ಚವೇ ಸುಮಾರು 39 ಕೋಟಿ ಎಂದು ವರದಿಯಾಗಿದೆ. ಇದು ಎರಡು ರಸ್ತೆಗಳ ನಡುವೆ ಪ್ರಮುಖ ಸಂಪರ್ಕದ ಹಾದಿಯಾಗಿ ಕಾರ್ಯನಿರ್ವಹಿಸುವುದಲ್ಲದೆ, ಸಂಚಾರ ದಟ್ಟಣೆ ಕೂಡ ಕಡಿಮೆ ಮಾಡಲಿದೆ. ಈ ರಸ್ತೆಯು ಬೆಂಗಳೂರು ಪಶ್ಚಿಮದಿಂದ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಲಿದ್ದು, ಬಿಡದಿ ಅಥವಾ ನೆಲಮಂಗಲದಲ್ಲಿ ನಿರ್ಮಾಣವಾಗಲಿದೆ ಎಂದು ಹೇಳಲಾಗುತ್ತಿರುವ ಬೆಂಗಳೂರು 2ನೇ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸಲು ಇದು ತುಂಬಾ ಅನುಕೂಲವಾಗಲಿದೆ ಎನ್ನಲಾಗಿದೆ. ಮುಖ್ಯವಾಗಿ ಈ ರಸ್ತೆಯು ಪಿಆರ್‌ಆರ್ ಅನ್ನು ಕೂಡ ಸಂಪರ್ಕಿಸಲಿದ್ದು, ಬೆಂಗಳೂರಿನ ವಾಹನ ದಟ್ಟಣೆ ತಪ್ಪಿಸುವಲ್ಲಿ ಈ ರಸ್ತೆ ಗೇಮ್ ಚೇಂಜರ್ ಎಂದು ಹೇಳಲಾಗಿದೆ. ಈ ರೈಲ್ವೆ ಕೆಳಸೇತುವೆ (ಆರ್‌ಯುಬಿ) ನಿರ್ಮಾಣದ ಟೆಂಡರ್ ಪಡೆದು ಖಾಸಗಿ ಕಂಪನಿ ಕಾಮಗಾರಿ ಪ್ರಗತಿಯಲ್ಲಿದೆ. ಈ ಯೋಜನೆಯು ಮೇಜರ್ ಆರ್ಟರಿಯಲ್ ರಸ್ತೆಯಲ್ಲಿ (ಎಂಎಆರ್) ಬಿಎಂಆರ್‌ಸಿಎಲ್‌ನಿಂದ ನಿರ್ಮಾಣ ಹಂತದಲ್ಲಿರುವ ಮೆಟ್ರೋ ಮಾರ್ಗದೊಂದಿಗೆ ಲಿಂಕ್ ಆಗಲಿದೆ. ಇದು ನಾಲ್ಕು ಲೇನ್‌ಗಳಲ್ಲಿ ವ್ಯಾಪಿಸಲಿದ್ದು, ಈ ಟೋಲ್ ಫ್ರೀ ರಸ್ತೆಯ ಕಾಮಗಾರಿ ಶೀಘ್ರದಲ್ಲೇ ಪೂರ್ಣಗೊಳಿಸುವುದಾಗಿ ಬಿಡಿಎ ಅಧಿಕಾರಿಗಳು ಸಹ ಹೇಳಿದ್ದಾರೆ. ಸುಮಾರು 450 ಕೋಟಿ ರೂಪಾಯಿ ವೆಚ್ಚದಲ್ಲಿ 10.75 ಕಿ.ಮೀ ಉದ್ದದ ಎಂಎಆರ್ ಯೋಜನೆಯ ರಸ್ತೆಯು 100 ಮೀಟರ್ ಅಗಲ ಮತ್ತು 8 ಲೇನ್‌ಗಳನ್ನು ಹೊಂದಿರಲಿದೆ. ಅಲ್ಲದೆ ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಲ್ಲ 9 ಬ್ಲಾಕ್‌ಗಳನ್ನೂ ಸಂಪರ್ಕಿಸಲಿದ್ದು, ದೂರದೃಷ್ಟಿಯ ಹಿನ್ನೆಲೆ ಈ ರಸ್ತೆಯನ್ನು ಸಿದ್ಧಪಡಿಸಲಾಗುತ್ತಿದೆ.

ಬಹುತೇಕ ಈ ರಸ್ತೆಯು ಬೆಂಗಳೂರು ಎರಡನೇ ವಿಮಾನ ನಿಲ್ದಾಣಕ್ಕೆ ಸಂಪರ್ಕ ಸುಲಭವಾಗಲಿ ಎಂಬ ಕಾರಣಕ್ಕೆ ನಿರ್ಮಿಸಲಾಗುತ್ತಿದೆ ಎಂದು ಹೇಳಲಾಗಿದ್ದು, ಈ ಬಗ್ಗೆ ಅಧಿಕೃತ ಘೋಷಣೆಯಷ್ಟೇ ಬಾಕಿ ಇದೆ.

**ವಿಮಾನ ನಿಲ್ದಾಣ ಸ್ಥಾಪನೆ**



ಅಂತರಾಳದಿಂದ.. EDITORIAL

# ಕುಂಭಮೇಳ ಯಾತ್ರಿಕರ ನಂಬಿಕೆಗೆ ದ್ರೋಹ

ನೂರು ಬಾರಿ ಗಂಗೆಯಲ್ಲಿ ಮುಳುಗಿದರೂ ಶುದ್ಧಿಯಾಗದ ಪಾಪ ಮತ್ತು ಅಕ್ರಮಗಳಿಗಾಗಿ ಉತ್ತರ ಪ್ರದೇಶ ಸರಕಾರ ಗುರುತಿಸಿಕೊಂಡಿದೆ. ವಿಶ್ವದ ಗಮನವನ್ನು ಸೆಳೆದಿರುವ ಬೃಹತ್ ಕುಂಭಮೇಳಕ್ಕೆ ಬಂದು ಸೇರಿರುವ ಕೋಟ್ಯಂತರ ಭಕ್ತರು ಉತ್ತರ ಪ್ರದೇಶ ಸರಕಾರ ಮತ್ತು ಮುಖ್ಯಮಂತ್ರಿ ಆದಿತ್ಯನಾಥ್ ಅವರ ಬೇಜವಾಬ್ದಾರಿಗೆ ಭಾರೀ ಬೆಲೆ ತೆರುತ್ತಿದ್ದಾರೆ. ಮಹಾಕುಂಭಮೇಳ ನಡೆಯುತ್ತಿರುವ ಉತ್ತರಪ್ರದೇಶದ ಪ್ರಯಾಗ ರಾಜ್‌ನ ನದಿಯ ನೀರಿನಲ್ಲಿ ಮಾನವ ಮತ್ತು ಪ್ರಾಣಿಗಳ ಮಲದಲ್ಲಿ ಕಂಡು ಬರುವ ಕೋಲಿಫಾರ್ಮ್ ಬ್ಯಾಕ್ಟಿರಿಯಾಗಳ ಮಟ್ಟ ಅತ್ಯಧಿಕವಾಗಿದ್ದು ಇದು ಕುಡಿಯುವುದಕ್ಕಾಗಲಿ, ಸ್ನಾನ ಮಾಡುವುದಕ್ಕಾಗಲಿ ಯೋಗ್ಯವಾದ ನೀರು ಅಲ್ಲ ಎನ್ನುವುದನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಸಲ್ಲಿಸಿದೆ. ಇದು ಯಾವುದೋ ರಾಜಕಾರಣಿ ಬಾಯಿ ಮಾತಿನಲ್ಲಿ ಮಾಡಿದ ಆರೋಪವಲ್ಲ. ಕುಂಭಮೇಳ ಆರಂಭವಾಗುತ್ತಿರುವ ಸಂದರ್ಭದಲ್ಲೇ ಅಂದರೆ ಜನವರಿ ಮೊದಲವಾರದಲ್ಲಿ ಗಂಗಾನದಿಯ ನೀರಿನ ಸ್ಯಾಂಪಲನ್ನು ಪಡೆದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪರೀಕ್ಷೆ ನಡೆಸಿ ನೀಡಿದ ವರದಿಯಾಗಿದೆ. ಈ ಮಂಡಳಿ ಕೇಂದ್ರ ಸರಕಾರದ ವ್ಯಾಪ್ತಿಯಲ್ಲೇ ಬರುವುದರಿಂದ, ಉತ್ತರ ಪ್ರದೇಶ ಸರಕಾರ ಇದನ್ನು ವಿರೋಧ ಪಕ್ಷದ ಸಂಚು ಎಂದು ಆರೋಪಿಸಿ ತಳ್ಳಿ ಹಾಕುವಂತೆಯೂ ಇಲ್ಲ. ಕೇಂದ್ರ ಸರಕಾರವನ್ನು ಟೀಕಿಸಿ ತನ್ನ ಮಾನವನ್ನು ಉಳಿಸಿಕೊಳ್ಳುವಂತೆಯೂ ಇಲ್ಲ. ಇಲ್ಲಿ ಸರಕಾರ ಎರಡು ಗಂಭೀರ ಆರೋಪವನ್ನು ಎದುರಿಸುತ್ತಿದೆ. ಒಂದು, ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿ ಗಂಗೆಯನ್ನು ಶುದ್ಧಿ ಮಾಡಿದ ಬಳಿಕವೂ ಗಂಗೆಗೆ ಈ ಸ್ಥಿತಿಯನ್ನು ಆದಿತ್ಯನಾಥ್ ಸರಕಾರ ಯಾಕೆ ತಂದಿಟ್ಟಿತು ಎನ್ನುವ ಪ್ರಶ್ನೆಗೆ ಅಲ್ಲಿನ ಸರಕಾರ ಉತ್ತರಿಸಬೇಕಾಗಿದೆ. ಹಾಗೆಯೇ, ಗಂಗಾನದಿಯ ನೀರು ಇಷ್ಟರಮಟ್ಟಿಗೆ ಕೆಟ್ಟು ಹೋಗಿದ್ದರೂ ಅದು ಉತ್ತರ ಪ್ರದೇಶ ಸರಕಾರದ ಗಮನಕ್ಕೆ ಯಾಕೆ ಬರಲಿಲ್ಲ ಅಥವಾ ಗಮನಕ್ಕೆ ಬಂದಿದ್ದರೂ, ವಾಸ್ತವವನ್ನು ಅದು ಮುಚ್ಚಿಟ್ಟಿತೆ ಕುಂಭಮೇಳದಲ್ಲಿ ಕೋಟ್ಯಂತರ ಜನರು ಬಂದು ಸ್ನಾನ ಮಾಡುತ್ತಾರೆ ಮತ್ತು ನೀರನ್ನು ಸೇವಿಸುತ್ತಾರೆ ಎನ್ನುವುದು ಗೊತ್ತಿರುವಾಗ, ಜನರಿಗೆ ಮುನ್ನೆಚ್ಚರಿಕೆಯನ್ನು ಸರಕಾರ ಯಾಕೆ ನೀಡಲಿಲ್ಲ ಕನಿಷ್ಠ ಈ ಬಗ್ಗೆ ಎಚ್ಚರಿಕೆಯನ್ನು ನೀಡಿ, ನಿಮ್ಮ ಆರೋಗ್ಯಕ್ಕೆ ನೀವೇ ಹೊಣೆ ಎಂಬ ಪ್ರಕಟಣೆಯನ್ನು ಸರಕಾರ ಅಧಿಕೃತವಾಗಿ ನೀಡಬಹುದಿತ್ತಲ್ಲ ಎನ್ನುವ ಪ್ರಶ್ನೆಯನ್ನು ಪರಿಸರ ತಜ್ಞರು ಮತ್ತು ಮೇಳದಲ್ಲಿ ಭಾಗವಹಿಸಿದ ಯಾತ್ರಾರ್ಥಿಗಳು ಕೇಳುತ್ತಿದ್ದಾರೆ. ಕನಿಷ್ಠ ಯಾತ್ರಾರ್ಥಿಗಳಿಗೆ ಸ್ನಾನ ಮಾಡುವುದಕ್ಕೆ ಮತ್ತು ಕುಡಿಯುವುದಕ್ಕಾಗಿ ಪ್ರತ್ಯೇಕವಾಗಿ ನೀರನ್ನು ಪೈಪ್‌ನಲ್ಲಿ ಹರಿಸುವ ವ್ಯವಸ್ಥೆಯನ್ನು ಮಾಡಬಹುದಿತ್ತು ಎಂದೂ ಕೆಲವರು ಅಭಿಪ್ರಾಯ ಪಡುತ್ತಿದ್ದಾರೆ. ಯೇ ಮುಖ್ಯಮಂತ್ರಿ, ಆದಿತ್ಯನಾಥ್ ಈ ವರದಿಯು ಕೋಟ್ಯಂತರ ಜನರ ನಂಬಿಕೆಯೊಂದಿಗೆ ಆಟವಾಡಿದಂತೆ.

**ಸ್ವಾಮೀಜಿಗಳು, ಸಂತರು ಕೂಡ ಸರಕಾರದ ಬೇಜವಾರಿಗಾಗಿ ಟೀಕೆಗಳನ್ನು ಮಾಡುತ್ತಿದ್ದಾರೆ. ಜ್ಯೋತಿಷ್ ಪೀಠದ ಶಂಕರಾಚಾರ್ಯ ಸ್ವಾಮಿ ಅವಿಮುಕೇಶ್ವರಾನಂದ ಸರಸ್ವತಿ ಅವರು ಮಾತನಾಡಿ, ಕುಂಭಮೇಳ ಆರಂಭವಾಗುವುದಕ್ಕಿಂತ ಮುನ್ನವೇ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಗಂಗಾ ಹಾಗೂ ಯಮುನಾ ನದಿಯ ನೀರು ಸ್ನಾನಕ್ಕೆ ಯೋಗ್ಯವಾಗಿಲ್ಲ ಎಂದು ಹೇಳಿತ್ತು ಅದು ನಿರ್ದಿಷ್ಟ ನಿರ್ದೇಶನಗಳನ್ನು ನೀಡಿತ್ತು. ಮುಖ್ಯವಾಗಿ ಚರಂಡಿ ನೀರು ನದಿಗೆ ಹರಿಯುವುದನ್ನು ತಡೆಗಟ್ಟುವಂತೆ ಸೂಚಿಸಿತ್ತು. ಆದರೆ ಉತ್ತರ ಪ್ರದೇಶ ಸರಕಾರ ಇವೆಲ್ಲವನ್ನೂ ನಿರ್ಲಕ್ಷಿಸಿದೆ ಎಂದು ಆರೋಪಿಸಿದ್ದಾರೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯು ಬಹಿರಂಗವಾಗುತ್ತಿದ್ದಂತೆ**

ಸಂಗಮದ ನೀರು ಸ್ನಾನಕ್ಕೆ ಮಾತ್ರವಲ್ಲ, ಕುಡಿಯಲೂ ಯೋಗ್ಯವಾಗಿದೆ. ಮಹಾಕುಂಭದ ಹೆಸರು ಕೆಡಿಸಲು ಅಪಪ್ರಚಾರ ಅಭಿಯಾನವೊಂದು ನಡೆಯುತ್ತಿದೆ ಎಂದು ಹೇಳಿಕೆ ನೀಡಿ ಮುಖ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನಿಜಕ್ಕೂ ಭಕ್ತರ ಭಾವನೆಗಳೊಂದಿಗೆ ಆಟವಾಡುತ್ತಿರುವವರು ಯಾರು ವರದಿ ಕೊಟ್ಟಿರುವುದು ಮಾಲಿನ್ಯ ನಿಯಂತ್ರಣ ಮಂಡಳಿಯಾಗಿರುವುದರಿಂದ ಕೇಂದ್ರ ಸರಕಾರ ಗಂಗಾನದಿಯ ನೀರಿನ ಬಗ್ಗೆ ಅಪಪ್ರಚಾರ ನಡೆಸುತ್ತಿದೆ ಎಂದು ಅವರು ಆರೋಪಿಸುತ್ತಿದ್ದಾರೆಯೆ ತನ್ನದೇ ಸರಕಾರದ ವ್ಯಾಪ್ತಿಯಲ್ಲಿರುವ ಮಾಲಿನ್ಯ ನಿಯಂತ್ರಣ ಮಂಡಳಿಯ ವಿಶ್ವಾಸಾರ್ಹತೆಯನ್ನು ಅವರು ಅನುಮಾನಿಸುತ್ತಿದ್ದಾರೆಯೆ ಸರಕಾರದ ಮಾನ ಉಳಿಸಿಕೊಳ್ಳಬೇಕು ಎನ್ನುವ ಏಕೈಕ ಉದ್ದೇಶದಿಂದ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ ನೀಡಿದ ಬಳಿಕವೂ 'ನೀರಿನ ಗುಣಮಟ್ಟ ಚೆನ್ನಾಗಿದೆ. ಸ್ನಾನವೂ ಮಾಡಬಹುದು, ಕುಡಿಯುವುದಕ್ಕೂ ಅಡ್ಡಿಯಿಲ್ಲ ಎಂಬ ಹೇಳಿಕೆಯನ್ನು ಅದಿತ್ಯನಾಥ್ ಯಾವ ಆಧಾರದಲ್ಲಿ ನೀಡಿದರು ಮಾಲಿನ್ಯ ನಿಯಂತ್ರಣ ಮಂಡಳಿಯ ಬದಲಿಗೆ ಇನ್ನಾವುದಾದರೂ ತಜ್ಞರಿಂದ ಅವರು ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಿದ್ದರೆ ಅರ್ಹ ತಜ್ಞರಿಂದ ಪರೀಕ್ಷೆಗೊಳಪಟ್ಟು ವರದಿ ಬಂದ ಬಳಿಕವೂ ವರದಿಯನ್ನು ನಂಬಬೇಡಿ.

ನೀರಿನ ಗುಣಮಟ್ಟ ಚೆನ್ನಾಗಿಯೇ ಇದೆ ಎಂದು ಮುಖ್ಯಮಂತ್ರಿ ಕರೆ ನೀಡಿ, ಕುಂಭಮೇಳಕ್ಕೆ ಸೇರಿದ ಕೋಟ್ಯಂತರ ಹಿಂದೂಗಳ ದಾರಿ ತಪ್ಪಿಸುತ್ತಾರೆ ಎನ್ನುವುದು ಜನದ್ರೋಹದ ಕೃತ್ಯವಲ್ಲವೆ ಇವರ ವಿರುದ್ಧ ನ್ಯಾಯಾಲಯ ಸ್ವಯಂ ಪ್ರಕರಣ ದಾಖಲಿಸುವುದು ಅತ್ಯಗತ್ಯವಾಗಿದೆ.ಗಂಗಾನದಿಯ ನೀರು ಅಶುದ್ಧಗೊಂಡಿರುವುದು ಹೊಸ ವಿಷಯವೇನೂ ಅಲ್ಲ ಪ್ರಧಾನಿ ನರೇಂದ್ರ ಮೋದಿಯವರು ಪ್ರಧಾನಿಯಾದ ಆರಂಭದಲ್ಲಿ ಮೊದಲು ಚಾಲನೆ ನೀಡಿದ್ದೇ ನಮಾಮಿ ಗಂಗೆ' ಯೋಜನೆಗೆ ಈ ಮೂಲಕ ಗಂಗಾನದಿಯ ಶುದ್ಧೀಕರಣಕ್ಕೆ 2015ರಿಂದ 2021ರವರೆಗೆ ಆರಂಭದಲ್ಲಿ ಈ ಯೋಜನೆಗೆ 20,000 ಕೋಟಿ ರೂಪಾಯಿಯನ್ನು ಮೀಸಲಿಡಲಾಗಿತ್ತು ಆದರೆ ಶುದ್ಧಗೊಳಿಸುವ ಗುರಿ ಮುಟ್ಟದೇ ಇದ್ದಾಗ 22,500 ಕೋಟಿ ರೂಪಾಯಿ ಅನುದಾನವನ್ನು ನೀಡಲಾಯಿತು. ಮಾತ್ರವಲ್ಲ ಯೋಜನೆಯನ್ನು 2026ರವರೆಗೆ ವಿಸ್ತರಿಸಲಾಯಿತು. ಗಂಗಾನದಿ ಶುದ್ಧೀಕರಣಕ್ಕಾಗಿ 484 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 302 ಕಾಮಗಾರಿಗಳು ಪೂರ್ತಿಯಾಗಿವೆ ಎಂದು ಸರಕಾರದ ಪ್ರಕಟಣೆ ತಿಳಿಸಿದೆ.



## ರಾಮಾಯಣ

### ದಶರಥ ಕೈಕೇಯಾದೇವಿಯರ ಸಂವಾದ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ


ಲೋಕದಲ್ಲಿ ಸ್ತ್ರೀಯರು ತಮ್ಮ ಹಿತಾರ್ಥವಾಗಿಯೇ ಪರರಿಗೆ ಹಿತವನ್ನು ಬಯಸುವರಲ್ಲದೆ ಪರರ ಹಿತಾರ್ಥವಾಗಿ ಬಯಸುವುದಿಲ್ಲ ! ನಿನ್ನ ಕಾರ್ಯಾರ್ಥವಾಗಿ ನಮಗೆ ಉಪದ್ರವವನ್ನೆಣಿಸಿದ ಪಾಪಸ್ವರೂವಳಾದ ಕೈಕೇಯಿ ಕೇಳು: ನೀನು ನನಗೆ ದುಃಖವನ್ನುಂಟುಮಾಡುವುದಕ್ಕೋಸ್ಕರ ಇಂಥ ದುರ್ಬುದ್ಧಿಯನ್ನಿರಿಸಿದೆ. ನಿನಗೆ ನಾನು ಮಾಡಿದ ಅಪರಾಧ ವೇನು ಶ್ರೀರಾಮನಾದರೂ ನಿನಗವರಾಧವನ್ನು ಮಾಡಿದನೇ ನಮ್ಮಿಬ್ಬರಿಗೂ ಯಾವಕಾರಣ ಬಾಧೆಯನ್ನುಂಟುಮಾಡುತ್ತೀಯೆ ಈಗ ನಾನು ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಿದರೆ ಪಟ್ಟಾಭಿಷೇಕನಿಮಿತ್ತವಾಗಿ ಮಂಗಲಸ್ನಾನವನ್ನು ಮಾಡಿ ಸರ್ವಾಭರಣಭೂಷಿತನಾಗಿ ಆನೆಯಮೇಲೆ ಮರವಣಿಗೆ ಬರುತ್ತಿದ್ದ ಶ್ರೀರಾಮನಿಗೆ ಕಾಲುನಡೆಯಿಂದ ವನಕ್ಕೆ ಹೋಗುವ ಅವಸ್ಥೆಯು ಬಂದಿತಲ್ಲ ಎಂದು ಸಕಲರೂ ವ್ಯಥೆಪಡುವರು, ಸೂರ್ಯನ ಪ್ರಭೆಯಿಲ್ಲದಿದ್ದರೂ ಮನುಷ್ಯರ ವ್ಯಾಪಾರಗಳು ನಡೆಯುವುವು. ದೇವೇಂದ್ರನು ಮಳೆಯನ್ನು ಕರೆಯದಿದ್ದರೂ ಭೋಜನಾದಿ ವ್ಯಾಪಾರಗಳು ನಡೆಯುವುವು. ಶ್ರೀರಾಮನಿಲ್ಲದಿದ್ದರೆ ನಾನು ಒಂದು ಕ್ಷಣವಾದರೂ ಜೀವಿಸಿರ ಲಾರೆನು. ಸರ್ಪವನ್ನು ಹಿತವಾದದ್ದೆಂದು ನಂಬಿ ರಕ್ಷಿಸಿದಹಾಗೆ ನಾನು ನಿನ್ನನ್ನು ಹಿತಳಾದ ಸ್ತ್ರೀಯೆಂದು ನಂಬಿ ಅಜ್ಞಾನದಿಂದ ಪಾಲಿಸಿಕೊಂಡಿದ್ದೆನು! ಎಲೈ ಕೈಕೇಯಿ, ನನ್ನನ್ನೂ ರಾಮಲಕ್ಷ್ಮಣರನ್ನೂ ಬಿಟ್ಟು ನೀನು ನಿನ್ನ ಮಗನಾದ ಭರತನನ್ನೂ ಸಮಸ್ತ ಬಂಧುಗಳನ್ನೂ ಮಿತ್ರರನ್ನೂ ಕೂಡಿಕೊಂಡು ಸಕಲ ರಾಜ್ಯವನ್ನೂ ಪರಿಪಾಲಿಸಿಕೊಂಡಿರು. ನೀನು, ಮಹಾದುಷ್ಟಳು. ನನಗೆ ಕರ್ಣಕಠೋರವಾದ ನುಡಿಗಳಿಂದ ದುಃಖವನ್ನುಂಟುಮಾಡುತ್ತಿದ್ದೀಯ, ನಿನ್ನ ದಂತಗಳು ಉದುರುವ ಪರ್ಯಂತ ನಿಷ್ಠುರವನ್ನು ನುಡಿದರೂ ಶ್ರೀರಾಮನು ಅಪ್ರಿಯವೆಂದೆಣಿಸಿ ನಿನಗೆ ವಿಷ್ಣುರವಾಕ್ಯದಿಂದ ಪ್ರತ್ಯುತ್ತರವನ್ನು ಕೊಡನು. ಅಂಥವನಲ್ಲಿ ಅವಗುಣಗಳನ್ನು ಕಲ್ಪಿಸುವ ರೀತಿಯಲ್ಲಿ ನುಡಿಯುತ್ತಿ ದ್ದೀಯೆ. ಆತನಲ್ಲಿ ದೋಷವಿಲ್ಲದಿದ್ದರೂ ವನವಾಸಕ್ಕೆ ಕಳುಹಿಸಬೇಕೆಂದು ನೀನು ಮನಸ್ಸಿನಲ್ಲಿ ನಿಶ್ಚಯಮಾಡಿದೆಯಾದರೆ ನೀನು ಭೂಮಿಯಮೇಲೆ ಹೊರಳಿ ಕಂಗೆಟ್ಟರೂ ಉರಿದೆದ್ದು ಬಿದ್ದರೂ ಕಡೆಗೆ ಶರೀರವನ್ನು ತುಂಡಾಗಿ ಕತ್ತರಿಸಿಕೊಂಡರೂ ನಿನ್ನ ದುರಾಲೋಚನೆಗೆ ಒಳಪಟ್ಟು ಶ್ರೀರಾಮನನ್ನು ನಾನು ವನವಾಸಕ್ಕೆ ಕಳುಹಿಸುವುದಿಲ್ಲ. ನೀನು ಅಲಗಿಗೆ ಸಮಾನಳಾಗಿ ಹೃದಯವನ್ನು ಸೀಳುವ ಮಾತುಗಳನ್ನು ನುಡಿದು ನನಗೆ ಅತಿದುಃಖವನ್ನುಂಟುಮಾಡುತ್ತಿದ್ದೀಯೆ. ನೀನು ಜೀವದಿಂದಿರುವುದೇ ನನ್ನ ಮನಸ್ಸಿಗೆ ಸಮ್ಮತವಿಲ್ಲ. ನನ್ನ ವಂಶೋದ್ಧಾರಕನಾದ ಶ್ರೀರಾಮನಿಲ್ಲದೆ ನನಗೆ ಜೀವನವೆತ್ತಣದು ! ಇಹ ಪರಲೋಕಗಳಲ್ಲಿ ಸುಖವೆತ್ತಣದು ! ನಿನ್ನ ಪಾದಗಳಿಗೆ ನಮಸ್ಕಾರ ವನ್ನಾದರೂ ಮಾಡುತ್ತೇನೆ. ನೀನು ನನಗೆ ಪ್ರಸನ್ನಳಾಗು. ಈ ದುರ್ಬುದ್ಧಿಯನ್ನು ಬಿಡು ಎಂದು ಅನಾಥನಂತೆ ಗೋಳಾಡುತ್ತಾ ಕೈಕೇಯಿಯು ಪಕ್ಕಕ್ಕೆ ನೀಡಿದ್ದ ಕಾಲುಗಳೆರಡಕ್ಕೂ ಅಡ್ಡಬೀಳಲು ಯತ್ನಿಸಿ ವ್ಯಾಧಿಗ್ರಸ್ತನಂತೆ ಅವುಗಳನ್ನು ಮುಟ್ಟುವ ಮೊದಲೇ ನೆಲಕ್ಕುರುಳಿದನು.

ಮುಂದುವರಿಯುವುದು...

# ಲೇಖನ ವಿಹಾರ



☛ ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ




ಲೇಖನ ವಿಹಾರ ಇದು ನಿವೃತ್ತ ಪ್ರಾಚಾರ್ಯರಾದ ಎಸ್ ಕುಮಾರಸ್ವಾಮಿ(ಶಿಕು) ಅವರ ಕೃತಿ. ಈ ಕೃತಿಯಲ್ಲಿ ಲೇಖಕರು ತಮ್ಮ ಜೀವನದಲ್ಲಿ ನೀಡಿರುವ ಉಪನ್ಯಾಸಗಳು ಹಾಗೂ ಪತ್ರಿಕೆ ಗಳಲ್ಲಿ ಪ್ರಕಟಣೆ ಯಾಗಿರುವ ಲೇಖನಗಳನ್ನು ಒಂದು ಸಂಕಲನವಾಗಿ ಮಾಡಿ ಪುಸ್ತಕರೂಪದಲ್ಲಿ ತಂದಿದ್ದಾರೆ.

ರಕ್ಷೆಯ ಪ್ರಕಾಶನವು ಈ ಪುಸ್ತಕವನ್ನು ಪ್ರಕಟಣೆ ಮಾಡಿದೆ. ಮೈಸೂರು ವಿಶ್ವವಿದ್ಯಾಲಯದ ಡಾ. ಬಾಬು ಜಗಜೀವನ್ ರಾವ್ ಅಧ್ಯಯನಪೀಠದ ನಿವೃತ್ತ ನಿರ್ದೇಶಕರಾದ ಡಾ. ಮೈಲಹಳ್ಳಿ ರೇವಣ್ಣ ರವರು ಈ ಕೃತಿಗೆ ಮುನ್ನುಡಿಯನ್ನು ಬರೆದಿದ್ದಾರೆ.

**ಕೃತಿಯಲ್ಲಿರುವ ಮಾಹಿತಿಗಳು:-** ಮಲೆನಾಡು ಸ್ಥಳನಾಮಗಳು, ಹರಿಹರ ಕವಿಯ ಭಕ್ತಿ ತರಂಗ, ಜಮಖಂಡಿ ರಂಗಭೂಮಿ ಸಾಧಕರು, ಚೆನ್ನಬಸವನಾಯಕ : ಒಂದು ಆಲೋಚನೆ, ಕನ್ನಡ ಚುಟುಕು ಹೆಜ್ಜೆಗುರುತು, ಕನ್ನಡ ವಚನ ಸಂಸ್ಕೃತಿ, ಹರಿಹರಪುರ ಸಾಹಿತ್ಯ ಸಮ್ಮೇಳನದ ನುಡಿ ಹಾಗೂ ಕೃಷ್ಣರಾಜಪೇಟೆ ಸಹಕಾರ ದೀಪ : ಎಸ್. ಎಂ. ಲಿಂಗಪ್ಪ ಸೇರಿ ಎಂಟು ಲೇಖನಗಳು ಈ ಕೃತಿಯಲ್ಲಿ ಪ್ರಕಟಗೊಂಡಿದೆ.

ಈ ಕೃತಿಯ ಲೇಖಕರಾದ ಶ್ರೀ ಕುಮಾರಸ್ವಾಮಿ ರವರು ತಮ್ಮ ವೃತ್ತಿಜೀವನದ ಕೆಲವೊಂದು ಬರೆದ ಲೇಖನಗಳನ್ನು ಸಂಗ್ರಹ ಮಾಡಿಕೊಂಡು ಒಂದು ಸುಂದರ ಕೃತಿಯಾಗಿ ಮಾಡಿದ್ದಾರೆ. ಲೇಖಕರು ಕನ್ನಡ ಉಪನ್ಯಾಸಕರಾಗಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸೇವೆಸಲ್ಲಿಸುತ್ತಿರುವ ಸಂದರ್ಭದಲ್ಲಿ ಮಲೆನಾಡಿನ ಸೌಂದರ್ಯವನ್ನು ಸವಿದು ತನ್ನದೇ ಆದ ಅನುಭವವನ್ನು ಮಲೆನಾಡು ಸ್ಥಳನಾಮಗಳು ಎಂಬ ಲೇಖನದಲ್ಲಿ ಸುಂದರವಾಗಿ ಕೊಂಡಿ ಕಳಚಿದ ಹಾಗೆ ಬರೆದಿದ್ದಾರೆ. ಮಂಡ್ಯ ಜಿಲ್ಲೆಯ ಪಾಂಡುಪುರ ತಾಲ್ಲೂಕಿನ ಬೇಬಿ ಬೆಟ್ಟದಲ್ಲಿ 25-10-2013 ರಂದು ಜರುಗಿದ ಶರಣ ವಿಚಾರ ಚಿಂತನ ಗೋಷ್ಠಿಯಲ್ಲಿ ಹರಿಹರ ಕವಿಯ ಭಕ್ತಿತರಂಗ ಎಂಬ ಪ್ರಬಂಧವನ್ನು ಮಂಡನೆ ಮಾಡಿದ್ದರು ಪ್ರಬಂಧದಲ್ಲಿ ಹರಿಹರನ ಭಕ್ತಿಯನ್ನು ತನ್ನದೇ ಆದ ಶೈಲಿಯಲ್ಲಿ ಲೇಖಕರು ಇಲ್ಲಿ ಬರೆದಿದ್ದಾರೆ. ಜಮಖಂಡಿ ರಂಗಭೂಮಿಯ ಸಾಧಕರನ್ನು ಈ ಕೃತಿಯಲ್ಲಿ ಪರಿಚಯ ಲೇಖನವನ್ನು ಲೇಖಕರು ಮಾಡಿದ್ದಾರೆ.

**ಹರಿಹರ ಕವಿಯ ಭಕ್ತಿ ತರಂಗ**

ತೀರ್ಥಹಳ್ಳಿ ತಾಲ್ಲೂಕಿನ ಚುಟುಕು ಸಾಹಿತ್ಯ ಪರಿಷತ್ತು ದಿನಾಂಕ 24-01-2014ರಂದು ಏರ್ಪಡಿಸಿದ್ದ ಚುಟುಕುಯಾನ ಕವಿಗೋಷ್ಠಿಯಲ್ಲಿ ಕವಿಗಳು ವಾಚಿಸಿದ್ದ ಚುಟುಕುಗಳನ್ನು ಹಾಗೂ ಮಾಸ್ತಿಯವರ ಐತಿಹಾಸಿಕ ಕಾದಂಬರಿ ಚೆನ್ನಬಸವನಾಯಕ ತಮ್ಮದೇ ಆದ ಶೈಲಿಯಲ್ಲಿ ವಿಮರ್ಶೆ ಮಾಡಿ ಸುಂದರ ಲೇಖನವನ್ನು ಬರೆದು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಕನ್ನಡ ವಚನ ಸಂಸ್ಕೃತಿ ಕುರಿತು ಸುಂದರ ಲೇಖನವು ಈ ಕೃತಿಯಲ್ಲಿ ಇದೆ. ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಕಸಬಾ ಹೋಬಳಿಯ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಲೇಖಕರು ಆಯ್ಕೆಯಾದ ಸಂದರ್ಭದಲ್ಲಿ ವೇದಿಕೆಯ ಮೇಲೆ ಅಧ್ಯಕ್ಷರ ಭಾಷಣದ ಲೇಖನ ಕೃತಿಯಲ್ಲಿ ಬರೆದಿದ್ದಾರೆ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿದ ಕೃಷ್ಣರಾಜಪೇಟೆಯ ಎಸ್.ಎಂ.ಲಿಂಗಪ್ಪ ಅವರ ಜೀವನ ಶೈಲಿ ಕುರಿತಾದ ಲೇಖನ ಈ ಕೃತಿಯಲ್ಲಿ ಇದೆ.

ಲೇಖನ ವಿಹಾರ ಕೃತಿಯು ತುಂಬಾ ವಿಷಯಗಳನ್ನು ಹೊಂದಿರುವ ಕೃತಿಯಾಗಿದೆ. ಈ ಕೃತಿಯು ಲೇಖಕರು ತಮ್ಮ ಎಂಟುಲೇಖನಗಳನ್ನು ನಮೂದಿಸಿ ಸಾಹಿತ್ಯ ಕೊಂಡಿಯು ಕಳಚಿದ ಹಾಗೆ ಸುಂದರ ಕೃತಿ ಮಾಡಿ ಕೊಟ್ಟಿದ್ದಾರೆ. ಈ ಕೃತಿಯು ಅನೇಕರಿಗೆ ಮಾರ್ಗದರ್ಶನ ಆಗಬಹುದು ಎಂದು ಹೇಳಿದರೆ ತಪ್ಪಾಗದು. ಲೇಖಕರ ಈ ಕೃತಿಯನ್ನು ಎಲ್ಲರೂ ಕೊಂಡು ಓದಿ ಹಾಗೂ ಪುಸ್ತಕ ಓದುವ ಹವ್ಯಾಸವನ್ನು ಬೆಳಸಿಕೊಳ್ಳಿ.

## ಮುಡಾ ರಾಮಯ್ಯ ನಡಿ ರಾಮಯ್ಯ

**ಗೆದ್ದೇನೆಂದು**
**ಜೊಲ್ಲು ಸುರಿಸಿದೇ**
**ಒಳ್ಳೇನೆಂದರೂ**
**ಒಕ್ಕರಿಸುತ್ತಿದೆ**
**ಇ.ಡಿ**
**ಬಲ್ಲವರಷ್ಟೇ**
**ಬಲ್ಲರು**
**ನನ್ನ ಒಳ ಮರ್ಮ**
**ಹೊರ ಕಂಡಿದ್ದೆ**
**ಸತ್ಯವೆಂದುಕೊಂಡರು**
**ಒಳ ಜೋಬಿನಲ್ಲಿದೆ**
**ನಾ ಅಡಗಿಸಿಟ್ಟ**
**ಸತ್ಯದ ಗುಟ್ಟು**
**ಇ ಡಿ**
**ನನ್ನ ಇಡಿಯಾಗಿ**
**ನುಂಗುವುದು**
**ಸಿದ್ಧರಾಗಿ ನನ್ನೊಂದಿಗೆ**
**ಹೊರಡಲು ರೆಡಿಯಾಗಿ**

**ಗುಜ್ಜರ್**

# ಅಕ್ಕಿ ಗಂಜಿ ನೀರು ಆರೋಗ್ಯಕ್ಕೆ ಒಳ್ಳೆಯದು

• ಉದಯವಾಹಿನಿ, ಬೆಂಗಳೂರು,



ಮಕ್ಕಳಲ್ಲಿ ಜ್ವರ ,ಶೀತವಿದ್ದಾಗ ರೋಗ ನಿರೋಧಕ ಶಕ್ತಿ ಕುಗ್ಗುತ್ತದೆ. ಅಂತಹ ಸಂದರ್ಭದಲ್ಲಿ ಅವರು ಬೇಗನೇ ಚೇತರಿಸಿಕೊಳ್ಳಲು ಈ ಕೆಲವೊಂದು ಆಹಾರಗಳನ್ನು ನೀಡುವುದು ಉತ್ತಮ ಎನ್ನಲಾಗುತ್ತದೆ.

ಹವಾಮಾನ ಬದಲಾಗುತ್ತಿದ್ದಂತೆ ಪ್ರತಿಯೊಬ್ಬರನ್ನೂ ಶೀತ, ಕೆಮ್ಮು, ಜ್ವರ ಕಾಡಲಾರಂಭಿಸುತ್ತದೆ. ಅದರಲ್ಲೂ ಮಕ್ಕಳಲ್ಲಿ ಶೀತ, ಕೆಮ್ಮು, ವೈರಲ್ ಜ್ವರದ ಅಪಾಯ ಹೆಚ್ಚು. ಮಕ್ಕಳಿಗೆ ಶೀತ, ಕೆಮ್ಮು ಇದ್ದಾಗ ಅವರಿಗೆ ಯಾವ ರೀತಿಯ ಆಹಾರ ನೀಡಬೇಕು ಎನ್ನುವ ಗೊಂದಲ ತಾಯಂದಿರಲ್ಲಿ ಇದ್ದೇ ಇರುತ್ತದೆ. ಶೀತ ಕೆಮ್ಮು ಇದ್ದಾಗ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕುಗ್ಗುತ್ತದೆ. ಹಾಗಾಗಿ ಮಕ್ಕಳಿಗೆ ನೀಡಬೇಕಾದ ಕೆಲವೊಂದು ಆಹಾರಗಳ ಬಗ್ಗೆ ನಾವಿಲ್ಲಿ ತಿಳಿಸಿದ್ದೇವೆ. ಸಮಸ್ಯೆಯನ್ನು ಉಲ್ಬಣಗೊಳಿಸದ ಆಹಾರ ನೀಡಿ ಮಕ್ಕಳಿಗೆ ಶೀತ ಮತ್ತು ಕೆಮ್ಮಿನಿಂದ ಬಳಲುತ್ತಿರುವ ಮಕ್ಕಳ ಆಹಾರದ ಬಗ್ಗೆ ಸಾಕಷ್ಟು ಕಾಳಜಿ ವಹಿಸುವುದು ಮುಖ್ಯ. ಅಂತಹ ಸಮಯದಲ್ಲಿ ಸಮಸ್ಯೆಯನ್ನು ಉಲ್ಬಣಗೊಳಿಸದ ಮತ್ತು ಅವರ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಬೀರದ ಆಹಾರವನ್ನು ನೀಡಬೇಕು. ಮಕ್ಕಳಿಗೆ ಶೀತ ಮತ್ತು ಕೆಮ್ಮು ಇದ್ದಾಗ ಈ ಆಹಾರಗಳನ್ನು ಸೇವಿಸುವುದು ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ.

**ಅಕ್ಕಿ ಗಂಜಿ ನೀರು:** ಮಕ್ಕಳಲ್ಲಿ ಕೆಮ್ಮು ಅಥವಾ ಶೀತವಿದ್ದರೆ ಅಕ್ಕಿ ಗಂಜಿ ನೀರು ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಅನೇಕ ಜನರು ಇದನ್ನು ಮನೆಮದ್ದಾಗಿಯೂ ಬಳಸುತ್ತಾರೆ. ಶೀತ ಮತ್ತು ಕೆಮ್ಮಿನ ಸಮಯದಲ್ಲಿ ಅಕ್ಕಿ ನೀರು ಕುಡಿಯುವುದು ಮಕ್ಕಳಿಗೆ ಮಾತ್ರವಲ್ಲದೆ ವಯಸ್ಕರಿಗೂ ಪ್ರಯೋಜನಕಾರಿಯಾಗಿದೆ. ಇದರ ಸೇವನೆಯು ಮಕ್ಕಳ ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಮಕ್ಕಳ ದೇಹದಲ್ಲಿನ ಸೋಂಕುಗಳ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

**ದಾಳಿಂಬೆ ರಸ**

**ದಾಳಿಂಬೆ ರಸವು ಉತ್ಕರ್ಷಣ ನಿರೋಧಕಗಳಿಂದ ಸಮೃದ್ಧವಾಗಿದೆ. ನಿಮ್ಮ ಆರು ತಿಂಗಳ ಮಗುವಿಗೆ ಹಿಮೋಗ್ಲೋಬಿನ್ ಹೆಚ್ಚಿಸಲು ನೀವು ಇದನ್ನು ನೀಡಬಹುದು. ಈ ಆರೋಗ್ಯಕರ ರಸದ ರುಚಿಯನ್ನು ಹೆಚ್ಚಿಸಲು, ನೀವು ಒಂದು ಚಿಟಿಕೆ ಕರಿಮೆಣಸು ಮತ್ತು ಒಣ ಶುಂಠಿ ಪುಡಿಯನ್ನು ಸೇರಿಸಬಹುದು. ಇದು ಶೀತ ಮತ್ತು ಕೆಮ್ಮನ್ನು ನಿವಾರಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ.**



**ಬಾರ್ಲಿ ನೀರು:** ಬಾರ್ಲಿಯಲ್ಲಿ ದೇಹಕ್ಕೆ ಉಪಯುಕ್ತವಾದ ಅನೇಕ ಪೋಷಕಾಂಶಗಳು ಕಂಡುಬರುತ್ತವೆ. ಇದರ ಸೇವನೆಯು ನಿಮ್ಮ ದೇಹವನ್ನು ಆರೋಗ್ಯವಾಗಿರಿಸುತ್ತದೆ ಮತ್ತು ರೋಗಗಳಿಂದ ರಕ್ಷಿಸುತ್ತದೆ. ಮಕ್ಕಳಿಗೆ ಜ್ವರ, ಶೀತ ಮತ್ತು ಕೆಮ್ಮು ಇದ್ದಾಗ ಬಾರ್ಲಿ ನೀರನ್ನು ಕುಡಿಸುವುದು ತುಂಬಾ ಉಪಯುಕ್ತ ಮತ್ತು ಪರಿಣಾಮಕಾರಿ ಎಂದು ಪರಿಗಣಿಸಲಾಗಿದೆ. ಆರು ತಿಂಗಳ ಮೇಲ್ಪಟ್ಟ ಮಕ್ಕಳು ಮಾತ್ರ ಬಾರ್ಲಿ ನೀರನ್ನು ಸೇವಿಸಬೇಕು. ಮಕ್ಕಳಿಗೆ ಬಾರ್ಲಿ ನೀರನ್ನು ನೀಡುವಾಗ, ಅವರಿಗೆ ಗ್ಲುಟನ್ ಅಲರ್ಜಿ ಸಮಸ್ಯೆ ಇದೆಯೇ ಎನ್ನುವುದನ್ನು ಮೊದಲು ತಿಳಿಯಿರಿ.

**ಟೊಮೆಟೊ ಸೂಪ್:** ಟೊಮೆಟೊ ಸೂಪ್ ಸೇವನೆಯು ಮಕ್ಕಳಿಗೆ ಮಾತ್ರವಲ್ಲದೆ ವಯಸ್ಕರಿಗೂ ಪ್ರಯೋಜನಕಾರಿಯಾಗಿದೆ. ಮಕ್ಕಳು ಶೀತ ಮತ್ತು ಕೆಮ್ಮಿನಿಂದ ಬಳಲುತ್ತಿರುವಾಗ ಟೊಮೆಟೊ ಸೂಪ್ ತುಂಬಾ ಪ್ರಯೋಜನಕಾರಿಯಾಗಿದೆ. ಟೊಮೆಟೊ ಸೂಪ್ ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ನೀವು ಟೊಮೆಟೊ ಸೂಪ್ ಅನ್ನು 1 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ ಮಾತ್ರ ನೀಡಬೇಕು.

**ಸಿಹಿ ಗೆಣಸು:** ಮಕ್ಕಳ ದೇಹದಲ್ಲಿ ಪೋಷಕಾಂಶಗಳನ್ನು ಒದಗಿಸಲು ಮತ್ತು ಬಿಳಿ ರಕ್ತ ಕಣಗಳನ್ನು ಹೆಚ್ಚಿಸಲು ಸಿಹಿ ಗೆಣಸು ಒಂದು ಅತ್ಯುತ್ತಮ ಮಾರ್ಗವಾಗಿದೆ. ಆರು ತಿಂಗಳು ಅಥವಾ ಅದಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ ನೀವು ಸಿಹಿಗೆಣಸನ್ನು ಬೇಯಿಸಿ ಪ್ಯೂರಿ ಅಥವಾ ಗಂಜಿ ರೂಪದಲ್ಲಿ ನೀಡಬಹುದು. ಈ ಸಿಹಿ ಗೆಣಸು ನಿಮ್ಮ ಮಗುವಿನ ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಸಾಧನವಾಗಿಯೂ ಕಾರ್ಯನಿರ್ವಹಿಸುತ್ತದೆ.

**ತರಕಾರಿ ಸೂಪ್:** ಮಕ್ಕಳಲ್ಲಿ ಶೀತ ಮತ್ತು ಕೆಮ್ಮಿನ ಸಮಸ್ಯೆಯನ್ನು ನಿವಾರಿಸಲು ಹಸಿರು ತರಕಾರಿ ಸೂಪ್ ಸಹಾಯ ಮಾಡುತ್ತದೆ. ಮಕ್ಕಳಿಗೆ ಟೊಮೆಟೊ, ಪಾಲಕ್, ಕ್ಯಾರೆಟ್ ಮತ್ತು ಇತರ ತರಕಾರಿಗಳಿಂದ ಮಾಡಿದ ಸೂಪ್‌ಗಳನ್ನು ನೀಡಬೇಕು. ನೀವು ಅದಕ್ಕೆ ಕರಿಮೆಣಸು ಮತ್ತು ದಾಲ್ಚಿನ್ನಿಯಂತಹ ಕೆಲವು ಬಿಸಿ ಮಸಾಲೆಗಳನ್ನು ಕೂಡ ಸೇರಿಸಬಹುದು. ಮಕ್ಕಳಲ್ಲಿ ಶೀತ ಮತ್ತು ಕೆಮ್ಮನ್ನು ನಿವಾರಿಸುವುದರ ಜೊತೆಗೆ, ಇದು ಅವರ ದೇಹವನ್ನು ಬೆಚ್ಚಗಿಡುತ್ತದೆ.



**ಬಾದಾಮಿ ಹಾಲು:** ಜ್ವರ, ಶೀತ, ಕೆಮ್ಮಿನಿಂದ ಬಳಲುತ್ತಿರುವ ಮಕ್ಕಳಿಗೆ ಬಾದಾಮಿ ಹಾಲು ತುಂಬಾ ಪ್ರಯೋಜನಕಾರಿ. ಬಾದಾಮಿಗಳು ಖಾರದ ಸ್ವಭಾವವನ್ನು ಹೊಂದಿರುತ್ತವೆ ಮತ್ತು ಮಕ್ಕಳಿಗೆ ಪ್ರಯೋಜನಕಾರಿಯಾಗಿದೆ . ಮಕ್ಕಳಿಗೆ ಶೀತ ಮತ್ತು ಕೆಮ್ಮು ಇದ್ದಾಗ ಬಾದಾಮಿ ಹಾಲು ಕುಡಿಸುವುದು ಒಳ್ಳೆಯದು. ಇದು ಮಕ್ಕಳಿಗೆ ಸಾಕಷ್ಟು ಪೋಷಣೆಯನ್ನು ಒದಗಿಸುತ್ತದೆ ಮತ್ತು ಅವರ ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

# ಈ ದೋಸೆ ತಿಂದ್ರೆ, ಸಕ್ಕರೆಯಂಶ ಹೆಚ್ಚಾಗಲ್ಲ, ರುಚಿಯೂ ಸೂಪರ್

• ಉದಯವಾಹಿನಿ, ಬೆಂಗಳೂರು,

ಇದೊಂದು ಅತ್ಯಂತ ಆರೋಗ್ಯಕರವಾದ ದೋಸೆಯಾಗಿದೆ, ಏಕೆಂದರೆ ಮೆಂತೆ, ಗೋಧಿ, ಅಕ್ಕಿ, ಉದ್ದು ಹಾಕಿ ಮಾಡುವ ದೋಸೆಯಾಗಿದ್ದು, ನೀವು ಈ ದೋಸೆ ತಿನ್ನುವುದರಿಂದ ರಕ್ತದಲ್ಲಿ ಸಕ್ಕರೆಯಂಶ ಕೂಡ ನಿಯಂತ್ರಣದಲ್ಲಿಡಬಹುದು, ಅಲ್ಲದೆ ಇದನ್ನು ನೀವ್ ಯಾಆಗ ಬೇಕು ಆವಾಗ ತತ್ ತಕ್ಷಣ ಮಾಡಿ ಸವಿಯಬಹುದು, ಅಕ್ಕಿ ನೆನೆಹಾಕಬೇಕು ಅಂತೇನೂ ಇಲ್ಲ, ಬನ್ನಿ ಇದನ್ನು ಮಾಡುವುದು ಹೇಗೆ ಎಂದು ನೋಡೋಣ

**ಬೇಕಾಗುವ ಸಾಮಗ್ರಿ :** 1 ಕಪ್ ಗೋಧಿ ಮುಕ್ಕಾಲು ಕಪ್ ಮೆಂತೆ ಬೀಜ ಅರ್ಧ ಕಪ್ ಅಕ್ಕಿ ಒಂದೂವರೆ ಕಪ್ ಉದ್ದು (ಸಿಪ್ಪೆ ಸಹಿತ) ಸ್ವಲ್ಪ ಗೋಡಂಬಿ ದ್ರಾಕ್ಷಿ

## ದೋಸೆ ಮಾಡುವ ವಿಧಾನ

**ಈಗ ಹಿಟ್ಟನ್ನು ತೆಗೆದು ನೀರು ಹಾಕಿ ದೋಸೆ ಹದಕ್ಕೆ ಕಲೆಸಿ ದೋಸೆ ಹುಯ್ಯಿರಿ. ದೋಸೆ ತುಂಬಾನೇ ರುಚಿಯಾಗಿರುತ್ತದೆ ಇದನ್ನು ಇನ್‌ಸ್ಟಾಂಟ್ ದೋಸೆಯಂತೆ ಸವಿಯಬಹುದು. ಮಧುಮೇಹಿಗಳಿಗೆ ಚಪಾತಿಗಿಂತಲೂ ಈ ದೋಸೆ ಅಥವಾ ಮುದ್ದೆ ತುಂಬಾನೇ ಒಳ್ಳೆಯದು.**

ಒಂದು ಲೋಟ ಅಳತೆಯಲ್ಲಿ ಗೋಧಿ ತೆಗೆದು ಹುರಿಯಿರಿ ಅರ್ಧ ತೊಳೆದು ಒಣಗಿಸಿ ಅಕ್ಕಿಯನ್ನು ತೆಗೆದು ಒಣಗಿಸಿ ಮುಕ್ಕಾಲು ಲೋಟ ಮೆಂತೆಯನ್ನು ಹುರಿದಿಡಿ ಒಂದೂವರೆ ಲೋಟ ಕಪ್ಪು ಸಿಪ್ಪೆ ಇರುವ ಉದ್ದನ್ನು ಹಾಕಿ ಹುರಿದುಕೊಳ್ಳಿ 8-10 ಗೋಡಂಬಿ-ದ್ರಾಕ್ಷಿ ಕೂಡ ಹುರಿದು ಇಡಿ. ಈಗ ಈ ಎಲ್ಲಾ ಸಾಮಗ್ರಿ ತಣ್ಣಗಾಗಲು ಬಿಡಿ, ಸಂಪೂರ್ಣ ತಣ್ಣಗಾದ ಮೇಲೆ ಪುಡಿ ಪುಡಿ ನೀವು ಮಿಕ್ಸಿಯಲ್ಲಿಯ ಮಾಡಬಹುದು, ಮಿಲ್‌ನಲ್ಲಿಯೂ ಮಾಡಿಸಬಹುದು.

ಈಗ ನೀಡಿರುವ ಸಾಮಗ್ರಿಯಷ್ಟೇ ಆದರೆ ಮಿಕ್ಸಿಯಲ್ಲಿಯೇ ಮಾಡಬಹುದು, ಇಲ್ಲಾ ನೀವು ಹೆಚ್ಚಿನ ಅಳತೆಯಲ್ಲಿ ಮಾಡುವುದಾದರೆ ಮಿಲ್‌ಗೆ ಹೋಗಿ ಪುಡಿ ಮಾಡಿ ಬನ್ನಿ. ನಂತರ ಪುಡಿಯನ್ನು ಡಬ್ಬದಲ್ಲಿ ಹಾಕಿಡಿ, ನಂತರ ನೀವು ಮುದ್ದೆ ಅಥವಾ ದೋಸೆಯನ್ನು ಮಾಡುವಾಗ ಹಿಟ್ಟು ಬಳಸಿ ಇದೇ ಹಿಟ್ಟಿನಿಂದ ನೀವು ಮುದ್ದೆ ಮಾಡಿ ಇದೇ ಹಿಟ್ಟಿನಿಂದ ನೀವು ಮುದ್ದೆ ಕೂಡ ಮಾಡಬಹುದು, ಮುದ್ದೆ ತುಂಬಾನೇ ರುಚಿಯಾಗಿರುತ್ತದೆ. ಈ ಮುದ್ದೆ ಕೂಡ ರಾಗಿ ಮುದ್ದೆಗಿಂತಲೂ ತುಂಬಾ ಟೇಸ್ಟಿಯಾಗಿರುತ್ತದೆ. ಮುದ್ದೆ ಸ್ವಲ್ಪ ಕಹಿ ಅನಿಸಿದರೂ ರುಚಿ ಸೂಪರ್, ಮಧುಮೇಹವನ್ನು ನಿಯಂತ್ರಿಸುವಲ್ಲಿ ತುಂಬಾನೇ ಸಹಕಾರಿ.

**ನಿಮಿಷಗಳಲ್ಲಿ ದೋಸೆ ರೆಡಿ**



# 10 ದಿನಗಳ ಒಳಗೆ ನಿಗಮ ಮಂಡಳಿಗೆ ನಿರ್ದೇಶಕರ ನೇಮಕ

• ಉದಯವಾಹಿನಿ, ಬೆಂಗಳೂರು,



10 ದಿನಗಳ ಒಳಗೆ ನಿಗಮ ಮಂಡಳಿಗಳ ನಿರ್ದೇಶಕರ ನೇಮಕಾತಿ ಆಗಲಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಚಂದ್ರಶೇಖರ್ ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ನಿಗಮ ಮಂಡಳಿಗಳ ನಿರ್ದೇಶಕರ ನೇಮಕವನ್ನು ಸರ್ಕಾರ ಮಾಡಲಿದೆ. ನಾವು ಈಗಾಗಲೇ ಲೀಸ್ಟ್ ಕೊಟ್ಟಿದ್ದೇವೆ. ಅಧ್ಯಕ್ಷರು ಅದನ್ನು ಸರ್ಕಾರಕ್ಕೆ ಶಿಫಾರಸು ಮಾಡ್ತಾರೆ. 10 ದಿನಗಳ ಒಳಗೆ ನಿರ್ದೇಶಕರ ನೇಮಕ ಆಗಲಿದೆ ಎಂದು ತಿಳಿಸಿದ್ದಾರೆ.

ಪರಮೇಶ್ವರ್ ನೇತೃತ್ವದ ಕಮಿಟಿ ಈಗಾಗಲೇ ಪಟ್ಟಿ ಕೊಟ್ಟಿದೆ. ನಾನು ಅದರಲ್ಲಿ ನಿರ್ದೇಶಕನಾಗಿದ್ದೆ. ಕೆಲವು ಬದಲಾವಣೆಗಳು ಆಗಿದೆ. ಹಾಗಾಗಿ ಸ್ವಲ್ಪ ವಿಳಂಬವಾಗಿದೆ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

# ಮೆಟಿಸಿಯಾ 2025 ನವೀನ ಕ್ರಾಂತಿಕಾರಿ ಮೊಬೈಲ್

• ಉದಯವಾಹಿನಿ, ಬೆಂಗಳೂರು,

ದೇಶದಲ್ಲಿ ಎಂಜಿನಿಯರಿಂಗ್ ಮರದ ಫಲಕ ಉತ್ಪನ್ನ ಗಳ ಅತಿದೊಡ್ಡ ತಯಾರಕ ಮತ್ತು ವಿಭಾಗದಲ್ಲಿ ಮುಂಚೂಣಿ ಯಲ್ಲಿರುವ ಆಕ್ಷನ್ ಟಿಇಎಸ್‌ಎ, ವಾಸ್ತುಶಿಲ್ಪ ಮತ್ತು ಒಳಾಂಗಣ ಉತ್ಪನ್ನಗಳ ಪ್ರಮುಖ ಪ್ರದರ್ಶನವಾದ ಮೆಟಿಸಿಯಾ 2025 ರಲ್ಲಿ ತನ್ನ ನವೀನ ಕ್ರಾಂತಿಕಾರಿ ಮೊಬೈಲ್ ಅನುಭವ ಕೇಂದ್ರ ಸ್ಟುಡಿಯೋ ಆನ್ ವೀಲ್ಸ್ 3.0 ಅನ್ನು ಪ್ರಾರಂಭಿಸುವುದಾಗಿ ಹೆಮ್ಮೆಯಿಂದ ಘೋಷಿಸಿದೆ.

ಸ್ಟುಡಿಯೋ ಆನ್ ವೀಲ್ಸ್ 3.0 ಎಂಬುದು ಆಕ್ಷನ್ ಟಿಇಎಸ್‌ಎದ ಕ್ರಾಂತಿಕಾರಿ ಮೊಬೈಲ್ ಅನುಭವ ಕೇಂದ್ರದ ನವೀಕರಿಸಿದ



ಆವೃತ್ತಿಯಾಗಿದ್ದು, ಒಳಾಂಗಣ ಮತ್ತು ಕಟ್ಟಡ ಪರಿಹಾರಗಳಲ್ಲಿನ ಇತ್ತೀಚಿನ ಪ್ರವೃತ್ತಿಗಳು ಮತ್ತು ಸುಸ್ಥಿರ ನಾವೀನ್ಯತೆಗಳನ್ನು ನೇರವಾಗಿ ಗ್ರಾಹಕರ ಮನೆ ಬಾಗಿಲಿಗೆ ತರಲು ವಿನ್ಯಾಸಗೊಳಿಸಲಾಗಿದೆ. ಅನುಭವ ಕೇಂದ್ರವು ಎಚ್‌ಡಿಎಚ್‌ಎಂಆರ್, ಬೋಯಿಲೊ, ಎಂಡಿಎಫ್ ಪಾರ್ಟಿಕಲ್ ಬೋರ್ಡ್‌ಗಳು ಮತ್ತು ಫ್ಲೋರಿಂಗ್ ಪರಿಹಾರಗಳನ್ನು ಒಳಗೊಂಡಂತೆ ಆಕ್ಷನ್ ಟಿಇಎಸ್‌ಎದ ಅತ್ಯಾಧುನಿಕ ಉತ್ಪನ್ನಗಳನ್ನು ಒಂದೇ ಸೂರಿನಡಿ ಪ್ರದರ್ಶಿಸುತ್ತದೆ. ಮೆಟಿಸಿಯಾ 2025 ಗೆ ಭೇಟಿ ನೀಡುವವರು ಸ್ಟುಡಿಯೋ ಆನ್ ವೀಲ್ಸ್ 3.0 ಅನ್ನು ಅನ್ವೇಷಿಸಲು ಮತ್ತು ಆಕ್ಷನ್ ಟಿಇಎಸ್‌ಎ ಉತ್ಪನ್ನಗಳ ಉನ್ನತ ಗುಣಮಟ್ಟ ಮತ್ತು ಬಹುಮುಖತೆಯನ್ನು ನೇರವಾಗಿ ಅನುಭವಿಸಲು ವಿಶೇಷ ಅವಕಾಶವನ್ನು ಹೊಂದಿರುತ್ತಾರೆ. ಒಳಾಂಗಣ ವಿನ್ಯಾಸಕರು, ವಾಸ್ತುಶಿಲ್ಪಿಗಳು, ವಿದ್ಯಾರ್ಥಿಗಳು ಮುಂತಾದವರು ಸ್ಟುಡಿಯೊದ ರಾಷ್ಟ್ರೀಯ ಪ್ರಯಾಣದ ಸಮಯದಲ್ಲಿ ಅದರೊಂದಿಗೆ ಸಂವಹನ ನಡೆಸುವಾಗ ಜ್ಞಾನ ಹಂಚಿಕೆ ಮತ್ತು ಒಳನೋಟಗಳಿಂದ ಪ್ರಯೋಜನ ಪಡೆಯುತ್ತಾರೆ

**ಒಳಾಂಗಣ ಉತ್ಪನ್ನಗಳ ಪ್ರದರ್ಶನ**

☛ ಉದಯವಾಹಿನಿ ಚಿತ್ರ



**ಮಾತನಾಡಿದ ಆಕ್ಷನ್ ಟೆಸಾದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಅಜಯ್ ಅಗರ್ವಾಲ್, ಆರಂಭದಿಂದಲೂ, ಆಕ್ಷನ್ ಟೆಸಾ ಸರಳ ಮತ್ತು ಶಕ್ತಿಯುತ ಗುರಿಯಿಂದ ನಡೆಸಲ್ಪಡುತ್ತಿದೆ - ನಾವೀನ್ಯತೆ, ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯನ್ನು ಸಂಯೋಜಿಸುವ ಅತ್ಯುತ್ತಮ-ದರ್ಜೆಯ ಉತ್ಪನ್ನಗಳನ್ನು ತಲುಪಿಸುವುದು. ನಮ್ಮ ಕೋಯಿ ನಹಿ ಐಸಾ ತತ್ವಶಾಸ್ತ್ರಕ್ಕೆ ಸಾಕ್ಷಿಯಾಗಿ, ಖಓಖ8000 ಕೋಟಿ ಎಂಜಿನಿಯರಿಂಗ್ ಮರದ ಉದ್ಯಮದಲ್ಲಿ ಅತ್ಯಾಧುನಿಕ ಉತ್ಪನ್ನಗಳು ಮತ್ತು ವಿನ್ಯಾಸ ನಾವೀನ್ಯತೆಗಳನ್ನು ಅನುಭವಿಸಲು ಎಲ್ಲಾ ಪಾಲುದಾರರಿಗೆ ಮೊದಲ ಅವಕಾಶವನ್ನು ಒದಗಿಸುವ ಗುರಿಯನ್ನು ಹೊಂದಿರುವ ಮೊಬೈಲ್ ಅನುಭವ ಕೇಂದ್ರ ಸ್ಟುಡಿಯೋ ಆನ್ ವೀಲ್ಸ್ 3.0 ನ ಹೊಸ ಆವೃತ್ತಿಯನ್ನು ಪರಿಚಯಿಸಲು ನಾವು ತುಂಬಾ ಸಂತೋಷಪಡುತ್ತೇವೆ ಎಂದು ಹೇಳಿದರು.**

## ಅರ್ಹರಿಗೆ ವಿದ್ಯಾರ್ಥಿವೇತನ ಖಾತ್ರಿಪಡಿಸಬೇಕೆಂದು ಆಗ್ರಹ

• ಉದಯವಾಹಿನಿ, ಬಳ್ಳಾರಿ

ನಗರದ ವಾಲ್ಮೀಕಿ ಸರ್ಕಲ್ ಬಳಿ ಇಂದು ಎಐಡಿಎಸ್ ಓ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಖಾತ್ರಿಪಡಿಸಬೇಕೆಂದು ಆಗ್ರಹಿಸಿದರು.

ಎಐಡಿಎಸ್‌ಓ ನ ಜಿಲ್ಲಾ ಉಪಾಧ್ಯಕ್ಷ ಶಾಂತಿಮಾತನಾಡಿ, ಕಳೆದ ಮೂರು ವರ್ಷಗಳಿಂದ ರಾಜ್ಯದ ಪದವಿ , ಸ್ನಾತಕೋತ್ತರ, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸರಿಯಾಗಿ ವಿದ್ಯಾರ್ಥಿ ವೇತನ ಲಭ್ಯವಾಗುತ್ತಿಲ್ಲ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ಪದವಿ, ಸ್ನಾತಕೋತ್ತರ ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ದೊರೆತಿಲ್ಲ. ರಾಜ್ಯದ ಹಲವೆಡೆ ಕೆಲವು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಕೂಡ ವಿದ್ಯಾರ್ಥಿ ವೇತನ ದಿಂದ ವಂಚಿತರಾಗಿದ್ದಾರೆ. ವಿದ್ಯಾರ್ಥಿ ವೇತನವು ಸರ್ಕಾರದ ಭಿಕ್ಷೆಯಲ್ಲ ಅದು ನಮ್ಮ ಹಕ್ಕು ಎಂದು ಆಗ್ರಹಿಸಿದರು.

ಜಿಲ್ಲಾ ಅಧ್ಯಕ್ಷ ಈರಣ್ಣ ಮಾತನಾಡಿ, ಇಲ್ಲಿಯವರೆಗೂ ಸಂಬಂಧಪಟ್ಟ ಸಚಿವರಿಗೆ, ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ, ಈವರೆಗೂ ಯಾವುದೇ ಕ್ರಮ ಸರ್ಕಾರ ಕೈಗೊಂಡಿಲ್ಲ.

ಕ್ರಮೇಣ ರಾಜ್ಯದಲ್ಲಿ ವಿದ್ಯಾರ್ಥಿ ವೇತನವನ್ನೇ ಕಡಿತಗೊಳಿಸುವ ಪರಿಸ್ಥಿತಿ ಉಂಟಾಗುವ ಆತಂಕ ರಾಜ್ಯದ ವಿದ್ಯಾರ್ಥಿಗಳಿಗಿದೆ, ವಿದ್ಯಾರ್ಥಿವೇತನ ಅನ್ನುವುದು ವಿದ್ಯಾರ್ಥಿಗಳ ಹಕ್ಕು, ಇದನ್ನು ಕಸಿದುಕೊಳ್ಳುವ ಸರ್ಕಾರದ ನಡೆಯನ್ನು ಒಪ್ಪೋದಿಲ್ಲ ಈಗಲಾದರೂ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕೆಂದು ಆಗ್ರಹಿಸಿದರು.

ಮುಂದಿನ ವಿದ್ಯಾರ್ಥಿ ವೇತನ ಬರೆದಿರುವ ವಿದ್ಯಾರ್ಥಿಗಳನ್ನು ಸೇರಿಸಿ ಮಾರ್ಚ್ 1ನೇ ತಾರೀಕು ಸರ್ಕಾರದ ವಿರುದ್ಧ ಬಲಿಷ್ಠ ಬೆಂಗಳೂರು ಚಲೋ ಹೋರಾಟವನ್ನು ಸಂಘಟಿಸುತ್ತೇವೆ ಈ ಹೋರಾಟದಲ್ಲಿ ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎಐಡಿಎಸ್‌ಓ ನ ಜಿಲ್ಲಾ ಉಪಾಧ್ಯಕ್ಷೆ ಉಮಾ ಜಿಲ್ಲಾ ಕಚೇರಿ ಕಾರ್ಯದರ್ಶಿ ನಿಹಾರಿಕಾ ಇನ್ನಿತರರು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿ ಸಂಘದ ನೂತನ ಕಟ್ಟಡ ಉದ್ಘಾಟನೆ

• ಉದಯವಾಹಿನಿ, ಬಾದಾಮಿ

ಪರಸ್ಪರ ಸಹಕಾರ ನಂಬಿಕೆ, ವಿಶ್ವಾಸಗಳಿಂದ ಸಹಕಾರಿ ಸಂಘಗಳು ಅಭಿವೃದ್ಧಿ ಹೊಂದಲು ಸಾಧ್ಯ. ಆಡಳಿತ ಮಂಡಳಿ ಅತ್ಯಂತ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿದಾಗ ಮಾತ್ರ ಸಹಕಾರಿ ಸಂಘಗಳು ಯಶಸ್ವಿ ಹೊಂದಲು ಸಾಧ್ಯ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ತಾಲ್ಲೂಕಿನ ಜಾಲಿಹಾಳ ಗ್ರಾಮದ ಶ್ರೀ ಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಇದರ ನೂತನ ಕಟ್ಟಡ ಹಾಗೂ ರಜತ ಮಹೋತ್ಸವದ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಂಘದ ಅಧ್ಯಕ್ಷರ ಸಹಕಾರ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿ


ಉದಯವಾಹಿನಿ ಚಿತ್ರ

ಬ್ಯಾಂಕಿನ ಹಿತವನ್ನು ಕಾಪಾಡಿದ್ದರಿಂದ ಇಂದು 25 ವರ್ಷದ ರಜತ ಮಹೋತ್ಸವ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದೆ.

ಸಹಕಾರಿ ತತ್ವದ ಮೇಲೆ ಕಾನೂನು ಚೌಕಟ್ಟಿನಲ್ಲಿ ಸಾಲ ದೊರೆಯುತ್ತದೆ ಸಾಲಗಾರರು ಸಕಾಲಕ್ಕೆ ಮರು ಪಾವತಿಸುವ ಮೂಲಕ ಬ್ಯಾಂಕಿನ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಸಲಹೆ ನೀಡಿದರು.

ಶ್ರೀ ಸಿದ್ದೇಶ್ವರ ಬ್ಯಾಂಕಿನ ಅಧ್ಯಕ್ಷ ಶಾಂತಗೌಡ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಲಪ್ರಭಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಪಿ.ಹಳ್ಳೂರ ಗಣಕಯಂತ್ರ ಉದ್ಘಾಟಿಸಿದರು.

> ಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ಶಾಂತಗೌಡ ಅವರ ಅಧ್ಯಕ್ಷತೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿ. ಯಾವದೇ ಒಂದು ಹಣಕಾಸು ಸಂಸ್ಥೆ ಅಭಿವೃದ್ಧಿಯಾಗಲು ಸಾರ್ವಜನಿಕರ ಸಹಕಾರ ಬಹಳ ಮುಖ್ಯವಾಗಿದೆ ಸಾಲ ಪಡೆದವರು ಸಕಾಲಕ್ಕೆ ಸಾಲ ಮರು ಪಾವತಿ ಮಾಡಬೇಕು
> -ರಾಜಶೇಖರ, ಮಾಜಿ ಶಾಸಕ

## ಮಿನಿ ನ್ಯೂಸ್

### ವಡಗೇರಾ ತಾಲ್ಲೂಕು ಕೇಂದ್ರದಲ್ಲಿ ಕಾಲೇಜು ಮಂಜೂರಿಗೆ ಒತ್ತಾಯ

• ಉದಯವಾಹಿನಿ, ವಡಗೇರಾ



ತಾಲ್ಲೂಕು ಕೇಂದ್ರದಲ್ಲಿ ಸರಕಾರಿ ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯ ಕಾಲೇಜು ಮಂಜೂರು ಮಾಡುವಂತೆ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ ಒತ್ತಾಯಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ತಾಲ್ಲೂಕು ಕೇಂದ್ರವಾಗಿ ಸುಮಾರು ಏಳು ವರ್ಷಗಳು ಕಳೆದರೂ ಕೂಡಾ ಕಾಲೇಜು ಇಲ್ಲ ಇದರಿಂದ ತಾಲ್ಲೂಕಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕಲಿಯಲು ತುಂಬಾ ತೊಂದರೆಯಾಗುತ್ತಿದೆ ಕಾಲೇಜು ಶಿಕ್ಷಣಕ್ಕಾಗಿ ದೂರದ ಶಹಾಪುರ ಯಾದಗಿರಿ ರಾಯಚೂರಿನಂತ ನಗರ ಪ್ರದೇಶಗಳಿಗೆ ಕಾಲೇಜು ಶಿಕ್ಷಣಕ್ಕಾಗಿ ತೆರಳುವಂತಾಗಿದೆ ಇಲ್ಲಿ ಕಾಲೇಜು ಇಲ್ಲದಿರುವುದರಿಂದ ಆದೆಷ್ಟೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಅರ್ಧಕ್ಕೆ ಶಿಕ್ಷಣವನ್ನು ಮೊಟುಕುಗೊಳಿಸುತ್ತಿದ್ದಾರೆ ನೂತನ ತಾಲ್ಲೂಕಿಗೆ ಸುಮಾರು 60 ಕ್ಕೂ ಹೆಚ್ಚು ಹಳ್ಳಿಗಳು ಒಳಪಡುತ್ತವೆ.

ಇಲ್ಲಿ ಕಾಲೇಜು ಇಲ್ಲದಿರುವುದು ದುರಾದೃಷ್ಟಕರ ಕಾಲೇಜು ಮಂಜುರಿಗಾಗಿ ಸಂಬಂಧಿಸಿದ ಜನಪ್ರತಿನಿಧಿಗಳು ಅಧಿಕಾರಿಗಳ ಗಮನಕ್ಕೆ ತಂದರು ಯಾವುದೇ ರೀತಿಯ ಪ್ರಯೋಜನವಾಗಿಲ್ಲ ಕೂಡಲೇ ಸಂಬಂಧಿಸಿದ ಜನಪ್ರತಿನಿಧಿಗಳು ಅಧಿಕಾರಿಗಳು ವಡಗೇರಾ ತಾಲ್ಲೂಕು ಕೇಂದ್ರದಲ್ಲಿ ಪದವಿ ಪೂರ್ವ ಮತ್ತು ಪದವಿ ಮಾಹಾವಿದ್ಯಾಲಯ ಮಂಜೂರು ಮಾಡಬೇಕು ಒಂದು ವೇಳೆ ನಿರ್ಲಕ್ಷ್ಯ ವಹಿಸಿದ್ದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕದ ವತಿಯಿಂದ ಉಗ್ರ ಹೋರಾಟ ಮಾಡುವುದಾಗಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕದ ಅಧ್ಯಕ್ಷ ಅಬ್ದುಲ್ ಚಿಗಾನೂರ ಎಚ್ಚರಿಸಿದ್ದಾರೆ.

### ಎರಡು ಕಾರುಗಳ ನಡುವೆ ಅಪಘಾತ ಮೂವರಿಗೆ ಗಾಯ

• ಉದಯವಾಹಿನಿ, ಪುತ್ತೂರು

ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಪಾಲಿ ಬಳಿಯ ಪುಲಿತ್ತಾಡಿ ಬಳಿ ಎರಡು ಕಾರುಗಳ ನಡುವೆ ಅಪಘಾತ ಸಂಭವಿಸಿ ಮೂವರು ಗಾಯಗೊಂಡಿದ್ದಾರೆ. ಮಂಗಳೂರಿನಿಂದ ಪುತ್ತೂರಿನತ್ತ ಹೊರಟಿದ್ದ ಕಾರೊಂದು ಬಿ.ಸಿ.ರೋಡ್ ಆಡಿಟೋರಿಯಂನಲ್ಲಿ ಮದುವೆ ಸಮಾರಂಭಕ್ಕೆ ತೆರಳುತ್ತಿದ್ದ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ. ಮುಂಭಾಗದಲ್ಲಿ ಹೂವಿನ ಹೂಗುಚ್ಛಗಳಿಂದ ಅಲಂಕರಿಸಲ್ಪಟ್ಟ ಮದುವೆಗೆ ಹೊರಟಿದ್ದ ಕಾರು, ಬಲವಾದ ಗಾಳಿಯಿಂದಾಗಿ ಪುಷ್ಪಗುಚ್ಛವು ಚಾಲಕನ ಬದಿಯ ಕಿಟಕಿಗೆ ಡಿಕ್ಕಿ ಹೊಡೆದ ನಂತರ ನಿಯಂತ್ರಣ ಕಳೆದುಕೊಂಡಿತು. ಇದರಿಂದಾಗಿ ವಾಹನವು ವಿರುದ್ಧ ದಿಕ್ಕಿನಲ್ಲಿ ತಿರುವು ಪಡೆದು ಮುಂದೆ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ಮಂಗಳೂರಿನಿಂದ ಬಂದ ಕಾರಿನ ಮುಂಭಾಗಕ್ಕೆ ತೀವ್ರ ಹಾನಿಯಾಗಿದ್ದು, ಅದರಲ್ಲಿದ್ದ ಮೂವರಿಗೆ ಗಾಯಗಳಾಗಿವೆ. ಅವರನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಪಘಾತದ ಬಳಿಕ ಹೆದ್ದಾರಿಯಲ್ಲಿ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿತ್ತು. ಪುತ್ತೂರಿನ ಸಂಚಾರ ಪೊಲೀಸರು ಸ್ಥಳಕ್ಕೆ ಆಗಮಿಸಿ ವಾಹನಗಳನ್ನು ತೆರವುಗೊಳಿಸಿ ಸಂಚಾರ ಸುಗಮಗೊಳಿಸಿದರು.

### ಮಹಾ ಕುಂಭಮೇಳಕ್ಕೆ ತೆರಳಿದ್ದ ಬೀದರ್‌ನ ಐವರು ಅಪಘಾತಕ್ಕೆ ಬಲಿ

• ಉದಯವಾಹಿನಿ, ಬೀದರ್

ಬೀದರ್ ಮೂಲದ ಒಂದೇ ಕುಟುಂಬದ 12 ಜನರು ಪ್ರಯಾಗರಾಜ್ ನಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ತೆರಳುತ್ತಿದ್ದರು. ಉತ್ತರ ಪ್ರದೇಶದ ಮಿರಜಾಪೂರ್ ಜಿಲ್ಲೆಯ ರೂಪಾಪೂರ ಬಳಿ ರಸ್ತೆ ಅಪಘಾತ ಸಂಭವಿಸಿ ಐದು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಮತ್ತು 7 ಜನ ಗಾಯಗೊಂಡಿದ್ದಾರೆ. ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದೆ. ಮೃತರನ್ನು ಬೀದರ್ ನಗರದ ಲಾಡಗೇರಿ ಬಡಾವಣೆಯ ನಿವಾಸಿಗಳಾದ ಸುನೀತಾ (40), ನೀಲಮ್ಮ(62) ಲಕ್ಷ್ಮಿ (57) ಕಲಾವತಿ (60) ಸಂತೋಷ (45) ಎಂದು ಗುರುತಿಸಲಾಗಿದೆ.

ಅಪಘಾತದಲ್ಲಿ ಏಳು ಜನರು ಗಾಯಗೊಂಡಿದ್ದಾರೆ. ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೀದರನ್ನ ಲಾಡಗೇರಿ ನಗರ ನಿವಾಸಿಗಳಾದ 14 ಜನ ಫೆಬ್ರವರಿ 18 ರಂದು ಮಧ್ಯಾಹ್ನ ಬೀದರ ನಗರದಿಂದ ಕ್ರೂಸರ್‌ನಲ್ಲಿ ಮಹಾಕುಂಭ ಮೇಳಕ್ಕೆಂದು ಪ್ರಯಾಗರಾಜಗೆ ಹೋಗಿದ್ದರು.

### ರೈತರು ಕೇಳಿದ ಅವರ ದಾಖಲೆಗಳನ್ನು ಒಂದೆರಡು ದಿನಗಳಲ್ಲಿ ಅವರಿಗೆ ಸಿಗುವಂತೆ ಅನುಕೂಲ ಕಲ್ಪಿಸಿಕೊಡಲಾಗಿದೆ: ಸುನೀಲಕುಮಾರ

## ರಾಜ್ಯ ಕಂದಾಯ ಇಲಾಖೆಯ ಆಯುಕ್ತರು ಚಿಂಚೋಳಿಗೆ ದಿಢೀರನೆ ಭೇಟಿ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕು ರೈತರ ಭೂದಾಖಲೆಗಳ ರೀಕಾರ್ಡ್ ಕೋಣೆಯ ಪಾಣಿ ಪತ್ರಿಕೆಗಳು ನೂತನವಾಗಿ ಡಿಜಿಟಲೀಕರಣ ಮಾಡಿ ಹೊಸ ತಂತ್ರಾಂಶ ಅಳವಡಿಸಲಾಗಿದ್ದು ರಾಜ್ಯದಲ್ಲಿಯೇ ಚಿಂಚೋಳಿ ಸೇರಿದಂತೆ 09 ತಾಲ್ಲೂಕುಗಳಲ್ಲಿ ಮೊಟ್ಟಮೊದಲು ಮಾಡಿದ್ದೇವೆ ಈಗ ರೈತರು ಕೇಳಿದ ಅವರ ದಾಖಲೆಗಳನ್ನು ಒಂದೆ ರಡು ದಿನಗಳಲ್ಲಿ ಅವರಿಗೆ ಸಿಗುವಂತೆ ಅನುಕೂಲ ಕಲ್ಪಿಸಿಕೊಡಲಾಗಿದೆ ಎಂದು ರಾಜ್ಯ ಕಂದಾಯ ಇಲಾಖೆ ಆಯುಕ್ತ ಸುನೀಲಕುಮಾರ ಹೇಳಿದರು.

**ರಿಕಾರ್ಡ್ ಕೋಣೆಗಳ ಪರಿಶೀಲನೆ**

ನಗರದ ತಹಶೀಲ್ ಕಾರ್ಯಾಲಯಕ್ಕೆ ದಿಡೀರನೇ ಆಗಮಿಸಿದ ಅವರು ಭೂದಾಖಲೆ ಕೋಣೆ ಹೊಸ ತಂತ್ರಾಂಶದ ಅಳವಡಿಕೆ ಪರಿಶೀಲಿಸಿದ ನಂತರ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು,ಈಗಾಗಲೇ ತಾಲ್ಲೂಕಿನಲ್ಲಿ ಬಿಎಂಸಿ ತಂತ್ರಾಂಶದ ಮೂಲಕ ಹಳೆಯ ದಾಖಲಾತಿಗಳು ಹೊಸ ತಂತ್ರಾಂಶದಲ್ಲಿ ಅಳವಡಿಸಲು 10ಕಂಪ್ಯೂಟರ್,10ಅಪರೇಟರ್,ಸ್ಕ್ಯಾನ್ ಮಷೀನ್ ಸೇರಿದಂತೆ ಕೊಟ್ಟಿದ್ದೇವೆ ಈಗ ಸಂಪೂರ್ಣವಾಗಿ 17ಲಕ್ಷ ದಾಖಲಾತಿಗಳು,16,52,354ಪುಟಗಳನ್ನು ದಾಖಲಾತಿಯನ್ನು ಹೊಸ ತಂತ್ರಾಂಶದಲ್ಲಿ ಮಾಡಲಾಗಿದೆ, ಚಿಂಚೋಳಿ ಜೊತೆ ಇನ್ನು 09 ತಾಲ್ಲೂಕು ಮುಕ್ತಾಯವಾಗಿದ್ದು ಕಂದಾಯ ಸಚಿವರ ಆದೇಶದಂತೆ ರೈತರು ಯಾರಾದರೂ ಅರ್ಜಿ ಸಲ್ಲಿಸಿದರೆ ಸಚಿವರ ಕೈಯಿಂದಲೇ ದಾಖಲೆ ನೀಡುವುದು ಚಾಲನೆ ನೀಡಲಾಗುವುದು.

2023 ಜುಲೈ ತಿಂಗಳಿಂದ ರಾಜ್ಯ ಪ್ರವಾಸ ಮಾಡಿ ರೀಕಾರ್ಡ್ ಕೋಣೆಗಳು ಪರಿಶೀಲನೆ ನಡೆಸಿ ಹೊಸ ತಂತ್ರಾಂಶ ಮಾಡಲು ಬಹಳಷ್ಟು ಯೋಚನೆ ಮಾಡಿದ್ದು ಇದು ದೇಶದಾದ್ಯಂತ ನಡೆಯುತ್ತಿದೆ ಎಂದರು.

ಈ ಎಲ್ಲಾ ದಾಖಲೆಗಳನ್ನು ಹೊಸ ತಂತ್ರಾಂಶದಲ್ಲಿ ಅಳವಡಿಸಲಾಗಿದೆ ರೈತರು ದಾಖಲೆಗಾಗಿ ಅರ್ಜಿ ಸಲ್ಲಿಸಿದರೆ ಪ್ರತಿ ಅರ್ಜಿಯು ಕಂದಾಯ ಆರ್.ಐ ಅಧಿಕಾರಿಗೆ ಲಾಗೀನ್‌ಗೆ ಹೋಗುತ್ತದೆ ಆರ್.ಐ ಅರ್ಜಿ ಪರಿಶೀಲಿಸಿ ಒಂದೆರಡು ದಿನದಲ್ಲಿ ರೈತರಿಗೆ ನೀಡಬಹುದು.

ಈ ಸಂದರ್ಭದಲ್ಲಿ ಅಪಾರ ಜಿಲ್ಲಾಧಿಕಾರಿ ರಾಚಪ್ಪ ಹುಣಸಗಿ, ಸೇಡಂ ಸಹಾಯಕ ಆಯುಕ್ತ ಪ್ರಭುರಡ್ಡಿ,ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ, ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್,ಸೇರಿದಂತೆ ಅಧಿಕಾರಿಗಳು ಕಂದಾಯ ಸಿಬ್ಬಂದಿ ವರ್ಗದವರು ಇದ್ದರು.

ರಾಜ್ಯ ಕಂದಾಯ ಇಲಾಖೆ ಆಯುಕ್ತರು ಆಗಮಿಸಿದ ಸುದ್ದಿ ತಿಳಿದ ರೈತರು,ಸಮಾಜ ಚಿಂತಕರು, ಸಂಘಟನೆದವರು ತಹಶೀಲ್ ಕಛೇರಿಗೆ ಆಗಮಿಸಿ ಕಂದಾಯ ಇಲಾಖೆಗೆ ಸಂಬಂಧಪಟ್ಟ ಸಮಸ್ಯೆಗಳ ಮನವಿ ಪತ್ರಗಳು ಸಲ್ಲಿಸಿದರು.


ಉದಯವಾಹಿನಿ ಚಿತ್ರ

**ನಮ್ಮ ಜಮೀನು ನಿಮ್ಮ ಜಮೀನು ಎಂಬುವುದು ಗೊಂದಲ**

ಪತ್ರಕರ್ತರು ಕೇಳಿದ ಪ್ರೇಶ್ನೆಗೆ ಉತ್ತರಿಸಿದ ಆಯುಕ್ತರು,ಒತ್ತುವರಿ ಜಮೀನು ಇನ್ನು ಮಾಹಿತಿ ಬಂದಿರುವುದಿಲ್ಲ,ಈಗಾಗಲೇ ಸರ್ಕಾರ ಪಟ್ಟ ಜಮೀನು, ಕೆರೆಗಳು, ಸ್ಮಶಾನ ಭೂಮಿ ಸರ್ವೆ ಮಾಡಲಾಗಿದೆ,ಅರಣ್ಯ ಇಲಾಖೆ ಒತ್ತುವರಿ ಭೂಮಿಯನ್ನು ಅರಣ್ಯ ಇಲಾಖೆಯವರು ಮಾಡಬೇಕು, ಗಡಿಪ್ರದೇಶ ಒತ್ತುವರಿ ತೆಲಂಗಾಣ ರಾಜ್ಯದವರು ಮಾಡಿದ್ದಾರೆ ಇಲ್ಲವೊ ಎಂಬುವುದು ಈಗಾಗಲೇ ಒಂದು ಸಮಿತಿ ರಚನೆ ಮಾಡಿದ್ದು ಗಡಿಪ್ರದೇಶ ಸರ್ವೆ ನಡೆಸಲು ತೆಲಂಗಾಣ ರಾಜ್ಯ ಕರ್ನಾಟಕ ರಾಜ್ಯ ಅಧಿಕಾರಿಗಳು ಸಮ್ಮುಖದಲ್ಲಿ ಸರ್ವೆ ನಡೆಸಿ ಗಡಿಪ್ರದೇಶ ಗುರುತು ಮಾಡಲಾಗುವುದು ಅಲ್ಲಿಯವರೆಗೆ ನಮ್ಮ ಜಮೀನು ನಿಮ್ಮ ಜಮೀನು ಎಂಬುವುದು ಗೊಂದಲ ಇರುತ್ತದೆ ಎಂದರು.

> ತಾಲ್ಲೂಕಿನಲ್ಲಿ 88,043 ಜಮೀನು ಮಾಲಿಕತ್ವದ ರೈತರು,58,627ಆಧಾರ್ ಲಿಂಕ್ ಮಾಡಲಾಗಿದೆ,3,402 ಜಮೀನು ರೈತರು ತೋಟಗಾರಿಕೆ ಕೃಷಿ ರೈತರಾಗಿದ್ದಾರೆ,12,516 ಭೂಮಾಲಿಕತ್ವ ರೈತರು ನಿಧನರಾಗಿದ್ದಾರೆ,1982 ರೈತರ ಜಮೀನುಗಳು ಬೇರೆ ಇಲಾಖೆಗೆ ಭೂಸ್ವಾಧೀನವಾದರೂ ಖಾಸಗಿ ಮಾಲಿಕತ್ವ ಹೊಂದಿದ್ದು ಇಂಥಹ ತಿದ್ದುಪಡಿ ಮಾಡಬೇಕಾಗಿದೆ,ರೈತರ 30ಕಡೆ ಭೂ ಮಾಲಿಕತ್ವಯಿದರೂ ಒಂದೆ ಕಡೆ ಈಗ ನೋಡಬಹುದು.

**ನೂತನ ಭೂದಾಖಲೆ ತಂತ್ರಾಂಶ ಪರಿಶೀಲನೆ**

## ವಿದ್ಯಾರ್ಥಿಗಳ ಶಕ್ತಿಯೇ ನಿಜವಾದ ರಾಷ್ಟ್ರಶಕ್ತಿ: ಸಂಸದ ಬ್ರಿಜೇಶ್ ಚೌಟ

• ಉದಯವಾಹಿನಿ, ಮಂಗಳೂರು

ದೇಶದ ಪ್ರಜಾಪ್ರಭುತ್ವದ ಸ್ವರೂಪ ಬದಲಾವಣೆಗೆ ವಿದ್ಯಾರ್ಥಿಗಳ ಕೊಡುಗೆ ಅಪಾರ. ವಿದ್ಯಾರ್ಥಿಗಳ ಶಕ್ತಿಯೇ ನಿಜವಾದ ರಾಷ್ಟ್ರ ಶಕ್ತಿ. ಇದನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ 2024-25ನೇ ಸಾಲಿನ ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಒಂದು ಕಾಲದಲ್ಲಿ ವಿದ್ಯಾರ್ಥಿಗಳಾಗಿದ್ದವರೇ ನಾಯಕರಾಗಿ ರಾರಾಜಿಸಿದ ಇತಿಹಾಸವೂ ನಮ್ಮ ಕಣ್ಣ ಮುಂದಿದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ನಾಯಕತ್ವ ಗುಣ, ವೃತ್ತಿಪರ ಜ್ಞಾನ ಹಾಗೂ ಸಾಮರ್ಥ್ಯವನ್ನು ಬೆಳೆಸಿಕೊಂಡರೆ ಮುಂದಿನ ಜನನಾಯಕರಾಗಿ ಬೆಳೆಯಲು ಸಾಧ್ಯ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿದ್ಧಕಟ್ಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಅಜಕ್ಕಳ ಗಿರೀಶ ಭಟ್, ವಿದ್ಯಾರ್ಥಿಗಳು ಯಾರನ್ನು ನಾಯಕರನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು ಎಂಬ ವಿವೇಕವನ್ನು ಹೊಂದಿರಬೇಕು.

ನಾಯಕನಿಗೆ ಹಿಂಬಾಲಕರು ಬೆಂಬಲ ನೀಡುವ ವೇಳೆ ಸಾಕಷ್ಟು ಆಲೋಚನೆ ನಡೆಸಿ, ಅವರ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡುವ ಕೆಲಸ ಮಾಡಬೇಕಿದೆ. ಕೇವಲ ಉದ್ಯೋಗ ದೃಷ್ಟಿಯಿಂದ ಮಾತ್ರವೇ ಕಲಿಕಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೇ, ಸ್ವಪ್ರೇರಣೆ, ನಿರಂತರ ಪರಿಶ್ರಮ, ಮಹತ್ವಾಕಾಂಕ್ಷೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಬದುಕಿನ ವಿಕಾಸದ ಕಡೆಗೆ ಹೆಚ್ಚಿನ ಗಮನ ನೀಡಬೇಕಿದೆ ಎಂದು ವಿದ್ಯಾರ್ಥಿಗಳಿಗೆ ಪ್ರೋತ್ಸಾಹದ ಮಾತುಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ. ಎಲ್. ಧರ್ಮ, ಬದುಕಿನಲ್ಲಿ ಸವಾಲುಗಳು ಎದುರಾದಾಗ ಕೇವಲ ನಕಾರಾತ್ಮಕವಾಗಿ ಚಿಂತಿಸದೇ ಸಕಾರಾತ್ಮಕವಾಗಿ ಆಲೋಚನೆ ಮಾಡುವ ಮೂಲಕ ಪ್ರಗತಿಯೆಡೆಗೆ ಹೆಜ್ಜೆ ಹಾಕಬೇಕಿದೆ. ಸಮಾನತೆ, ಸಹಬಾಳ್ವೆಯ ಕಡೆಗೆ ಗಮನಹರಿಸಿ ವಿದ್ಯಾರ್ಜನೆ ವೇಳೆ ಶ್ರದ್ದೆ, ಹಾಗೂ ಶಿಸ್ತುಬದ್ಧವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಿದೆ ಎಂದರು.



> ನಾಯಕರು ಕೇವಲ ರಾಜಕೀಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿರದೇ, ಎಲ್ಲಾ ಕ್ಷೇತ್ರಗಳಿಗೂ ನಾಯಕರ ಅಗತ್ಯ ಹೆಚ್ಚಾಗಿದೆ. ಈ ಹಿನ್ನಲೆಯಲ್ಲಿ ಪ್ರತಿಯೊಬ್ಬರೂ ವೃತ್ತಿಪರತೆ, ಸಾಮಾನ್ಯ ಜ್ಞಾನ, ಉನ್ನತ ಚಿಂತನೆಗಳನ್ನು ಮೈಗೂಡಿಸಿಕೊಂಡು ದೇಶದ ಪ್ರಗತಿಗೆ ಕೈಜೋಡಿಸಬೇಕಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ವಿದ್ಯಾರ್ಥಿ ಬದುಕಿನಲ್ಲೇ ನಾಯಕತ್ವ ಗುಣವನ್ನು ಪ್ರದರ್ಶಿಸಬೇಕಿದೆ
> -ಬ್ರಿಜೇಶ್ ಚೌಟ, ಸಂಸದ

## ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮ

• ಉದಯವಾಹಿನಿ, ಧಾರವಾಡ

ಬದುಕಿನ ಎಲ್ಲ ಹಂತಗಳಲ್ಲಿಯೂ ಅನ್ವಯವಾಗುವ ನೀತಿ ಪಾಠಗಳನ್ನು ಹಾಗೂ ಜೀವನದ ನೈತಿಕ ಮೌಲ್ಯಗಳನ್ನು ತಮ್ಮ ತ್ರಿಪದಿಗಳಲ್ಲಿ ಸಂತ ಕವಿ ಶ್ರೇಷ್ಠ ಸರ್ವಜ್ಞ ಸಮಾಜಕ್ಕೆ ಸಾಹಿತ್ಯದ ಮೂಲಕ ಸಾರಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಹೇಳಿದರು.

ಅವರು ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಸಂತಕವಿ ಶ್ರೀ ಸರ್ವಜ್ಞ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ವಜ್ಞರು ತಮ್ಮ ತ್ರಿಪದಿಯ ವಚನಗಳ ಮೂಲಕ ಕನ್ನಡ ಸಾಹಿತ್ಯವನ್ನು ಬೆಳಸಿ, ಅದಕ್ಕೆ ಉತ್ಕೃಷ್ಟ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯನ್ನು ತಮ್ಮ ವಚನಗಳ ಮೂಲಕ ಶ್ರೀಮಂತಗೊಳಿಸಿದ್ದಾರೆ ಎಂದರು.


ಉದಯವಾಹಿನಿ ಚಿತ್ರ

ಕಾರ್ಯಕ್ರಮದಲ್ಲಿ ಹಾವೇರಿ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಗ್ರಂಥಪಾಲಕ ಡಾ.ರಾಜಶೇಖರ ಧ. ಕುಂಬಾರ ಅವರು ಸಂತಕವಿ ಶ್ರೀ ಸರ್ವಜ್ಞ ಅವರ ಜೀವನ ಚರಿತ್ರೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ರವಿ ಕುಲರ್ಣಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಅಧ್ಯಕ್ಷ ಬಸವಂತಪ್ಪ ಬಿ. ಚಕ್ರಸಾಲಿ, ಉಪಾಧ್ಯಕ್ಷ ಬಸವರಾಜ ಎಂ. ಕುಂಬಾರ, ಪ್ರಧಾನ ಕಾರ್ಯದರ್ಶಿ ಎಮ್. ಪಿ.ಕುಂಬಾರ, ಶಂಕರ ಕುಂಬಾರ ಉಪಸ್ಥಿತರಿದ್ದರು.

## ಕುಡಿಯುವ ನೀರಿಗಾಗಿ ಮಾದರಿ ಬಾವಿ ನಿರ್ಮಾಣ

• ಉದಯವಾಹಿನಿ, ಅಥಣಿ

ತಾಲ್ಲೂಕಿನ ತೆಲಸಂಗ ಗ್ರಾಮದಲ್ಲಿರುವ ಡೋಣಿ ಹಳ್ಳದ ಪಕ್ಕದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಉದ್ದೇಶ ಇಟ್ಟುಕೊಂಡು ಒಳಗಡೆ ಕಾಂಕ್ರೀಟ್ ರಿಂಗ್ ಹಾಕಿ ತೆರೆದ ಬಾವಿಯನ್ನು ಸುಮಾರು 29 ಲಕ್ಷ ರೂಗಳ ವೆಚ್ಚದಲ್ಲಿ ನರೇಗಾ ಯೋಜನೆಯಡಿ ನಿರ್ಮಾಣ ಮಾಡಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿಯೇ ಕುಡಿಯುವ ನೀರಿನ ಉದ್ದೇಶಕ್ಕಾಗಿ ಮಾದರಿಯಾಗಿ ನಿರ್ಮಾಣಗೊಂಡಿರುವ ಬಾವಿ ಸ್ಥಳಕ್ಕೆ ಗುರುವಾರ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ಭೇಟಿ ನೀಡಿ ಬಾವಿಯ ಕಾಂಕ್ರೀಟ್ ಕಾಮಗಾರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಬಾವಿ ನಿರ್ಮಾಣ ಮಾಡಿದ ಗುತ್ತಿಗೆದಾರ ಸಿದ್ದು ಕೊಕಟನೂರ. ತೆಲಸಂಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ ಎಂ ಖೊಬ್ರಿ. ಅಪ್ಪು ಜಮಾದಾರ. ಧರೆಪ್ಪಾ ಮಾಳಿ. ಸುರೇಶ ಕೊಳಂಬಿ. ಈಶ್ವರ ಉಂಡೋಡಿ. ಮಾಯಪ್ಪಾ ಸಾವಳಗಿ. ಸುಭಾಸ್ ಖೊಬ್ರಿ. ಸಿದ್ದು ನಿಡೋಣಿ. ಸೇರಿದಂತೆ ಹಲವರು ಉಪಸ್ಥಿತರಿದ್ದರು

## ಧಾರ್ಮಿಕ ಯಾತ್ರೆಯಿಂದ ಮನಸ್ಸಿಗೆ ನೆಮ್ಮದಿ: ಸ್ವಾಮೀಜಿ

• ಉದಯವಾಹಿನಿ, ಸೈದಾಪುರ

ಧಾರ್ಮಿಕ ಆಚರಣೆಯಿಂದ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ ಎಂದು ನೇರಡಗುಂಬ ಶ್ರೀ ಮಠದ ಪೀಠಾಧಿಪತಿ ಪಂಚಮ ಸಿದ್ಧಲಿಂಗ ಸ್ವಾಮೀಜಿ ಅಭಿಪ್ರಾಯಪಟ್ಟರು. ಪಟ್ಟಣದ ವಿಶ್ವನಾಥ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ಗ್ರಾಮಸ್ಥರು ಹಮ್ಮಿಕೊಂಡಿದ್ದ ಶ್ರೀ ಶೈಲಕ್ಕೆ ಜ್ಯೋತಿಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು. ಮನುಷ್ಯನ ಜೀವನದಲ್ಲಿ ಕಷ್ಟ-ಸುಖಗಳು ಸಾಮಾನ್ಯ. ಒತ್ತಡದ ಜೀವನದಲ್ಲಿ ದೇವರ ಸ್ಮರಣೆಯೊಂದಿಗೆ ಪಾದಯಾತ್ರೆಯನ್ನು ಮಾಡುವ ಮೂಲಕ ಸಾಗುವುದು ಆಧ್ಯಾತ್ಮಿಕ ಒಲವು ಹೆಚ್ಚಾಗುವಂತೆ ಮಾಡುತ್ತದೆ .ಯಾತ್ರೆಯು ಮನಸ್ಸಿಗೆ ನೆಮ್ಮದಿ ನೀಡುತ್ತದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಇದಕ್ಕೂ ಮೊದಲು ವಿಶ್ವನಾಥ ಮಂದಿರದಲ್ಲಿ ಪುರವಂತಿಗೆ ನಡೆಯಿತು. ನಂತರ ಸ್ವಾಮೀಜಿಗಳು ಪೂಜಾ ಕೈಂಕರ್ಯಗಳು ನೆರವೇರಿಸಿ, ನಂದಿಕೋಲು, ಡೊಳ್ಳು, ಹಲಗೆ ವಾದ್ಯಗಳೊಂದಿಗೆ ಜ್ಯೋತಿಯಾತ್ರೆಗೆ ಚಾಲನೆ ನೀಡಿದರು. ಬಸವೇಶ್ವರ, ಕನಕ, ಬಾಬು ಜಗಜೀವನರಾಮ್ ವೃತ್ತದ ಮೂಲಕ ಯಾತ್ರೆಯು ಗ್ರಾಮದ ಮಾರಿಕಾಂಬಾ ದೇವಸ್ಥಾನದವರೆಗೆ ಸಾಗಿತು. ಸಿದ್ಧಾರೂಢ ಮಠದ ಪೀಠಾಧಿಪತಿ ಸೋಮೇಶ್ವಾರನಂದ ಸ್ವಾಮಿ, ಪ್ರಕಾಶ್‌ಗೌಡ, ಸಂಗಾರೆಡ್ಡಿಗೌಡ, ಮಲ್ಲುಗೌಡ ಸೈದಾಪುರ, ನೀಲಕಂಠಪ್ಪಗೌಡ ಕ್ಯಾತನಾಳ, ವಿಶ್ವನಾಥ್‌ರೆಡ್ಡಿ ಗೌಡಚಿಗಾನೂರ, ಯೋಗೇಶ್ ಕುಮಾರ್ದೊಡ್ಡಾ, ತಿಮ್ಮಣ್ಣ ವಿಶ್ವಕರ್ಮ, ಗ್ರಾಮ ಪಂಚಾಯಿತಿ ಮಾಜಿಅಧ್ಯಕ್ಷ ಮಾಳಪ್ಪ ಇತರರಿದ್ದರು.

## ಗಡಿ ಗ್ರಾಮ ಅಭಿವೃದ್ಧಿಗೆ ಅನುದಾನ 18 ಲಕ್ಷ ರೂ. ಮಂಜೂರು

• ಉದಯವಾಹಿನಿ, ಗುರುಮಠಕಲ್

ನಸಲವಾಯಿ ಗ್ರಾಮಸ್ಥರಿಂದ ಚರಂಡಿ ಅವ್ಯವಸ್ಥೆ ಕುರಿತು ದೂರುಗಳು ಬಂದ ಕಾರಣ ಸ್ವತಃ ಸಿಇಓ ಅವರು ನಸಲವಾಯಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು.

ಗುರುಮಠಕಲ್ ತಾಲ್ಲೂಕಿನ ಅನಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ನಸಾಲವಾಯಿ ಗ್ರಾಮಕ್ಕೆ ಈಚೆಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿ.ಪಂ ಯೋಜನಾ ನಿರ್ದೇಶಕರು ಹಾಗೂ ಇಓ ಸೇರಿದಂತೆ ಅಧಿಕಾರಿಗಳ ತಂಡ ಅನಪುರ ಮತ್ತು ನಸಲವಾಯಿ ಗ್ರಾಮಕ್ಕೆ ಆಗಮಿಸಿ, ಗ್ರಾಮದ ತುಂಬ ಸಂಚರಿಸಿ ಚರಂಡಿಗಳ ಅವ್ಯವಸ್ಥೆ ಸರಿಪಡಿಸಲು ಮತ್ತು ಚರಂಡಿಗಳ ನಿರ್ಮಾಣಕ್ಕೆ 18 ಲಕ್ಷ ಮೊತ್ತದ ಅನುದಾನ ಮೀಸಲಿಟ್ಟಿದ್ದರು.

ಸದರಿ ಕ್ರಿಯಾಯೋಜನೆ ಅನುಮೋದನೆಯಾಗಿದ್ದು, ಮಾರ್ಚ್ ಅಂತ್ಯದ ವೇಳೆಗೆ ಪ್ರಗತಿ ಸಾಧಿಸಲಿದೆ ಎಂದು ಗ್ರಾ.ಪಂ ಪಿಡಿಓ ಮತ್ತು ಇಓ ಅವರು ತಿಳಿಸಿದ್ದಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸ್ಪಂದನೆಯಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಸಹಕಾರಿಯಾಗಿದ್ದು, ಅನ್ನಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಸದಸ್ಯರು ಧನ್ಯವಾದಗಳು ಸಲ್ಲಿಸಿದ್ದಾರೆ.


ಉದಯವಾಹಿನಿ ಚಿತ್ರ

## ಬಿ.ಸಿ.ಎಂ ವಸತಿ ನಿಲಯದ ವಿದ್ಯಾರ್ಥಿಗಳ ಗೋಳು ಕೇಳುವವರಿಲ್ಲ?

### ಉತ್ತಮವಾದ ಪೌಷ್ಠಿಕ ಆಹಾರ ಒಂದೆಡೆ ಇರಲಿ, ಕನಿಷ್ಟ ಗುಣಮಟ್ಟದ ಆಹಾರ ಕೂಡ ಇಲ್ಲಿನ ಮಕ್ಕಳಿಗೆ ದೊರೆಯದೆ ಕಂಗಾಲಾಗಿದ್ದಾರೆ

• ಉದಯವಾಹಿನಿ, ಚಿಂಚೋಳಿ

ಮಕ್ಕಳು ಶಿಕ್ಷಣದಿಂದ ದೂರ ಉಳಿಯಬಾರದೆಂದು ಹಲವಾರು ಯೋಜನೆಗಳನ್ನು ಸರ್ಕಾರ ಜಾರಿಗೆ ತರುತ್ತವೆ, ಹಳ್ಳಿಗಳಿಂದ ಪಟ್ಟಣಕ್ಕೆ ಸರಿಯಾದ ಸಮಯಕ್ಕೆ ಬಂದು ವಿದ್ಯಾಭ್ಯಾಸ ಮಾಡಲು ಸಮಯ ಸಾಲದು ಹೀಗಾಗಿ ಅಂತಹ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳನ್ನು ನಿರ್ಮಿಸಿದೆ ಹಾಗೂ ಅವುಗಳಲ್ಲಿ ಹಲವಾರು ಸೌಕರ್ಯಗಳನ್ನು ಕೂಡಬೇಕಾಗಿದೆ, ಉತ್ತಮವಾದ ಪೌಷ್ಠಿಕ ಆಹಾರ, ಬಟ್ಟೆ, ಸೋಪು, ನೋಟ್ ಪುಸ್ತಕ, ಫ್ಯಾನ್ ಗಳಂತಹ ವ್ಯವಸ್ಥೆಗಳನ್ನು ಒದಗಿಸುತ್ತದೆ. ಆದರೇ, ಇದಕ್ಕೆಲ್ಲ ತದ್ವಿರುದ್ಧ ಎನ್ನುವಂತೆ ಇಲ್ಲೊಂದು ವಸತಿ ನಿಲಯವಿದೆ. ಉತ್ತಮವಾದ ಪೌಷ್ಠಿಕ ಆಹಾರ ಒಂದೆಡೆ ಇರಲಿ ಕನಿಷ್ಟ ಗುಣಮಟ್ಟದ ಆಹಾರ ಕೂಡ ಇಲ್ಲಿನ ಮಕ್ಕಳಿಗೆ ದೊರೆಯದೆ ಕಂಗಾಲಾಗಿದ್ದಾರೆ.

ಯಾವುದಪ್ಪ ಅಂತಹ ವಸತಿ ನಿಲಯ ಅಂತೀರಾ? ಅದುವೇ ತಾಲ್ಲೂಕಿನ ಚಂದಾಪುರ ಪಟ್ಟಣದಲ್ಲಿರುವ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ. ಹೌದು ಪಟ್ಟಣದ ಈ ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳು ಒಂದಲ್ಲ ಎರಡಲ್ಲ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬೆಳಿಗ್ಗೆಯ ಉಪಹಾರ ಮಧ್ಯಾಹ್ನದ ಊಟ ಕಳಪೆ ಗುಣಮಟ್ಟದಿಂದ ಕೂಡಿದೆ. ಇನ್ನು ರಾತ್ರಿ ಊಟಕ್ಕೆ ಮಧ್ಯಾಹ್ನ ಅಳಿದುಳಿದ ಅನ್ನ ಮತ್ತೆ ಸಾಂಬಾರನ್ನೇ ತಿನ್ನುವಂತೆ ಬೈಯ್ಯುತ್ತಾರೆ. ಊಟದಲ್ಲಿ ತರಕಾರಿಯಂತೂ ಕಾಣುವುದೇ ಇಲ್ಲ. ಇನ್ನು ಮೊಟ್ಟೆ ಮತ್ತೆ ಬಾಳೆ ಹಣ್ಣುಗಳನ್ನು ಏಕೆ ಕೊಡುತ್ತಿಲ್ಲ ಎಂದು ಕೇಳಿದಾಗ ಅದೆಲ್ಲ ಕೇಳಬೇಡಿ ಎಂಬ ಉತ್ತರ ಕೊಟ್ಟರೆ ಒಮ್ಮೊಮ್ಮೆ ಅಪರೂಪಕ್ಕೆ ವಿತರಿಸುತ್ತಾರೆ. ಈ ವರ್ಷದ ಚಳಿಗಾಲ ಇನ್ನೇನು ಮುಗಿದೆ ಹೋಗುತ್ತಿದ್ದರೂ ಇಲ್ಲಿಯವರೆಗೂ ಒಂದೇ ಒಂದು ಬೆಡ್ ಶೀಟ್ ಬ್ಲಾಂಕೆಟ್ ಸಹ ನೀಡದೆ ಇರುವುದರಿಂದ ವಿದ್ಯಾರ್ಥಿಗಳು ಮನೆಯಿಂದಲೇ ರಗ್ ಮತ್ತು ಕೌದಿಗಳನ್ನು ತೆಗೆದುಕೊಂಡು ಬಂದಿದ್ದಾರೆ. ಅಲ್ಲದೆ ಸದ್ಯ 25 ರಿಂದ 30 ವಿದ್ಯಾರ್ಥಿಗಳಿರುವ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳು ಸ್ವತಃ ಮನೆಯಿಂದ ತೆಗೆದುಕೊಂಡು ಬಂದ ಎರಡೇ ಎರಡು ಬಕೀಟ್‌ಗಳಿವೆ. ಈ ಎರಡು ಬಕೀಟ್‌ಗಳಿಂದಲೇ ವಸತಿ ನಿಲಯದ ಎಲ್ಲಾ ವಿದ್ಯಾರ್ಥಿಗಳು ಸ್ನಾನವನ್ನು ಮಾಡುತ್ತಿದ್ದಾರೆ.

ಇನ್ನು ವಸತಿ ನಿಲಯದ ಕೋಣೆಗಳಲ್ಲಿನ ಕಿಟಕಿಗಳು ಮುರಿದು ಹೋಗಿದ್ದು ಹೊರಗಡೆಯಿಂದ ಬರುವ ಸೊಳ್ಳೆಗಳ ಕಾಟಕ್ಕೆ ವಸತಿ ನಿಲಯದ ಪುಟ್ಟ ವಿದ್ಯಾರ್ಥಿಗಳು ಬೇಸತ್ತು ಹೋಗಿದ್ದಾರೆ.

ಇನ್ನು ಕೋಣೆಗೆ ಎರಡರಂತಿರುವ ಫ್ಯಾನ್‌ಗಳಲ್ಲಿ ಒಂದೊಂದು ಫ್ಯಾನ್‌ಗಳು ಕೆಲಸಕ್ಕೆ ಬಾರದಂತೆ ಕೆಟ್ಟುಹೋಗಿದ್ದರೆ ಉಳಿದ ಫ್ಯಾನ್‌ಗಳು ಮೆಲ್ಲಗೆ ತಿರುಗುತ್ತಿರುವುದರಿಂದ ಗಾಳಿ ಬಿಸದಂತಾಗಿದೆ. ಇನ್ನು ವಿದ್ಯಾರ್ಥಿಗಳು ಬಳಸುವ ಶೌಚಾಲಯಗಳು ಕೂಡ ದುರಸ್ತಿಗೆ ಬಂದ ರೀತಿಯಲ್ಲಿರುವುದರಿಂದ ಸ್ವಚ್ಚತೆ ಕಾಣದೇ ಉಪಯೋಗಕ್ಕೆ ಬಾರದಂತಾಗಿದೆ.

**ಒಂದಲ್ಲ ಎರಡಲ್ಲ ಹಲವಾರು ಸಮಸ್ಯೆಗಳು**

> ನನಗೆ ನಿವೃತ್ತಿ ವಯಸ್ಸು ಸಮೀಪಿಸುತ್ತಿದೆ. ನಾನು ರಟಕಲ್ ಗ್ರಾಮದಲ್ಲಿರುವ ವಸತಿ ನಿಲಯದ ಮೇಲ್ವಿಚಾರಕನಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದು, ಎರಡು ಕಡೆ ಗಮನ ಹರಿಸುವುದಕ್ಕೆ ಕಷ್ಟವಾಗುತ್ತದೆ ಎಂದು ನಮ್ಮ ಇಲಾಖೆಯ ತಾಲ್ಲೂಕು ಅಧಿಕಾರಿಗೆ ಪತ್ರವನ್ನು ಸಹ ನೀಡಿದ್ದೇನೆ. ಆದರೂ ಒತ್ತಾಯಪೂರ್ವಕವಾಗಿ ಈ ವಸತಿ ನಿಲಯದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಸಹ ನನಗೆ ವಹಿಸಿದ್ದಾರೆ. ಆದರೂ ಆಗಾಗ ವಸತಿ ನಿಲಯಕ್ಕೆ ಭೇಟಿ ನೀಡುತ್ತೇನೆ. ಉಳಿದಂತೆ ನಮ್ಮ ಅಡುಗೆ ಸಿಬ್ಬಂದಿಗಳೇ ವಸತಿ ನಿಲಯವನ್ನು ನೋಡಿಕೊಳ್ಳುತ್ತಿದ್ದಾರೆ
> - ರಾಮಸ್ವಾಮಿ, ವಸತಿ ನಿಲಯದ ಮೇಲ್ವಿಚಾರಕರು


ಉದಯವಾಹಿನಿ ಚಿತ್ರ

**ಆಡಳಿತದ ವಿರುದ್ಧ ಹಿಡಿ ಶಾಪ**

ವಿದ್ಯಾರ್ಥಿಗಳು ಸ್ವಚ್ಚತೆಯಿಂದ ಶಿಸ್ತಿನಿಂದ ಇರಲು ಕ್ಷೌರವನ್ನು ಮಾಡಿಸಲು ಹಣ ಕೇಳಿದರೆ ಸಿಡಿಮಿಡಿ ಮಾಡುತ್ತಾರೆ ನೀಡಬೇಕಾದ ಕ್ಷೌರದ ಹಣವನ್ನು ನೀಡುವುದೇ ಇಲ್ಲ ಎಂದು ವಿದ್ಯಾರ್ಥಿಗಳು ತಮ್ಮ ಅಳಲನ್ನು ತೋಡಿಕೊಳ್ಳುತ್ತಾ ವಸತಿ ನಿಲಯದ ಮೇಲ್ವಿಚಾರಕರ ವಿರುದ್ಧ ಹಾಗೂ ಇಲಾಖೆಯ ಆಡಳಿತದ ವಿರುದ್ಧ ಹಿಡಿ ಶಾಪವನ್ನು ಹಾಕುತ್ತಾ ಅಭ್ಯಸಿಸುವಂತಹ ಪರಿಸ್ಥಿತಿಯಲ್ಲಿ ಕಾಲವನ್ನು ಕಳೆಯುತ್ತಿದ್ದಾರೆ.

> ನಮಗೆ ಉತ್ತಮ ಗುಣಮಟ್ಟದ ಆಹಾರ ಕೊಡುವುದಿಲ್ಲ. ಬೂದಿ ಮತ್ತು ಮರಳು ಮಿಶ್ರಿತ ನೀರನ್ನೇ ಕುಡಿಯುತ್ತಿದ್ದೇವೆ. ಫ್ಯಾನ್‌ಗಳು ಕೆಟ್ಟು ಹೋಗಿವೆ. ವಸತಿ ನಿಲಯದ ಕಿಟಕಿಗಳು ಹಾಳಾಗಿದ್ದು, ಸೊಳ್ಳೆಗಳ ಕಾಟಕ್ಕೆ ಬೇಸತ್ತಿದ್ದೇವೆ. ಅಪರೂಪಕ್ಕೆ ಕ್ಷೌರ ಮಾಡಿಸಲು ಹಣವನ್ನು ಕೇಳಿದರೆ ಗದರುತ್ತಾರೆ. ಗ್ರಂಥಾಲಯವಿದ್ದರೂ ಇಲ್ಲದಂತಾಗಿದೆ.
> - ಹೆಸರನ್ನು ಹೇಳಲು ಬಯಸದ ವಸತಿ ನಿಲಯದ ವಿದ್ಯಾರ್ಥಿ

**ಕುಡಿಯುವ ನೀರಿನಲ್ಲಿ ಸಣ್ಣ ಸಣ್ಣ ಬೂದಿ ಮಿಶ್ರಿತ ಮರುಳು**

ವಿದ್ಯಾರ್ಥಿಗಳು ಶುಚಿಯಾದ ನೀರು ಕುಡಿಯಲೆಂದು ವಸತಿ ನಿಲಯದಲ್ಲಿ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳು ಹಾಳು ಬಿದ್ದು ವರುಷಗಳೇ ಕಳೆದು ಹೋಗಿವೆ. ಹೊಸದಾಗಿ ಕೊರೆಯಿಸಿದ ಬೋರವೇಲ್‌ನಿಂದ ಕುಡಿಯುವ ನೀರಿನಲ್ಲಿ ಸಣ್ಣ ಸಣ್ಣ ಬೂದಿ ಮಿಶ್ರಿತ ಮರುಳು ಒಳಗೊಂಡಿರುತ್ತದೆ. ಅಂತಹ ನೀರನ್ನ ವಿದ್ಯಾರ್ಥಿಗಳು ಒಮ್ಮೊಮ್ಮೆ ಕುಡಿಯುವುದಕ್ಕಾಗದೆ ವಸತಿ ನಿಲಯದ ಮುಂಭಾಗದ ಸಮೀಪದಲ್ಲಿರುವ ಕೆ.ಇ.ಬಿ ಕಚೇರಿ ಮುಂಭಾಗದಲ್ಲಿನ ಬೋರ್ ವೆಲ್ ನಿಂದ ನೀರನ್ನು ತುಂಬಿಕೊಂಡು ಬಂದು ಕುಡಿಯಬೇಕಾದಂತಹ ಪರಿಸ್ಥಿತಿ ಎದುರಾಗಿದೆ.

# ಎಫ್‌ಬಿಐ ನಿರ್ದೇಶಕ ಸ್ಥಾನಕ್ಕೆ ಟ್ರಂಪ್ ಆಪ್ತ ಕಶ್ ಪಟೇಲ್ ಆಯ್ಕೆ

## ● ಕಾಶ್ ಪಟೇಲ್ ಆಯ್ಕೆ ವಿರುದ್ಧ ಅಪಸ್ವರ, ಅರ್ಹತೆ, ರಾಜಕೀಯ ನಿಷ್ಠೆಯ ಬಗ್ಗೆ ಪ್ರಶ್ನೆ

**ಅಮೆರಿಕ:** ಭಾರತೀಯ ಮೂಲದ ಕಶ್ ಪಟೇಲ್ ಎಫ್‌ಬಿಐ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. 51 ಮತ ಪಡೆಯುವ ಮೂಲಕ ಪ್ರಮುಖ ಹುದ್ದೆಗೆ ಆಯ್ಕೆಯಾಗಿದ್ದಾರೆ. ಟ್ರಂಪ್ ಬೆಂಬಲಿಗರಾದ ಪಟೇಲ್ ನೇಮಕಾತಿಯ ವಿರುದ್ಧ ಈಗಾಗಲೇ ಅಪಸ್ವರಗಳು ಕೇಳಿ ಬರಲಾರಂಭಿಸಿವೆ. ಅವರ ಅರ್ಹತೆ, ರಾಜಕೀಯ ನಿಷ್ಠೆಯ ಬಗ್ಗೆ ಪ್ರಶ್ನೆಗಳು ಹುಟ್ಟಿಕೊಂಡಿವೆ. ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಎಫ್‌ಬಿಐನಲ್ಲಿ ಈಗಾಗಲೇ ಸಾಕಷ್ಟು ಬದಲಾವಣೆಗಳಾಗಿವೆ. ಜನವರಿ 6ರ ಕ್ಯಾಪಿಟಲ್ ಗಲಭೆಯ ತನಿಖೆಯಲ್ಲಿ ಭಾಗಿಯಾದ ಅಧಿಕಾರಿಗಳನ್ನು ವಜಾಗೊಳಿಸಲಾಗಿದೆ.

ಈ ಸೂಕ್ಷ್ಮ ಸಮಯದಲ್ಲಿ ಕಶ್ ಪಟೇಲ್ ಎಫ್‌ಬಿಐ ನಿರ್ದೇಶಕರಾಗಿ ನೇತೃತ್ವ ವಹಿಸಿಕೊಳ್ಳುತ್ತಿದ್ದಾರೆ.

ಡೊನಾಲ್ಡ್ ಟ್ರಂಪ್ 2017ರಲ್ಲಿ ಎಫ್‌ಬಿಐ ನಿರ್ದೇಶಕ ಸ್ಥಾನಕ್ಕೆ ಕ್ರಿಸ್ಟೋಫರ್ ರೇ ಅವರನ್ನು ನೇಮಿಸಿದ್ದರು. ನಂತರದಲ್ಲಿ ಇಬ್ಬರ ನಡುವೆ ಬಿನ್ನಾಭಿಪ್ರಾಯಗಳು ಸೃಷ್ಟಿಯಾಗಿದ್ದವು. ಇದೀಗ ಕ್ರಿಸ್ಟೋಫರ್ ರೇ ಅವರಿಂದ ತೆರವಾಗುತ್ತಿರುವ ಸ್ಥಾನಕ್ಕೆ ಭಾರತೀಯ ಮೂಲದ ಕಶ್ ಪಟೇಲ್ ಆಯ್ಕೆಯಾಗಿದ್ದಾರೆ.

ತನಿಖೆ ವಿಚಾರಗಳಲ್ಲಿ ಯಾವುದೇ ರಾಜಕೀಯ ಪ್ರಭಾವ ಬೀರಬಾರದು ಎಂಬ ಕಾರಣದಿಂದ ಎಫ್‌ಬಿಐ ನಿರ್ದೇಶಕರ ಅಧಿಕಾರಾವಧಿ ಸಾಮಾನ್ಯವಾಗಿ 10 ವರ್ಷಗಳು ಇರುತ್ತವೆ. ಆದರೆ, ಕಶ್ ಪಟೇಲ್ ಅವರು ಡೊನಾಲ್ಡ್ ಟ್ರಂಪ್ ಜತೆಗೆ ನಿಕಟ ಸಂಬಂಧ ಹೊಂದಿದ್ದಾರೆ. ಹೀಗಾಗಿ ಎಫ್‌ಬಿಐ ಕಾರ್ಯಚಟುವಟಿಕೆ ಬಗ್ಗೆ ಅನುಮಾನ ಹುಟ್ಟುವಂತಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಕಾಶ್ ಪಟೇಲ್ ಈ ಹಿಂದೆ ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ರಕ್ಷಣಾ ಕಾರ್ಯದರ್ಶಿಯ ಮುಖ್ಯಸ್ಥರಾಗಿದ್ದರು. ಈ ಹಿಂದೆ ಎಫ್‌ಬಿಐಯನ್ನು ಟೀಕಿಸಿದ್ದರು.

ಇದು ಅವರ ನಿಷ್ಪಕ್ಷಪಾತ ನಾಯಕತ್ವದ ಬಗ್ಗೆ ಸಂದೇಹಗಳನ್ನು ಹುಟ್ಟುಹಾಕಿದೆ.

> ಭ್ರಷ್ಟಾಚಾರ ಬಯಲಿಗೆಳೆಯಲು ತಮ್ಮ ವೃತ್ತಿ ಬದುಕನ್ನು ಮೀಸಲಿಟ್ಟಿರುವ ಅವರನ್ನು ಎಫ್‌ಬಿಐ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಲು ನನಗೆ ಅತೀವ ಹೆಮ್ಮೆ ಎನಿಸುತ್ತದೆ ಎಂದು ಟ್ರಂಪ್ ಅವರು ತಮ್ಮದೇ ಮಾಲೀಕತ್ವದ ಟ್ರುತ್ ಸೋಷಿಯಲ್ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದರು.




ಕಶ್ ಪಟೇಲ್ ನೇಮಕಾತಿಯನ್ನು ಮೈನೆನ ಸುಸಾನ್ ಕಾಲಿನ್ಸ್, ಅಲಾಸ್ಕಾದ ಲಿಸಾ ಮುರ್ಕೋವ್ಸ್ಕಿ ವಿರೋಧಿಸಿದ ಇಬ್ಬರು ರಿಪಬ್ಲಿಕನ್ ಸೆನೆಟರ್‌ಗಳು. ಎಲ್ಲಾ ಡೆಮಾಕ್ರಾಟ್‌ಗಳು ಕೂಡ ಇದಕ್ಕೆ ವಿರುದ್ಧವಾಗಿದ್ದರು. ಕಶ್ ಪಟೇಲ್ ಒಬ್ಬ ಮಾಜಿ ಭಯೋತ್ಪಾದನಾ ನಿಗ್ರಹ ಪ್ರಾಸಿಕ್ಯೂಟರ್. ಎಫ್‌ಬಿಐಯಲ್ಲಿ ಆಂತರಿಕ ಬದಲಾವಣೆಗಳು ನಡೆಯುತ್ತಿವೆ. ನ್ಯಾಯಾಂಗ ಇಲಾಖೆಯು ಹಲವಾರು ಉನ್ನತ ಅಧಿಕಾರಿಗಳನ್ನು ವಜಾಗೊಳಿಸಿದೆ.

ಜನವರಿ 6ರ ಕ್ಯಾಪಿಟಲ್ ಗಲಭೆಗೆ ಸಂಬಂಧಿಸಿದ ತನಿಖೆಯಲ್ಲಿ ಭಾಗಿಯಾಗಿದ್ದ ಎಫ್‌ಬಿಐ ಏಜೆಂಟ್‌ಗಳ ಹೆಸರುಗಳನ್ನು ಬಹಿರಂಗಪಡಿಸುವಂತೆ ಒತ್ತಡ ಹೇರಲಾಗುತ್ತಿದೆ. ಈ ಎಲ್ಲಾ ಬೆಳವಣಿಗೆಗಳ ನಡುವೆ ಪಟೇಲ್ ಅವರ ನೇಮಕಾತಿ ಮಹತ್ವ ಪಡೆದುಕೊಂಡಿದೆ. ಡೊನಾಲ್ಡ್ ಟ್ರಂಪ್ ನಾಮನಿರ್ದೇಶನ ಅಮೆರಿಕದ ತನಿಖಾ ಸಂಸ್ಥೆ ಫೆಡರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್ ನಿರ್ದೇಶಕ ಸ್ಥಾನಕ್ಕೆ ಭಾರತೀಯ ಮೂಲದ ಕಾಶ್ ಪಟೇಲ್ ಅವರನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಳೆದ ವರ್ಷ ಡಿಸೆಂಬರ್‌ನಲ್ಲಿ ನಾಮನಿರ್ದೇಶನ ಮಾಡಿದ್ದರು.

ಕಾಶ್ ಪಟೇಲ್ ಒಬ್ಬ ಅದ್ಭುತ ವಕೀಲ. ತನಿಖಾಧಿಕಾರಿಯೂ ಹೌದು. ಅಮೆರಿಕ ಫಸ್ಟ್ ನೀತಿ ಪರ ಹೋರಾಟಗಾರ. 44 ವರ್ಷದ ಕಾಶ್ ಪಟೇಲ್ ಅವರು ಟ್ರಂಪ್ ಅವರ ಆಪ್ತರ ಬಳಗದಲ್ಲಿ ಒಬ್ಬರಾಗಿ ಗುರುತಿಸಿ ಕೊಂಡಿದ್ದಾರೆ. 2017ರಲ್ಲಿ ಟ್ರಂಪ್ ಮೊದಲ ಅವಧಿಯ ಆಡಳಿತದ ಕೊನೆಯ ಕೆಲವು ವಾರಗಳಲ್ಲಿ ಅಮೆರಿಕ ರಕ್ಷಣಾ ಇಲಾಖೆಯ 'ಚೀಫ್ ಆಫ್ ಸ್ಟಾಫ್' ಸೇರಿದಂತೆ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು.

### ಎಫ್‌ಬಿಐನಲ್ಲಿ ಸಾಕಷ್ಟು ಬದಲಾವಣೆ

**ಭಾರತೀಯ ಮೂಲದ ಕಶ್ ಪಟೇಲ್ ಎಫ್‌ಬಿಐ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. 51 ಮತ ಪಡೆಯುವ ಮೂಲಕ ಪ್ರಮುಖ ಹುದ್ದೆಗೆ ಆಯ್ಕೆಯಾಗಿದ್ದಾರೆ. ಟ್ರಂಪ್ ಬೆಂಬಲಿಗರಾದ ಪಟೇಲ್ ನೇಮಕಾತಿಯ ವಿರುದ್ಧ ಈಗಾಗಲೇ ಅಪಸ್ವರಗಳು ಕೇಳಿ ಬರಲಾರಂಭಿಸಿವೆ. ಅವರ ಅರ್ಹತೆ ಮತ್ತು ರಾಜಕೀಯ ನಿಷ್ಠೆಯ ಬಗ್ಗೆ ಪ್ರಶ್ನೆಗಳು ಹುಟ್ಟಿಕೊಂಡಿವೆ. ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಎಫ್‌ಬಿಐನಲ್ಲಿ ಈಗಾಗಲೇ ಸಾಕಷ್ಟು ಬದಲಾವಣೆಗಳಾಗಿವೆ. ಜನವರಿ 6ರ ಕ್ಯಾಪಿಟಲ್ ಗಲಭೆಯ ತನಿಖೆಯಲ್ಲಿ ಭಾಗಿಯಾದ ಅಧಿಕಾರಿಗಳನ್ನು ವಜಾಗೊಳಿಸಲಾಗಿದೆ. ಈ ಸೂಕ್ಷ್ಮ ಸಮಯದಲ್ಲಿ ಕಶ್ ಪಟೇಲ್ ಎಫ್‌ಬಿಐ ನಿರ್ದೇಶಕರಾಗಿ ನೇತೃತ್ವ ವಹಿಸಿಕೊಳ್ಳುತ್ತಿದ್ದಾರೆ.**

## ಮಿನಿ ನ್ಯೂಸ್


### ಚೀನಾದ ನೌಕಾಪಡೆ ಸಮರಭ್ಯಾಸ ಆಸ್ಟ್ರೇಲಿಯಾ ಅಲರ್ಟ್

**ಮೆಲ್ಬರ್ನ್:** ಚೀನಾದ ಯುದ್ಧನೌಕೆಗಳು ತಾಸ್ಮನ್ ಸಮುದ್ರದಲ್ಲಿ ಸಮರಭ್ಯಾಸ ನಡೆಸುತ್ತಿರುವ ಹಿನ್ನಲೆಯಲ್ಲಿ ಆಸ್ಟ್ರೇಲಿಯದ ವಿಮಾನ ನಿಲ್ದಾಣಗಳು ಮತ್ತು ನ್ಯೂಜಿಲೆಂಡ್ ನಡುವೆ ಹಾರಾಟ ನಡೆಸುತ್ತಿರುವ ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳೂ ಎಚ್ಚರವಹಿಸುವಂತೆ ಆಸ್ಟ್ರೇಲಿಯಾ ಎಚ್ಚರಿಸಿದೆ ಎಂದು ವಿದೇಶಾಂಗ ಸಚಿವ ಪೆನ್ನಿ ವಾಂಗ್ ಹೇಳಿದ್ದಾರೆ. ಮೂರು ಚೀನಾದ ಯುದ್ಧನೌಕೆಗಳು ಆಸ್ಟ್ರೇಲಿಯಾದ ಪೂರ್ವ ಕರಾವಳಿಯಲ್ಲಿ ವ್ಯಾಯಾಮಗಳನ್ನು ನಡೆಸುವುದರಿಂದ ದೇಶಗಳ ನಡುವಿನ ವಾಯುಪ್ರದೇಶದಲ್ಲಿ ಸಂಭಾವ್ಯ ಅಪಾಯದ ಬಗ್ಗೆ ವಾಣಿಜ್ಯ ಪೈಲಟ್‌ಗಳಿಗೆ ಆಸ್ಟ್ರೇಲಿಯಾ ವೈಮಾನಿಕ ನಿಯಂತ್ರಣಾ ಪ್ರಾಧಿಕಾರ ಎಚ್ಚರಿಕೆ ನೀಡಿದೆ.

ಇದರ ಪರಿಣಾಮವಾಗಿ ಹಲವಾರು ಅಂತರಾಷ್ಟ್ರೀಯ ವಿಮಾನಗಳ ಮಾರ್ಗವನ್ನು ಬದಲಿಸಲಾಗಿದೆ ಎಂದು ಎಬಿಸಿ ವರದಿ ಮಾಡಿದೆ. ಟಾಸ್ಕ್ ಗ್ರೂಪ್ ಈ ಪ್ರದೇಶದಲ್ಲಿ ಹಡಗುಗಳು ಮತ್ತು ವಿಮಾನಗಳಿಗೆ ಸಲಹೆ ನೀಡಲು ವ್ಯಾಯಾಮದಲ್ಲಿ ತೊಡಗಿರುವುದು ಸಾಮಾನ್ಯ ಅಭ್ಯಾಸವಾಗಿದೆ ಮತ್ತು ಏರ್ ಸರ್ವಿಸಸ್ ಆಸ್ಟ್ರೇಲಿಯಾ ಏನು ಮಾಡಬೇಕೆಂದು ಮಾಡುತ್ತಿದೆ ಎಂದು ವಾಂಗ್ ತಿಳಿಸಿದರು.

ಆಸ್ಟ್ರೇಲಿಯಾವು ಪಾರದರ್ಶಕತೆಯ ಬಗ್ಗೆ ಚೀನಾದೊಂದಿಗೆ ಚರ್ಚಿಸುತ್ತಿದೆ, ವಿಶೇಷವೆಂದರೆ ನಿಜವಾಗಿ ಕ್ಷಿಪಣೆ, ಗುಂಡು ಹಾರಿಸಲಾಗುತ್ತದೆ ಎಂದು ವಾಂಗ್ ಹೇಳಿದರು. ಚೀನೀ ಯುದ್ಧನೌಕೆಗಳು ಆಸ್ಟ್ರೇಲಿಯಾದ ಪೂರ್ವ ಕರಾವಳಿಯ ಅಂತರರಾಷ್ಟ್ರೀಯ ನೀರಿನಲ್ಲಿ ಹಾದು ಹೋಗುತ್ತಿರುವಾಗ ಆಸ್ಟ್ರೇಲಿಯನ್ ಮಿಲಿಟರಿ ಹಡಗುಗಳು ಮತ್ತು ವಿಮಾನಗಳು ನಿಗಾವಹಿಸುತ್ತಿವೆ

### ಟೈಮ್ಸ್ ವರ್ಷದ ಮಹಿಳೆಯರ ಪಟ್ಟಿಯಲ್ಲಿ ಪೂರ್ಣಿಮಾ ದೇವಿ



**ನ್ಯೂಯಾರ್ಕ್:** ಭಾರತೀಯ ಜೀವಶಾಸ್ತ್ರಜ್ಞ ಮತ್ತು ವನ್ಯಜೀವಿ ಸಂರಕ್ಷಕರೊಬ್ಬರನ್ನು ಟೈಮ್ ಮ್ಯಾಗಜೀನ್ ಈ ವರ್ಷದ ವರ್ಷದ ಮಹಿಳೆಯರ ಪಟ್ಟಿಯಲ್ಲಿ ಹೆಸರಿಸಿದೆ. 45 ವರ್ಷದ ಪೂರ್ಣಿಮಾ ದೇವಿ ಬರ್ಮನ್ ಅವರು ಟೈಮ್ಸ್ ಆಫ್ ದಿ ಇಯರ್ 2025 ಪಟ್ಟಿಯಲ್ಲಿ ಸ್ಥಾನ ಪಡೆದ ಏಕೈಕ ಭಾರತೀಯ ಮಹಿಳೆಯಾಗಿದ್ದಾರೆ. 13 ಮಹಿಳೆಯರ ಪಟ್ಟಿಯಲ್ಲಿ ನಟಿ ನಿಕೋಲ್ ಕಿಡ್ಮನ್, ಫ್ರಾನ್ಸ್‌ನ ಗಿಸೆಲೆ ಪೆಲಿಕಾಟ್ ಕೂಡ ಸೇರಿದ್ದಾರೆ.

ಅವರು ತಮ್ಮ ಪತಿಯಿಂದ ಮಾದಕವಸ್ತು ಸೇವಿಸಲ್ಪಟ್ಟರು, 70 ಕ್ಕೂ ಹೆಚ್ಚು ವಿಭಿನ್ನ ಪುರುಷರಿಂದ ಅತ್ಯಾಚಾರಕ್ಕೊಳಗಾದರು, ಲೈಂಗಿಕ ಹಿಂಸಾಚಾರದ ವಿರುದ್ಧದ ಅಭಿಯಾನದಲ್ಲಿ ಜಾಗತಿಕ ಐಕಾನ್ ಆಗಿ ಹೊರಹೊಮ್ಮಿದ್ದಾರೆ. ಬರ್ಮನ್ ಅವರು 2007 ರಲ್ಲಿ ಅವರು ವಾಸಿಸುವ ಅಸ್ಸಾಂ ನಲ್ಲಿ ಹೆಚ್ಚಿನ ಸಹಾಯಕ ಕೊಕ್ಕರೆಗಳ ಕುಟುಂಬಕ್ಕೆ ನೆಲೆಯಾಗಿದ್ದ ಮರವನ್ನು ಕತ್ತರಿಸುವುದನ್ನ ಪ್ರಶ್ನಿಸಿದಾಗ ಅವರ ಮೇಲೆ ಗ್ರಾಮಸ್ಥರು ದಬ್ಬಾಳಿಕೆ ನಡೆಸಿದ್ದರು. ಆ ನಂತರ ಅವರು ವನ್ಯಜೀವಿ ಸಂರಕ್ಷಕರಾಗಿ ಮನೆ ಮಾತಾಗಿದ್ದರು.

## ಆರ್‌ಬಿಐನಿಂದ ನಿಷೇಧಕ್ಕೊಳಗಾಗಿದ್ದ ನ್ಯೂ ಇಂಡಿಯಾ ಕೋ-ಆಪ್ ಬ್ಯಾಂಕ್

**ಮುಂಬೈ:** ಮುಂಬೈ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗ 122 ಕೋಟಿ ರೂಪಾಯಿ ದುರುಪಯೋಗ ಪ್ರಕರಣದಲ್ಲಿ ನ್ಯೂ ಇಂಡಿಯಾ ಕೋ-ಆಪರೇಟಿವ್ ಬ್ಯಾಂಕಿನ ಮಾಜಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಭಿಮನ್ಯು ಭೋನ್ ಅವರನ್ನು ಬಂಧಿಸಿದೆ. ಪ್ರಕರಣದಲ್ಲಿ ಇದು ಮೂರನೇ ಬಂಧನವಾಗಿದೆ. ಬ್ಯಾಂಕಿನ ಜನರಲ್ ಮ್ಯಾನೇಜರ್ ಹಿತೇಶ್ ಮೆಹ್ತಾ ಅವರು ಬ್ಯಾಂಕಿನ ಮೀಸಲು ನಿಧಿಯಿಂದ ಸುಮಾರು 122 ಕೋಟಿ ನಗದನ್ನು ದುರುಪಯೋಗಪಡಿಸಿಕೊಂಡ ಆರೋಪ ಎದುರಿಸುತ್ತಿದ್ದಾರೆ. ಈ ಹಗರಣ ಸಂಬಂಧ ಹೇಳಿಕೆ ದಾಖಲಿಸಿಕೊಳ್ಳಲು ಭೋನ್‌ರನ್ನು ವಿಚಾರಣೆಗೆ ಕರೆಸಲಾಗಿತ್ತು. ವಿಚಾರಣೆ ವೇಳೆ ಅಪರಾಧದಲ್ಲಿ ಅವರ ಪಾತ್ರ ಸ್ಪಷ್ಟವಾದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಲಾಯಿತು ಎಂದು ಇಒಡಬ್ಲ್ಯು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.




ಈ ಪ್ರಕರಣದಲ್ಲಿ ಇಒಡಬ್ಲ್ಯು ಈ ಹಿಂದೆ ಹಿತೇಶ್ ಮೆಹ್ತಾ, ಡೆವಲಪರ್ ಧರ್ಮೇಶ್ ಪೌನ್ ಅವರನ್ನು ಬಂಧಿಸಿತ್ತು. ಭಾರತೀಯ ರಿಸರ್ವ್ ಬ್ಯಾಂಕ್ ನಡೆಸಿದ ತಪಾಸಣೆಯ ನಂತರ ಹಣದ ದುರುಪಯೋಗದ ಆರೋಪ ಬೆಳಕಿಗೆ ಬಂದಿದೆ. ಬ್ಯಾಂಕಿನ ಪ್ರಸ್ತುತ ದ್ರವ್ಯತೆ ಸ್ಥಿತಿಯನ್ನು ಪರಿಗಣಿಸಿ, ಉಳಿತಾಯ ಬ್ಯಾಂಕ್ ಅಥವಾ ಚಾಲ್ತಿ ಖಾತೆಗಳು, ಠೇವಣಿದಾರರ ಯಾವುದೇ ಇತರ ಖಾತೆಯಿಂದ ಯಾವುದೇ ಮೊತ್ತವನ್ನು ಹಿಂಪಡೆಯಲು ಅನುಮತಿಸಬಾರದು ಎಂದು ಬ್ಯಾಂಕಿಗೆ ನಿರ್ದೇಶನ ನೀಡಲಾಗಿದೆ ಎಂದು ಆರ್‌ಬಿಐ ತನ್ನ ಪ್ರಕಟಣೆಯಲ್ಲಿ ಬರೆದಿದೆ. ನ್ಯೂ ಇಂಡಿಯಾ ಕೋ-ಆಪರೇಟಿವ್ ಬ್ಯಾಂಕಿನ ಠೇವಣಿಗಳಿಂದ ಹಿಂಪಡೆಯುವಿಕೆಯನ್ನು ಆರ್‌ಬಿಐ ನಿಷೇಧಿಸಿತು. ಆದರೆ ಠೇವಣಿಗಳ ವಿರುದ್ಧ ಸಾಲಗಳನ್ನು ಹೊಂದಿಸಲು ಅವಕಾಶ ಮಾಡಿಕೊಟ್ಟಿತು. ಇದು ಕೆಲವು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಹಿತೇಶ್ ಮೆಹ್ತಾ ವಿರುದ್ಧ ಕ್ರಿಮಿನಲ್ ನಂಬಿಕೆ ದ್ರೋಹದ ಪ್ರಕರಣ ದಾಖಲಾಗಿದ್ದು, 122 ಕೋಟಿ ರೂಪಾಯಿ ಮೌಲ್ಯದ ಮೀಸಲು ನಿಧಿಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಹಿತೇಶ್ ಮೆಹ್ತಾ ತಮ್ಮ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಮತ್ತು ಮುಂಬೈನ ಪ್ರಭಾದೇವಿ, ಗೋರೆಗಾಂವ್ ಶಾಖೆಗಳ ಮೀಸಲು ನಿಧಿಯನ್ನು ತಿರುಚಿದ್ದಾರೆ ಎಂದು ಆರೋಪಿಸಲಾಗಿದೆ. ಭಾರತೀಯ ದಂಡ ಸಂಹಿತೆ, 2023 ರ ಸೆಕ್ಷನ್ 316(5) 61(2) ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. 2024ರ ಮಾರ್ಚ್ ವೇಳೆಗೆ ಈ ಬ್ಯಾಂಕ್ 2,436 ಕೋಟಿ ರೂ. ಠೇವಣಿಗಳನ್ನು ಹೊಂದಿತ್ತು. ಠೇವಣಿದಾರರು ಠೇವಣಿ ವಿಮಾ ಯೋಜನೆಯಡಿ 5 ಲಕ್ಷ ರೂಪಾಯಿಗಳವರೆಗಿನ ವಿಮೆಯನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ. ಠೇವಣಿದಾರರು ತಮ್ಮ ಕ್ಲೈಮ್‌ಗಳನ್ನು ಬ್ಯಾಂಕಿನಲ್ಲಿ ಠೇವಣಿ ಇಡಲು ತಿಳಿಸಲಾಗಿದೆ.

**ಸಹಕಾರಿ ಬ್ಯಾಂಕಿನ ವಿರುದ್ಧ ಕ್ರಮ ಕೈಗೊಳ್ಳಲು ಕಾರಣವೇನು?:** ಈ ಬ್ಯಾಂಕಿನ ದ್ರವ್ಯತೆಯನ್ನು ಗಮನದಲ್ಲಿಟ್ಟುಕೊಂಡು ಆರ್ ಬಿಐ ಕ್ರಮ ಕೈಗೊಂಡಿದೆ. ಈ ಬ್ಯಾಂಕಿನ ದ್ರವ್ಯತೆ ಸ್ಥಿತಿಯ ಬಗ್ಗೆ ಕಳವಳಗಳಿವೆ. ಇದರಿಂದಾಗಿ ಆರ್‌ಬಿಐ ಉಳಿತಾಯ, ಚಾಲ್ತಿ, ಯಾವುದೇ ಇತರ ಠೇವಣಿ ಖಾತೆಯಿಂದ ಹಣವನ್ನು ಹಿಂಪಡೆಯುವುದರ ಮೇಲೆ ನಿರ್ಬಂಧಗಳನ್ನು ವಿಧಿಸಿದೆ. ಠೇವಣಿದಾರರ ಹಿತಾಸಕ್ತಿಗಳನ್ನು ಕಾಪಾಡಲು ಈ ಕ್ರಮಗಳನ್ನು ಜಾರಿಗೆ ತರಲಾಗಿದೆ.

## ಟೀಕೆ ಬಿಟ್ಟು ನಿಮ್ಮ ಪಕ್ಷ ನೋಡಿಕೊಳ್ಳಿ ಸಿಎಂ ರೇಖಾ ಗುಪ್ತಾ ವಾಗ್ದಾಳಿ

**ನವದೆಹಲಿ:** ನಿಮ್ಮದೇ ಪಕ್ಷದ ಹಲವು ನಾಯಕರು ಪಕ್ಷ ತೊರೆಯಲು ಸಜ್ಜಾಗಿದ್ದಾರೆ. ಟೀಕೆ ಮಾಡುವುದು ಬಿಟ್ಟು, ನಿಮ್ಮ-ನಿಮ್ಮ ಪಕ್ಷಗಳ ನೋಡಿಕೊಳ್ಳಿ ಎಂದು ವಿರೋಧ ಪಕ್ಷಗಳ ವಿರುದ್ಧ ದೆಹಲಿ ನೂತನ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಶುಕ್ರವಾರ ವಾಗ್ದಾಳಿ ನಡೆಸಿದ್ದಾರೆ. ಅವರು ಮೊದಲು ತಮ್ಮ ತಮ್ಮ ಪಕ್ಷಗಳನ್ನು ನೋಡಿಕೊಳ್ಳಲಿ. ಸಾಕಷ್ಟು ಮಂದಿ ಪಕ್ಷಗಳ ತೊರೆಯಲು ಬಯಸಿದ್ದಾರೆ. ಸಿಎಜಿ ವರದಿಯನ್ನು ಸದನದಲ್ಲಿ ಮಂಡಿಸಿದಾಗ ಹಲವರ ಬಂಡವಾಳ ಬಯಲಾಗುತ್ತದೆ.

> **ಯಮುನಾ ನದಿಯ ದಡದಲ್ಲಿ ಸಂಜೆ ಆರತಿಯಲ್ಲಿ ಭಾಗವಹಿಸಿದ ನಂತರ, ಯಮುನಾ ನದಿಯನ್ನು ಶುದ್ಧೀಕರಿಸುವ ಕುರಿತು ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿದೆ. ಇದು ದೆಹಲಿ ಸರ್ಕಾರದ ಆದ್ಯತೆಯಾಗಿರುತ್ತದೆ**
>
> **- ರೇಖಾ ಗುಪ್ತಾ, ದೆಹಲಿ ನೂತನ ಮುಖ್ಯಮಂತ್ರಿ**


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರ ರಾಜಧಾನಿಯಲ್ಲಿ ಕಾಂಗ್ರೆಸ್ ಪಕ್ಷ 15 ವರ್ಷಗಳ ಕಾಲ ಆಳ್ವಿಕೆ ನಡೆಸಿತು. ಆಮ್ ಆದ್ಮಿ ಪಕ್ಷ 13 ವರ್ಷಗಳ ಕಾಲ ಆಳ್ವಿಕೆ ನಡೆಸಿತು. ತಾವು ಏನು ಮಾಡಿದರು ಎಂಬುದನ್ನು ನೋಡುವುದು ಬಿಟ್ಟು, ಅಧಿಕಾರಕ್ಕೆ ಬಂದು ಒಂದು ದಿನದ ಸರ್ಕಾರವನ್ನು ಹೇಗೆ ಪ್ರಶ್ನಿಸುತ್ತಾರೆ ಎಂದು ಕಿಡಿಕಾರಿದ್ದಾರೆ. ಪ್ರಮಾಣವಚನ ಸ್ವೀಕರಿಸಿದ ತಕ್ಷಣ ಮೊದಲ ದಿನವೇ ಸಂಪುಟ ಸಭೆ ನಡೆಸಿದ್ದೇವೆ. ಆಮ್ ಆದ್ಮಿ ಪಕ್ಷ ತಡೆಹಿಡಿದಿದ್ದ ಆಯುಷ್ಮಾನ್ ಭಾರತ್ ಯೋಜನೆಯನ್ನು ಜಾರಿಗೆ ಬರುವಂತೆ ಮಾಡಿದ್ದೇವೆ. ಮೊದಲ ದಿನವೇ ದೆಹಲಿಯ ಜನರಿಗೆ 10 ಲಕ್ಷ ರೂ.ಗಳ ಪ್ರಯೋಜನವನ್ನು ನೀಡಿದ್ದೇವೆ. ಅವರಿಗೆ ನಮ್ಮನ್ನು ಪ್ರಶ್ನಿಸುವ ಯಾವುದೇ ಹಕ್ಕಿಲ್ಲ ಎಂದರು. ಇದೇ ವೇಳೆ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ದೆಹಲಿಯ ಕಲ್ಯಾಣ ಕುರಿತ ಬಿಜೆಪಿಯ ಬದ್ಧತೆಯನ್ನು ಅವರು ಮತ್ತಷ್ಟು ಒತ್ತಿ ಹೇಳಿದರು. ನಾವೀಗ ದೆಹಲಿಯ ಬಗ್ಗೆ ಚಿಂತಿಸುತ್ತೇವೆ. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ದೆಹಲಿ ತನ್ನ ಹಕ್ಕುಗಳನ್ನು ಪಡೆಯುತ್ತದೆ ಎಂದು ಹೇಳಿದರು. ಬಳಿಕ ಕಾಂಗ್ರೆಸ್, ಎಎಪಿಯನ್ನು ಟೀಕಿಸಿದ ಅವರು, ಅವರು ಮೊದಲು ತಮ್ಮ ತಮ್ಮ ಪಕ್ಷಗಳನ್ನು ನೋಡಿಕೊಳ್ಳಲಿ. ಸಾಕಷ್ಟು ಮಂದಿ ಪಕ್ಷಗಳ ತೊರೆಯಲು ಬಯಸಿದ್ದಾರೆ. ಸಿಎಜಿ ವರದಿಯನ್ನು ಸದನದಲ್ಲಿ ಮಂಡಿಸಿದಾಗ ಹಲವರ ಬಂಡವಾಳ ಬಯಲಾಗುತ್ತದೆ. ಇದರಿಂದ ಚಿಂತಿತರಾಗಿದ್ದಾರೆಂದು ವ್ಯಂಗ್ಯವಾಡಿದರು.



## ಕುಂಭ ಮೇಳದಿಂದ ಉ. ಪ್ರ, ಆರ್ಥಿಕತೆಗೆ 3 ಲಕ್ಷ ಕೋಟಿ ರೂ. ಹರಿದು ಬಂದಿದೆ

**ಲಖನೌ:** ಉತ್ತರ ಪ್ರದೇಶದ ಪ್ರಯಾಗ್ ರಾಜ್ ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದ ಯಶಸ್ಸನ್ನು ಎತ್ತಿ ತೋರಿಸಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಈ ಆಧ್ಯಾತ್ಮಿಕ ಉತ್ಸವದಿಂದ ರಾಜ್ಯದ ಆರ್ಥಿಕತೆಗೆ 3 ಲಕ್ಷ ಕೋಟಿ ರೂ. ಹರಿದು ಬಂದಿದೆ ಎಂದು ಶುಕ್ರವಾರ ಹೇಳಿದ್ದಾರೆ. ಪ್ರಸ್ತುತ ಬಜೆಟ್ ಅಧಿವೇಶನದಲ್ಲಿ ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಸಮಾಜವಾದಿ ಪಕ್ಷದ ಶಾಸಕಿ ರಾಗಿಣಿ ಸೋಂಕರ್ ಅವರ ಪ್ರಶ್ನೆಗೆ ಉತ್ತರಿಸಿದ ಯೋಗಿ ಆದಿತ್ಯನಾಥ್, ಕಳೆದ ಎಂಟು ವರ್ಷಗಳಲ್ಲಿ ಸರ್ಕಾರ ಎಂಟು ಕೋಟಿಗೂ ಹೆಚ್ಚು ಜನರನ್ನು ಬಡತನ ರೇಖೆಯಿಂದ ಹೊರತಂದಿದೆ ಎಂದರು. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ, 10 ವರ್ಷಗಳಲ್ಲಿ, ನಾವು 25 ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆ ತರಲು ಸಾಧ್ಯವಾಯಿತು ಮತ್ತು ಕಳೆದ ಎಂಟು ವರ್ಷಗಳಲ್ಲಿ, ನಮ್ಮ ಸರ್ಕಾರ ಆರು ಕೋಟಿಗೂ ಹೆಚ್ಚು ಜನರನ್ನು ಬಡತನದಿಂದ ಹೊರತಂದಿದೆ. ಇದು ಪ್ರತಿಯೊಂದು ವಲಯದಲ್ಲೂ ಬದಲಾವಣೆಗಳಾಗಿವೆ ಎಂದು ತೋರಿಸುತ್ತದೆ ಎಂದರು. ದೇಶ ಮತ್ತು ಜಗತ್ತು ಇಂದು ಉತ್ತರ ಪ್ರದೇಶದ ಸಾಮರ್ಥ್ಯವನ್ನು ನೋಡುತ್ತಿದೆ. ಇದು ಮಹಾಕುಂಭದ ಆಯೋಜನೆಯೊಂದಿಗೆ ಸಂಬಂಧ ಹೊಂದಿದೆ. ಮಹಾಕುಂಭವು ಯುಪಿಯ ಆರ್ಥಿಕತೆಯಲ್ಲಿ 3 ಲಕ್ಷ ಕೋಟಿ ರೂ.ಗೂ ಹೆಚ್ಚು ಬೆಳವಣಿಗೆಯನ್ನು ತರಲಿದೆ ಎಂದು ಸಿಎಂ ಆದಿತ್ಯನಾಥ್ ಹೇಳಿದರು.ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರದ ಉಪಕ್ರಮಗಳ ಬಗ್ಗೆಯೂ ಒತ್ತಿ ಹೇಳಿದ ಅವರು, ಉತ್ತರ ಪ್ರದೇಶ ಪೊಲೀಸ್ ಇಲಾಖೆಯಲ್ಲಿ ಶೇಕಡಾ 20 ರಷ್ಟು ಮಹಿಳೆಯರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ನಮ್ಮ ಸರ್ಕಾರ ಮಹಿಳಾ ಸಬಲೀಕರಣಕ್ಕಾಗಿ ಕೆಲಸ ಮಾಡಿದೆ. ಯುಪಿ ಪೊಲೀಸರಲ್ಲಿ, ಶೇಕಡಾ 20 ರಷ್ಟು ನೇಮಕಾತಿಗಳು ಮಹಿಳೆಯರದ್ದಾಗಿವೆ. ಅವರಿಗೆ ಪ್ರತಿಯೊಂದು ವಲಯದಲ್ಲೂ ಉದ್ಯೋಗಾವಕಾಶ ಸಿಕ್ಕಿವೆ ಎಂದು ಸಿಎಂ ಆದಿತ್ಯನಾಥ್ ಹೇಳಿದರು.

ಬಿಜೆಪಿಯ ಡಬಲ್ ಎಂಜಿನ್ ಸರ್ಕಾರದ ಅಡಿಯಲ್ಲಿ, ರಾಜ್ಯವು ದೇಶದ ಎರಡನೇ ಅತಿದೊಡ್ಡ ಆರ್ಥಿಕತೆಯಾಗಿದೆ ಮತ್ತು 2029ರ ವೇಳೆಗೆ ದೇಶದ ಅತಿದೊಡ್ಡ ಆರ್ಥಿಕತೆಯಾಗಿ, ಒಂದು ಟ್ರಿಲಿಯನ್ ಯುಎಸ್ ಡಾಲರ್ ಗುರಿಯನ್ನು ಸಾಧಿಸುವ ಹಾದಿಯಲ್ಲಿದೆ ಎಂದು ಉತ್ತರ ಪ್ರದೇಶ ಸಿಎಂ ಹೇಳಿದರು.



## ಶಾಲೆಗೆ ನಡೆದುಕೊಂಡು ಹೋಗುತ್ತಿದ್ದ ವೇಳೆ ಹೃದಯಾಘಾತ



**ಹೈದರಾಬಾದ್:** ತೆಲಂಗಾಣದ ಕಾಮರೆಡ್ಡಿ ಜಿಲ್ಲೆಯಲ್ಲಿ ಗುರುವಾರ ಬೆಳಗ್ಗೆ ಶಾಲೆಗೆ ನಡೆದುಕೊಂಡು ಹೋಗುತ್ತಿದ್ದ 10ನೇ ತರಗತಿಯ ವಿದ್ಯಾರ್ಥಿನಿಯೊಬ್ಬರಿಗೆ ಹೃದಯಾಘಾತವಾಗಿದ್ದು, ಶಾಲೆಯ ಹೊರ ಭಾಗದಲ್ಲಿಯೇ ಮೃತಪಟ್ಟಿದ್ದಾರೆ. ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ವಿದ್ಯಾರ್ಥಿನಿ ಸಾವಿನ ಬಗ್ಗೆ ದುಃಖ ವ್ಯಕ್ತಪಡಿಸಿದ್ದಾರೆ. ಆಕೆಯ ಮೃತದೇಹವನ್ನು ಸ್ವಗ್ರಾಮಕ್ಕೆ ಕೊಂಡೊಯ್ಯಲಾಗಿದೆ. ಸಂತ್ರಸ್ತೆಯನ್ನು 16 ವರ್ಷದ ಶ್ರೀನಿಧಿ ಎಂದು ಗುರುತಿಸಲಾಗಿದ್ದು, ರಾಮರೆಡ್ಡಿ ಮಂಡಲದ ಸಿಂಗರಾಯಪಲ್ಲಿ ಗ್ರಾಮದವರು. ಖಾಸಗಿ ಶಾಲೆಯಲ್ಲಿ ಓದಲೆಂದು ಕಾಮರೆಡ್ಡಿಯಲ್ಲಿ ವಾಸಿಸುತ್ತಿದ್ದರು. ಶಾಲೆಯ ಬಳಿ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದಿದ್ದಾಳೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಶಾಲೆಯ ಶಿಕ್ಷಕಿಯೊಬ್ಬರು ಆಕೆಯನ್ನು ಗಮನಿಸಿ ಕೂಡಲೇ ಆಸ್ಪತ್ರೆಗೆ ದಾಖಲಿಸಿದ್ದಾರೆ.

**10ನೇ ತರಗತಿ ವಿದ್ಯಾರ್ಥಿನಿ ಸಾವು**

ಆಕೆಯನ್ನು ಪರೀಕ್ಷಿಸಿದ ವೈದ್ಯರು ಸಿಪಿಆರ್ ಸೇರಿದಂತೆ ಪ್ರಾಥಮಿಕ ಚಿಕಿತ್ಸೆಯನ್ನು ನೀಡಿದ್ದಾರೆ. ಆದರೆ, ಆಕೆ ಪ್ರತಿಕ್ರಿಯಿಸದ ಮತ್ತೊಂದು ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ. ಆದರೆ, ಆ ವೇಳೆಗಾಗಲೇ ಶ್ರೀನಿಧಿ ಹೃದಯಾಘಾತದಿಂದ ಸಾವಿಗೀಡಾಗಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ವಿದ್ಯಾರ್ಥಿನಿ ಸಾವಿನ ಬಗ್ಗೆ ದುಃಖ ವ್ಯಕ್ತಪಡಿಸಿದ್ದಾರೆ. ಆಕೆಯ ಮೃತದೇಹವನ್ನು ಸ್ವಗ್ರಾಮಕ್ಕೆ ಕೊಂಡೊಯ್ಯಲಾಗಿದೆ. ಅಲಿಘರ್‌ನ ಸಿರೌಲಿ ಗ್ರಾಮದ 6 ನೇ ತರಗತಿ ವಿದ್ಯಾರ್ಥಿ ಮೋಹಿತ್ ಚೌಧರಿ ಹೃದಯಾಘಾತದಿಂದ ಸಾವಿಗೀಡಾದ ತಿಂಗಳ ನಂತರ ಶ್ರೀನಿಧಿಯ ಸಾವು ಸಂಭವಿಸಿದೆ. 14 ವರ್ಷದ ಬಾಲಕ ವಾರ್ಷಿಕ ಕ್ರೀಡಾ ದಿನದ ಸ್ಪರ್ಧೆಗೆ ತಯಾರಿ ನಡೆಸುತ್ತಿದ್ದು, ಅಭ್ಯಾಸದ ವೇಳೆ ಕುಸಿದು ಬಿದ್ದಿದ್ದಾನೆ. ಅದೇ ಜಿಲ್ಲೆಯ ಮತ್ತೊಂದು ಮಗು ಎಂಟು ವರ್ಷದ ದೀಕ್ಷಾ ತನ್ನ ಸ್ನೇಹಿತರೊಂದಿಗೆ ಆಟ ವಾಡುತ್ತಿದ್ದಾಗ ಹೃದಯಾಘಾತದಿಂದ ಸಾವಿಗೀಡಾಗಿದ್ದಳು.

## ನೆಲಬಾಂಬ್ ಸ್ಫೋಟ ಸೇನಾ ಯೋಧನಿಗೆ ಗಾಯ

**ಶ್ರೀನಗರ:** ಗುರುವಾರ ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ನಿಯಂತ್ರಣ ರೇಖೆಯ ಬಳಿ ನಡೆದ ನೆಲಬಾಂಬ್ ಸ್ಫೋಟ ದಲ್ಲಿ ಸೇನಾ ಸೈನಿಕರೊಬ್ಬರು ಗಾಯ ಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗಸ್ತು ತಿರುಗುತ್ತಿದ್ದ ರೈಫಲ್‌ಮನ್ ಮೊಹಮ್ಮದ್ ಆಸಿಫ್ ರಾಥರ್ ಸಂಜೆ 5 ಗಂಟೆ ಸುಮಾರಿಗೆ ಮೆಂಧರ್ ಉಪವಿಭಾಗದ ಬಾಲಕೋಟ್ ಸೆಕ್ಟರ್‌ನ ಮುಂಭಾಗದ ಪ್ರದೇಶದಲ್ಲಿ ಆಕಸ್ಮಿಕವಾಗಿ ನೆಲಬಾಂಬ್ ಮೇಲೆ ಹೆಜ್ಜೆ ಹಾಕಿದ್ದಾರೆ ಎಂದು ತಿಳಿದುಬಂದಿದೆ. ಗಸ್ತು ತಿರುಗುತ್ತಿದ್ದ ರೈಫಲ್‌ಮನ್ ಮೊಹಮ್ಮದ್ ಆಸಿಫ್ ರಾಥರ್ ಸಂಜೆ 5 ಗಂಟೆ ಸುಮಾರಿಗೆ ಮೆಂಧರ್ ಉಪವಿಭಾಗದ ಬಾಲಕೋಟ್ ಸೆಕ್ಟರ್‌ನ ಮುಂಭಾಗದ ಪ್ರದೇಶದಲ್ಲಿ ಆಕಸ್ಮಿಕವಾಗಿ ನೆಲಬಾಂಬ್ ಮೇಲೆ ಹೆಜ್ಜೆ ಹಾಕಿದ್ದಾರೆ ಎಂದು ತಿಳಿದುಬಂದಿದೆ. ಯೋಧನ ಎಡಗಾಲಿಗೆ ಗಾಯವಾಗಿದ್ದು, ಚಿಕಿತ್ಸೆಗಾಗಿ ಮಿಲಿಟರಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಳನುಸುಳುವಿಕೆ ವಿರೋಧಿ ಅಡಚಣೆ ವ್ಯವಸ್ಥೆಯ ಭಾಗವಾಗಿ, ಮುಂಭಾಗದ ಪ್ರದೇಶಗಳು ನೆಲಬಾಂಬ್‌ಗಳಿಂದ ಕೂಡಿದ್ದು, ಅವು ಕೆಲವೊಮ್ಮೆ ಮಳೆಯಿಂದ ಕೊಚ್ಚಿ ಹೋಗುತ್ತವೆ, ಇದರ ಪರಿಣಾಮವಾಗಿ ಅಪಘಾತಗಳು ಸಂಭವಿಸುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಅಪರೂಪದ ಖನಿಜ ನೀಡಿದರಷ್ಟೇ ಸೇನಾ ನೆರವು

**ಕೀವ್:** ರಷ್ಯಾದೊಂದಿಗೆ ನಡೆಯುತ್ತಿರುವ ಯುದ್ಧದಲ್ಲಿ ಅಮೆರಿಕದ ಭದ್ರತಾ ನೆರವು ಮುಂದುವರಿಯಬೇಕಾದರೆ, ಉಕ್ರೇನ್‌ನಲ್ಲಿರುವ ಅಪರೂಪದ ಖನಿಜ ನಿಕ್ಷೇಪಗಳನ್ನು ತನಗೆ ನೀಡಬೇಕು ಎಂಬ ವಾಷಿಂಗ್ಟನ್ ಬೇಡಿಕೆಯು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ನಿದ್ದೆಗೆಡಿಸಿದೆ.

**ಯುಎಸ್ ಬೇಡಿಕೆಗೆ ಬೇಸ್ತುಬಿದ್ದ ಉಕ್ರೇನ್**

ಉಕ್ರೇನ್‌ನಲ್ಲಿ ಲಭ್ಯವಿರುವ ಅಪರೂಪದ ಖನಿಜ ಹಾಗೂ ಲೋಹಗಳಾದ ಟೈಟಾನಿಯಂ, ಗುಲಿಯಂಗೆ ಅಮೆರಿಕ ಬೇಡಿಕೆ ಇಟ್ಟಿದೆ.

ಸದ್ಯ ಇಂಥ ಅಪರೂಪದ ಲೋಹಗಳು ಚೀನಾ ಬಳಿ ಇದ್ದು, ಅದು ಜಗತ್ತಿನ ಪೂರಕ ಸರಪಳಿಯನ್ನು ನಿರ್ವಹಿಸುತ್ತಿದೆ. ಬೀಜಿಂಗ್‌ನ ಈ ಹಿಡಿತವನ್ನು ತಪ್ಪಿಸಲು ವಾಷಿಂಗ್ಟನ್ ಮುಂದಡಿ ಇಟ್ಟಿದೆ. ಇದೇ ವಿಷಯವಾಗಿ ಇತ್ತೀಚೆಗೆ ಉಕ್ರೇನ್, ಅಮೆರಿಕ ನಡುವೆ ಮಾತುಕತೆ ನಡೆದಿತ್ತು. ರಷ್ಯಾದೊಂದಿಗಿನ ಯುದ್ಧದಲ್ಲಿ ಅಮೆರಿಕ ನೀಡಿದ್ದ ಸೇನಾ ನೆರವಿಗೆ ಬದಲಾಗಿ 500 ಶತಕೋಟಿ ಅಮೆರಿಕನ್ ಡಾಲರ್‌ನಷ್ಟು ಮೌಲ್ಯದ ಖನಿಜವನ್ನು ತನಗೆ ನೀಡಬೇಕು ಎಂದು ವಾಷಿಂಗ್ಟನ್ ಬೇಡಿಕೆ ಇಟ್ಟಿತ್ತು. ಆದರೆ ಈ ಬೇಡಿಕೆಯನ್ನು ಝೆಲೆನ್‌ಸ್ಕಿ ತಿರಸ್ಕರಿಸಿದ್ದರು. ಅಮೆರಿಕ ನೀಡಿದ ನೆರವಿಗೆ ಬದಲಾಗಿ 500 ಶತಕೋಟಿ ಡಾಲರ್ ನೀಡಿ ಎಂದು ಕೇಳುವ ಬದಲು ಅದೇ ಮೌಲ್ಯದ ಖನಿಜವನ್ನು ನೀಡಿ ಎಂದಿತು.

ಆದರೆ ಅದೇನು ಗಂಭೀರ ಪ್ರಮಾಣದ ಚರ್ಚೆ ಆಗಿರಲಿಲ್ಲ. ಅಮೆರಿಕ ನೀಡಿದ ನೆರವಿಗೆ ಬದಲಾಗಿದೆ ಉಕ್ರೇನ್‌ನಲ್ಲಿರುವ ಖನಿಜ ನಿಕ್ಷೇಪದ ಶೇ 50ರಷ್ಟು ಮಾಲೀಕತ್ವವನ್ನು ಅವರಿಗೆ ಬಿಟ್ಟುಕೊಡುವ ಬೇಡಿಕೆ ಇಡಲಾಗಿತ್ತು ಎಂದು ಝೆಲೆನ್‌ಸ್ಕಿ ಫೆ. 19ರಂದು ಹೇಳಿದ್ದರು. 2022ರ ಫೆಬ್ರುವರಿಯಲ್ಲಿ ಉಕ್ರೇನ್ ವಿರುದ್ಧ ರಷ್ಯಾ ಸಮರ ಸಾರಿತು. ಉಕ್ರೇನ್‌ಗೆ ಶಸ್ತ್ರಾಸ್ತ್ರಗಳಿಗೆ 67 ಶತಕೋಟಿ ಅಮೆರಿಕನ್ ಡಾಲರ್ ಹಾಗೂ ಬಜೆಟ್‌ಗೆ ನೇರ ನೆರವಾಗಿ 31.5 ಶತಕೋಟಿ ಅಮೆರಿಕನ್ ಡಾಲರ್ ನೆರವು ನೀಡಿದೆ. ಆದರೆ ಇದಕ್ಕೆ ಪರ್ಯಾಯವಾಗಿ ಕೇಳಿದ ಖನಿಜ ನೀಡಲು ನಿರಾಕರಿಸಿದ ಝೆಲೆನ್‌ಸ್ಕಿ ನಡೆಗೆ ಟ್ರಂಪ್ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದು ವರದಿಯಾಗಿದೆ.

# ಸಹಾಯಹಸ್ತ ಚಾಚುತ್ತಿರುವ ವಲಸಿಗರು; ಹೋಟೆಲ್‌ವೊಂದರಲ್ಲಿ ಬಂದಿಯಾದ ವಲಸಿಗರು

## 299 ಅಕ್ರಮ ವಲಸಿಗರರನ್ನು ಪನಾಮಗೆ ರವಾನಿಸಿದ ಅಮೆರಿಕ; ಹೋಟೆಲ್‌ನಲ್ಲಿ ಬಂದಿ, ವಲಸಿಗರು ನೇಮಿಸಿಕೊಂಡಿರುವ ವಕೀಲರು ಹೋಟೆಲ್‌ಗೆ ಹೋಗದಂತೆ ತಡೆ

**ಪನಾಮ ಸಿಟಿ:** ನಮಗೆ ಸಹಾಯ ಮಾಡಿ, ನಮ್ಮ ದೇಶದಲ್ಲಿ ನಮಗೆ ಸುರಕ್ಷತೆ ಇಲ್ಲ, ನಾವು ಅಫ್ಘಾನ್ ಹುಡುಗಿಯರು, ನಮಗೆ ಸಹಾಯ ಮಾಡಿ ಎಂಬ ಬರಹಗಳನ್ನು ಕಿಟಿಕಿ ಗಾಜುಗಳ ಮೇಲೆ ಬರೆದು, 'ನಮಗಿಲ್ಲಿ ಸ್ವಾತಂತ್ರ್ಯವಿಲ್ಲ' ಎಂಬಂತೆ ಸಂಜ್ಞಾ ಭಾಷೆ ಮೂಲಕ ಸಹಾಯ ಕೋರುತ್ತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಸಹಾಯಕ್ಕಾಗಿ ಮೊರೆ ಇಡುತ್ತಿರುವವರು ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿದ್ದ ಭಾರತ, ಇರಾನ್, ಅಫ್ಘಾನಿಸ್ತಾನ, ಚೀನಾ ಸೇರಿದಂತೆ ವಿವಿಧ ದೇಶಗಳ ನಾಗರಿಕರು. ಇಂಥ 299 ಮಂದಿಯನ್ನು ಪನಾಮ ದೇಶದ ಪನಾಮ ಸಿಟಿಯ ಹೋಟೆಲ್‌ವೊಂದರಲ್ಲಿ ಕಳೆದ ಶನಿವಾರದಿಂದ ಇರಿಸಲಾಗಿದೆ.ಅಕ್ರಮ ವಲಸಿಗರನ್ನು ದೇಶದಿಂದ ಹೊರದಬ್ಬುವ ಪ್ರಕ್ರಿಯೆಯಲ್ಲಿ ಸಹಕಾರ ನೀಡುವಂತೆ ಅಮೆರಿಕವು ಈಗ ಪನಾಮ, ಕೋಸ್ಟರಿಕಾ ಸೇರಿದಂತೆ ಮಧ್ಯ ಅಮೆರಿಕದ ಕೆಲವು ದೇಶಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಅಮೆರಿಕ ಕಳುಹಿಸುವ ಅಕ್ರಮ ವಲಸಿಗರು ಮತ್ತು ವಲಸಿಗರ ದೇಶಗಳ ನಡುವೆ ಸೇತುವೆಯಾಗಿ ಕೆಲಸ ಮಾಡುವುದಾಗಿ ಪನಾಮ ಹಾಗೂ ಕೋಸ್ಟರಿಕಾ ದೇಶಗಳು ಒಪ್ಪಿಕೊಂಡಿವೆ. ಮುಂದಿನ ವಾರದಲ್ಲಿ ಭಾರತವೂ ಸೇರಿದಂತೆ ಮಧ್ಯ ಏಷ್ಯಾ ದೇಶಗಳ ಹಲವು ನಾಗರಿಕರನ್ನು ಅಮೆರಿಕ ಸೇನಾ ವಿಮಾನಗಳ ಮೂಲಕ ಕೋಸ್ಟರಿಕಾಕ್ಕೆ ಕಳುಹಿಸಲಿದೆ. ಹೋಟೆಲ್‌ನಲ್ಲಿ ಸುಮಾರು 50 ಮಕ್ಕಳೂ ಇದ್ದಾರೆ ಎಂದು ವರದಿಯಾಗಿದೆ.

**ನಮಗಿಲ್ಲಿ ಸ್ವಾತಂತ್ರ್ಯ ಇಲ್ಲ**

**ಆತ್ಮಹತ್ಯೆಗೆ ಯತ್ನ:** ಹೋಟೆಲ್‌ನಲ್ಲಿರುವ ವಲಸಿಗರೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದರು. ಚೀನಾದ ಮಹಿಳೆಯೊಬ್ಬರು ಹೋಟೆಲ್‌ನಿಂದ ತಪ್ಪಿಸಿಕೊಂಡಿದ್ದರು. ಬಳಿಕ ಅವರನ್ನು ಪತ್ತೆ ಮಾಡಲಾಯಿತು. ವಲಸಿಗರೊಬ್ಬರು ತಪ್ಪಿಸಿಕೊಳ್ಳಲು ಹೋಗಿ ಕಾಲಿಗೆ ಪೆಟ್ಟು ಮಾಡಿಕೊಂಡಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

**ಬಿಗಿ ಭದ್ರತೆ:** ಪನಾಮದ ಭದ್ರತಾ ಸಿಬ್ಬಂದಿ ಹೋಟೆಲ್ ಸುತ್ತ ಬಿಗಿ ಭದ್ರತೆ ಕೈಗೊಂಡಿದ್ದಾರೆ. ವಲಸಿಗರು ಯಾವುದೇ ಕಾರಣಕ್ಕೂ ಹೊರಗೆ ಬರದಂತೆ ತಡೆಯುತ್ತಿದ್ದಾರೆ.

ವಲಸಿಗರು ನೇಮಿಸಿಕೊಂಡಿರುವ ವಕೀಲರು ಕೂಡ ಹೋಟೆಲ್ ಒಳಗೆ ಹೋಗದಂತೆ ತಡೆಯಲಾಗುತ್ತಿದೆ. ಜೊತೆಗೆ, ಪತ್ರಕರ್ತರಿಗೆ ನಿರ್ಬಂಧ ಹೇರಲಾಗಿದೆ.

### ಭಾರತೀಯರು ಸುರಕ್ಷಿತ

**ಪನಾಮ ಹೋಟೆಲ್‌ನಲ್ಲಿ ಭಾರತೀಯರು ಇರುವ ಬಗ್ಗೆ ಮತ್ತು ಅವರನ್ನು ವಾಪಸ್ಸು ಕರೆಸಿಕೊಳ್ಳುವ ಬಗ್ಗೆ ಪನಾಮ ಸರ್ಕಾರವು ಅಲ್ಲಿರುವ ಭಾರತದ ರಾಯಭಾರ ಕಚೇರಿಗೆ ಮಾಹಿತಿ ನೀಡಿದೆ. ಈ ಬಗ್ಗೆ ಭಾರತದ ರಾಯಭಾರ ಕಚೇರಿಯು ಗುರುವಾರ ತನ್ನ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದೆ. ನಾವು ಪನಾಮ ಸರ್ಕಾರದೊಂದಿಗೆ ಸಂಪರ್ಕದಲ್ಲಿದ್ದೇವೆ. ಭಾರತೀಯರು ಅಲ್ಲಿನ ಹೋಟೆಲ್‌ನಲ್ಲಿ ಸುರಕ್ಷಿತವಾಗಿದ್ದಾರೆ. ಅವರ ಸುರಕ್ಷತೆಗಾಗಿ ರಾಯಭಾರ ಕಚೇರಿ ತಂಡವು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ' ಎಂದು ಕಚೇರಿ ಪೋಸ್ಟ್ ಹಂಚಿಕೊಂಡಿದೆ.**



### ವಾಪಸ್ ತೆರಳಲು ಒಪ್ಪದ ವಲಸಿಗರು

**ಪನಾಮ ಹೋಟೆಲ್‌ನಲ್ಲಿ ಇರಿಸಲಾಗಿರುವ 299 ವಲಸಿಗರ ಪೈಕಿ 171 ವಲಸಿಗರು ತಮ್ಮ ತಮ್ಮ ದೇಶಗಳಿಗೆ ವಾಪಸು ತೆರಳಲು ಒಪ್ಪಿಕೊಂಡಿದ್ದಾರೆ. ಆದರೆ ಸುಮಾರು 98 ಮಂದಿ ವಾಪಸು ತೆರಳಲು ಒಪ್ಪಿಕೊಂಡಿಲ್ಲ. ಇರಾನ್ ಅಫ್ಘಾನಿಸ್ತಾನದಂಥ ದೇಶದ ವಲಸಿಗರ ಪೈಕಿ ಮಹಿಳೆಯರು ಮತ್ತು ಮಕ್ಕಳೂ ಇದ್ದಾರೆ. ಇವರು ಈಗ ಸಹಾಯಕ್ಕಾಗಿ ಅಂಗಲಾಚುತ್ತಿದ್ದಾರೆ. ಇವರೆಲ್ಲರೂ ಅಮೆರಿಕದ ಆಶ್ರಯ ಕೋರಲು ಇಚ್ಚಿಸುವವರು ಎನ್ನಲಾಗಿದೆ. 98 ವಲಸಿಗರನ್ನು ಪನಾಮ ದೇಶದ ಗಡಿ ಭಾಗದ ಡಾರಿಯನ್ ಪ್ರದೇಶಕ್ಕೆ ರವಾನಿಸಿದೆ. ಅಮೆರಿಕಕ್ಕೆ ತೆರಳಲು ಅಕ್ರಮವಾಗಿ ತೆರಳುವ ಜನರು ಈ ಪ್ರದೇಶದ ಮೂಲಕವೇ ಮೆಕ್ಸಿಕೊ ಪ್ರವೇಶಿಸಿ ಬಳಿಕ ಅಮೆರಿಕದ ಗಡಿ ತಲುಪುತ್ತಾರೆ. ಈ ಪ್ರದೇಶವು ಜಗತ್ತಿನಲ್ಲಿಯೇ ಅತಿ ದಟ್ಟವಾದ ಮತ್ತು ವಿಷ ಪ್ರಾಣಿ ಜಂತುಗಳಿರುವ ಅರಣ್ಯವನ್ನು ಹೊಂದಿದೆ. ಮುಂದಿನ ನಿರ್ಧಾರ ಕೈಗೊಳ್ಳುವವರೆಗೂ ಈ 98 ಮಂದಿ ವಲಸಿಗರು ಇಲ್ಲಿಯೇ ಇರಲಿದ್ದಾರೆ ಎಂದು ಪನಾಮ ಸರ್ಕಾರ ಹೇಳಿದೆ.**


# ಅಫ್ಘಾನಿಸ್ತಾನ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ ದಕ್ಷಿಣ ಆಫ್ರಿಕಾ

**ಸಾಂಘಿಕ ದಾಳಿಗೆ ಕುಸಿದ ಅಫ್ಘಾನಿಸ್ತಾನ**

ಚಾಂಪಿಯನ್ಸ್ ಟ್ರೋಫಿ 2025ರ ಪಂದ್ಯಾವಳಿಯಲ್ಲಿ ದಕ್ಷಿಣ ಆಫ್ರಿಕಾ ಶುಭಾರಂಭ ಮಾಡಿದೆ. ಶುಕ್ರವಾರ ಕರಾಚಿಯ ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಅಫ್ಘಾನಿಸ್ತಾನದ ವಿರುದ್ಧ 107 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಬ್ಯಾಟಿಂಗ್, ಬೌಲಿಂಗ್ ಎರಡೂ ವಿಭಾಗದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ದಕ್ಷಿಣ ಆಫ್ರಿಕಾ ಸುಲಭ ಗೆಲುವು ಸಾಧಿಸಿತು. ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ಅದಕ್ಕೆ ತಕ್ಕಂತೆ ಆರಂಭಿಕ ಆಟಗಾರ ರಿಯಾನ್ ರಿಕಲ್ಟನ್ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಟೋನಿ ಡೆ ಜೋರ್ಝಿ 11 ರನ್ ಗಳಿಸಿ ಔಟಾದರೆ, ನಾಯಕ ತೆಂಬ ಬವುಮಾ ಮತ್ತು ರಿಕಲ್ಟನ್ ಎರಡನೇ ವಿಕೆಟ್‌ಗೆ 129 ರನ್‌ಗಳ ಜೊತೆಯಾಟ ಆಡಿದರು.

ತಾಳ್ಮೆಯ ಆಟವಾಡಿದ ತೆಂಬಾ ಬವುಮಾ 76 ಎಸೆತಗಳಲ್ಲಿ 58 ರನ್ ಗಳಿಸಿ ಔಟಾದರು. ರಿಕಲ್ಟನ್ ಮಾತ್ರ ತಮಗೆ ಸಿಕ್ಕ ಅವಕಾಶವನ್ನು ಉತ್ತಮವಾಗಿ ಬಳಸಿಕೊಂಡರು. 106 ಎಸೆತಗಳಲ್ಲಿ 7 ಬೌಂಡರಿ 1 ಸಿಕ್ಸರ್ ಸಹಿತ 103 ರನ್ ಗಳಿಸಿ ಮಿಂಚಿದರು. ವ್ಯಾನ್ ದರ್ ದುಸೆನ್ 46 ಎಸೆತಗಳಲ್ಲಿ 52 ರನ್ ಗಳಿಸಿದರೆ, ಏಡನ್ ಮಾರ್ಕ್ರಮ್ 36 ಎಸೆತಗಳಲ್ಲಿ ಅಜೇಯ 52 ರನ್ ಗಳಿಸಿ ಮಿಂಚಿದರು. ಅಂತಿಮವಾಗಿ ದಕ್ಷಿಣ ಆಫ್ರಿಕಾ 50 ಓವರ್ ಗಳಲ್ಲಿ 6 ವಿಕೆಟ್ ಕಳೆದುಕೊಂಡು 315 ರನ್ ಗಳಿಸಿತು.





ಈ ಸವಾಲಿನ ಮೊತ್ತವನ್ನು ಬೆನ್ನಟ್ಟಿದ ಅಫ್ಘಾನಿಸ್ತಾನ ಯಾವ ಹಂತದಲ್ಲೂ ಹೋರಾಟ ನೀಡಲೇ ಇಲ್ಲ. 43.3 ಓವರ್ ಗಳಲ್ಲೇ 208 ರನ್ ಗಳಿಸು ವಷ್ಟರಲ್ಲಿ ಆಲೌಟ್ ಆಗುವ ಮೂಲಕ ಸೋಲೊಪ್ಪಿ ಕೊಂಡಿತು. ರಹಮತ್ ಶಾ 92 ಎಸೆತಗಳಲ್ಲಿ 90 ರನ್ ಗಳಿಸುವ ಮೂಲಕ ಹೋರಾಟ ನೀಡಿದರೂ ಅವರಿಗೆ ಬೇರೆ ಯಾವ ಬ್ಯಾಟರ್ ಕೂಡ ಬೆಂಬಲ ಕೊಡಲಿಲ್ಲ.


ಕಗಿಸೋ ರಬಾಡ 3 ವಿಕೆಟ್ ಪಡೆದರೆ, ಲುಂಗಿ ಎನ್‌ಗಿಡಿ ಮತ್ತು ವಿಯಾನ್ ಮುಲ್ಡರ್ ತಲಾ 2 ವಿಕೆಟ್ ಪಡೆದರು. ಮಾರ್ಕೊ ಯಾನ್ಸನ್ ಮತ್ತು ಕೇಶವ್ ಮಹಾರಾಜ್ 1 ವಿಕೆಟ್ ಪಡೆದುಕೊಂಡರು.

## ಪದಾರ್ಪಣೆ ಪಂದ್ಯದಲ್ಲೇ ಶತಕ!

**ಎಬಿಡಿ ದಾಖಲೆ ಮುರಿದ ರಿಕೆಲ್ಟನ್**

**ಕರಾಚಿಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ರಯಾನ್ ತಮ್ಮ ಏಕದಿನ ವೃತ್ತಿಜೀವನದ ಮೊದಲ ಶತಕ ಗಳಿಸಿದರು. ಅವರು 101 ಎಸೆತಗಳಲ್ಲಿ 100 ರನ್ ಪೂರೈಸಿದರು. ಈ ಟೂರ್ನಿಯಲ್ಲಿ ಟಾಮ್ ಲೇಥಮ್, ವಿಲ್ ಯಂಗ್, ಶುಭ್‌ಮನ್ ಗಿಲ್ ಮತ್ತು ತೌಹೀದ್ ಹೃದೋಯ್ ಕೂಡ ಶತಕ ಸಿಡಿಸಿದ್ದಾರೆ. ಅಫ್ಘಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಯುವ ಬ್ಯಾಟ್ಸ್ ಮನ್ ರಯಾನ್ ರಿಕೆಲ್ಟನ್ ಶತಕ ಸಿಡಿಸಿದರು.**

**2025 ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಕೇವಲ ಮೂರು ಪಂದ್ಯಗಳಲ್ಲಿ ಶತಕ ಗಳಿಸಿದ ಐದನೇ ಬ್ಯಾಟರ್ ಆದರು. ಕರಾಚಿಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ರಯಾನ್ ತಮ್ಮ ಏಕದಿನ ವೃತ್ತಿಜೀವನದ ಮೊದಲ ಶತಕ ಗಳಿಸಿದರು. ಅವರು 101 ಎಸೆತಗಳಲ್ಲಿ 100 ರನ್ ಪೂರೈಸಿದರು. ಈ ಟೂರ್ನಿಯಲ್ಲಿ ಟಾಮ್ ಲೇಥಮ್, ವಿಲ್ ಯಂಗ್, ಶುಭ್‌ಮನ್ ಗಿಲ್ ಮತ್ತು ತೌಹೀದ್ ಹೃದೋಯ್ ಕೂಡ ಶತಕ ಸಿಡಿಸಿದ್ದಾರೆ.**



# ಅಂದು 1 ರನ್, ಇಂದು 2 ರನ್ ಮುನ್ನಡೆ! ರಣಜಿಯಲ್ಲಿ ಇತಿಹಾಸ ನಿರ್ಮಿಸಿದ ಕೇರಳ

ಈ ಬಾರಿ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್‌ನಲ್ಲಿ ಕೇರಳ ತಂಡವು ಜಮ್ಮು ಮತ್ತು ಕಾಶ್ಮೀರ ತಂಡವನ್ನು ಒಂದು ರನ್‌ನಿಂದ ಸೋಲಿಸಿ ಕೊನೆಯ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತ್ತು. ಇದೀಗ ಗುಜರಾತ್ ವಿರುದ್ಧ ಕೇವಲ ಎರಡು ರನ್‌ಗಳ ರೋಚಕ ಮುನ್ನಡೆ ಸಾಧಿಸಿ ರಣಜಿ ಇತಿಹಾಸದಲ್ಲಿ ಮೊದಲ ಬಾರಿಗೆ ಫೈನಲ್‌ಗೆ ಪ್ರವೇಶಿಸಿದೆ.

ಒಂದು ಕಡೆ ಚಾಂಪಿಯನ್ಸ್ ಟ್ರೋಫಿಯ ಅಬ್ಬರ ನಡೆಯುತ್ತಿದ್ದರೆ, ಇತ್ತ ಭಾರತೀಯ ಕ್ರಿಕೆಟ್‌ನ ಪ್ರತಿಷ್ಠಿತ ರಣಜಿ ಟ್ರೋಫಿ ರೋಚಕ ಹಣಾಹಣಿಗೆ ಸಾಕ್ಷಿಯಾಗಿದೆ. ಗುಜರಾತ್ ವಿರುದ್ಧ ನಡೆದ ಸೆಮಿಫೈನಲ್ ಪಂದ್ಯದಲ್ಲಿ 2 ರನ್‌ಗಳ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾದ ಕೇರಳ ತಂಡದ ಇದೇ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದೆ. ರಣಜಿಗೆ ಪದಾರ್ಪಣೆ ಮಾಡಿದ 68 ವರ್ಷಗಳ ನಂತರ ಕೇರಳ ತಂಡ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದೆ.

ಈ ಬಾರಿ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್‌ನಲ್ಲಿ ಕೇರಳ ತಂಡವು ಜಮ್ಮು ಮತ್ತು ಕಾಶ್ಮೀರ ತಂಡವನ್ನು ಒಂದು ರನ್‌ನಿಂದ ಸೋಲಿಸಿ ಕೊನೆಯ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತ್ತು. ಇದೀಗ ಗುಜರಾತ್ ವಿರುದ್ಧ ಕೇವಲ ಎರಡು ರನ್‌ಗಳ ರೋಚಕ ಮುನ್ನಡೆ ಸಾಧಿಸಿ ರಣಜಿ ಇತಿಹಾಸದಲ್ಲಿ ಮೊದಲ ಬಾರಿಗೆ ಫೈನಲ್‌ಗೆ ಪ್ರವೇಶಿಸಿದೆ. ಸೆಮಿಫೈನಲ್ ಪಂದ್ಯ ನೀರಸ ಡ್ರಾನಲ್ಲಿ ಅಂತ್ಯವಾದರೂ ಮೊದಲ ಇನ್ನಿಂಗ್ಸ್‌ನಲ್ಲಿ ಪಡೆದ ಮುನ್ನಡೆಯ ಆಧಾರದ ಮೇಲೆ ಕೇರಳ ಮುಂದಿನ ಹಂತಕ್ಕೆ ತೇರ್ಗಡೆಯಾಗಿದೆ.

# ಭಾರತ-ಬಾಂಗ್ಲಾ ಪಂದ್ಯದ ಮಧ್ಯೆ ಮಿಸ್ಟರಿ ಗರ್ಲ್ ಜೊತೆ ಕಾಣಿಸಿಕೊಂಡ ಶಿಖರ್

ಶಿಖರ್ ಧವನ್ ಜೊತೆ ಸ್ಟ್ಯಾಂಡ್‌ನಲ್ಲಿ ಕುಳಿತಿರುವ ಈ ಮಹಿಳೆ ಯಾರು ಎಂದು ಅಭಿಮಾನಿಗಳಲ್ಲಿ ಚರ್ಚೆ ತೀವ್ರಗೊಂಡಿದೆ. ಕೆಲವು ಸಮಯದ ಹಿಂದೆ ವಿಚ್ಛೇದನ ಪಡೆದ ಶಿಖರ್ ಧವನ್ ಮತ್ತೊಮ್ಮೆ ವಿದೇಶಿ ಮಹಿಳೆಯೊಂದಿಗೆ ಡೇಟಿಂಗ್ ಮಾಡುತ್ತಿದ್ದಾರೆ ಎಂದು ಕೆಲವರು ಹೇಳುತ್ತಿದ್ದಾರೆ. ಧವನ್ ವಿಚ್ಛೇದನ ಪಡೆದಿರುವುದರಿಂದ ಜನರಲ್ಲಿ ಈ ರೀತಿಯ ಪ್ರಶ್ನೆ ಉದ್ಭವಿಸುತ್ತಿದೆ.

ಬಾಂಗ್ಲಾದೇಶವನ್ನು 6 ವಿಕೆಟ್‌ಗಳಿಂದ ಸೋಲಿಸುವ ಮೂಲಕ ಭಾರತ ಕ್ರಿಕೆಟ್ ತಂಡ ಚಾಂಪಿಯನ್ಸ್ ಟ್ರೋಫಿ 2025 ಅನ್ನು ಅದ್ಭುತವಾಗಿ ಪ್ರಾರಂಭಿಸಿದೆ. 229 ರನ್‌ಗಳ ಗುರಿಯನ್ನು ಭಾರತ ಇನ್ನೂ 21 ಎಸೆತಗಳು ಬಾಕಿ ಇರುವಾಗಲೇ ತಲುಪಿತು. ಮೊಹಮ್ಮದ್ ಶಮಿ ಐದು ವಿಕೆಟ್ ಗೊಂಚಲು ಪಡೆದ ನಂತರ, ಶುಭ್‌ಮನ್ ಗಿಲ್ ಬ್ಯಾಟಿಂಗ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ಶತಕ (101) ಸಿಡಿಸಿದರು. ಚಾಂಪಿಯನ್ಸ್ ಟ್ರೋಫಿಯ ಬ್ರಾಂಡ್ ರಾಯಭಾರಿ ಶಿಖರ್ ಧವನ್ ಕೂಡ ಪಂದ್ಯ ವೀಕ್ಷಿಸಲು ಆಗಮಿಸಿದ್ದರು. ಈ ಸಮಯದಲ್ಲಿ, ಓರ್ವ ವಿದೇಶಿ ಮಹಿಳೆ ಕೂಡ ಅವರೊಂದಿಗೆ ಸ್ಟ್ಯಾಂಡ್‌ನಲ್ಲಿ ಕುಳಿತಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸದ್ಯ ಶಿಖರ್ ಧವನ್ ಜೊತೆ ಸ್ಟ್ಯಾಂಡ್‌ನಲ್ಲಿ ಕುಳಿತಿರುವ ಈ ಮಹಿಳೆ ಯಾರು ಎಂದು ಅಭಿಮಾನಿಗಳಲ್ಲಿ ಚರ್ಚೆ ತೀವ್ರಗೊಂಡಿದೆ. ಕೆಲವು ಸಮಯದ ಹಿಂದೆ ವಿಚ್ಛೇದನ ಪಡೆದ ಶಿಖರ್ ಧವನ್ ಮತ್ತೊಮ್ಮೆ ವಿದೇಶಿ ಮಹಿಳೆಯೊಂದಿಗೆ ಡೇಟಿಂಗ್ ಮಾಡುತ್ತಿದ್ದಾರೆ ಎಂದು ಕೆಲವರು ಹೇಳುತ್ತಿದ್ದಾರೆ.





# ಚೊಚ್ಚಲ ಪಂದ್ಯದಲ್ಲೇ ಗೆಲುವಿನ ಶತಕ

**ಗಿಲ್ ಮುರಿದ ದಾಖಲೆಗಳೆಷ್ಟು**

2025ರ ಚಾಂಪಿಯನ್ಸ್ ಟ್ರೋಫಿಯ ಆರಂಭಿಕ ಪಂದ್ಯದಲ್ಲಿ ಭಾರತ ಬಾಂಗ್ಲಾದೇಶವನ್ನು 6 ವಿಕೆಟ್ ಗಳಿಂದ ಸೋಲಿಸಿದೆ. ಶುಭ್‌ಮನ್ ಗಿಲ್ ಅವರ ಅಜೇಯ 101 ರನ್‌ಗಳ ಅದ್ಭುತ ಇನ್ನಿಂಗ್ಸ್ ಭಾರತದ ಗೆಲುವಿಗೆ ಪ್ರಮುಖ ಕಾರಣವಾಯಿತು. ಇದು ಗಿಲ್ ಅವರ ಏಕದಿನ ವೃತ್ತಿಜೀವನದ 8ನೇ ಶತಕ ಮತ್ತು ಚಾಂಪಿಯನ್ಸ್ ಟ್ರೋಫಿಯ ಚೊಚ್ಚಲ ಪಂದ್ಯದಲ್ಲಿ ಬಾರಿಸಿದ ಮೊದಲ ಶತಕವಾಗಿದೆ. ಈ ಸಾಧನೆಯೊಂದಿಗೆ ಗಿಲ್ ವಿಶೇಷ ದಾಖಲೆಯನ್ನೂ ಸೃಷ್ಟಿಸಿದ್ದಾರೆ. 2025 ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಟೀಂ ಇಂಡಿಯಾ ಗೆಲುವಿನೊಂದಿಗೆ ಟೂರ್ನಿಯನ್ನು ಆರಂಭಿಸಿದೆ. ದುಬೈನಲ್ಲಿ ನಡೆದ ಪಂದ್ಯದಲ್ಲಿ ಭಾರತ, ಬಾಂಗ್ಲಾದೇಶವನ್ನು 6 ವಿಕೆಟ್‌ಗಳಿಂದ ಸೋಲಿಸಿತು. ಈ ಮಹತ್ವದ ಗೆಲುವಿನಲ್ಲಿ ಶುಭ್‌ಮನ್ ಗಿಲ್ ಅವರ ಪಾತ್ರ ಅಪಾರವಾಗಿತ್ತು. ದಿಢೀರ್ ಕುಸಿತದ ನಡುವೆ ತಾಳ್ಮೆಯ ಇನ್ನಿಂಗ್ಸ್ ಕಟ್ಟಿದ ಗಿಲ್ ಅಜೇಯ 101 ರನ್‌ಗಳ ಇನ್ನಿಂಗ್ಸ್ ಆಡಿ ತಂಡವನ್ನು ಸೋಲಿನಿಂದ ಪಾರು ಮಾಡಿದರು. ಇದರ ಜೊತೆಗೆ ಚೊಚ್ಚಲ ಚಾಂಪಿಯನ್ಸ್ ಟ್ರೋಫಿಯ ಮೊದಲ ಪಂದ್ಯದಲ್ಲೇ ಶತಕ ಬಾರಿಸಿದ ಸಾಧನೆ ಮಾಡಿದಲ್ಲದೆ, ಐಸಿಸಿ ಟೂರ್ನಿಯಲ್ಲಿ ಮೊದಲ ಶತಕ ಬಾರಿಸಿದ ದಾಖಲೆಯನ್ನು ನಿರ್ಮಿಸಿದರು.

**ಐಸಿಸಿ ಟೂರ್ನಿಯಲ್ಲಿ ಮೊದಲ ಶತಕ:** ತಮ್ಮ ಶತಕದ ಇನ್ನಿಂಗ್ಸ್‌ನಲ್ಲಿ 125 ಎಸೆತಗಳನ್ನು ಎದುರಿಸಿದ ಗಿಲ್ 100 ರನ್ ಪೂರ್ಣಗೊಳಿಸಿದರು. ಇದರಲ್ಲಿ 9 ಬೌಂಡರಿ ಮತ್ತು 2 ಸಿಕ್ಸರ್‌ಗಳು ಸೇರಿದ್ದವು. ಈ ಶತಕದೊಂದಿಗೆ ಗಿಲ್ ಐಸಿಸಿ ಈವೆಂಟ್‌ನಲ್ಲಿ ಮೊದಲ ಬಾರಿಗೆ ಶತಕ ಬಾರಿಸಿದ ಸಾಧನೆಯನ್ನು ಮಾಡಿದರು. ಇದಲ್ಲದೆ, ಇದು ಅವರ ಏಕದಿನ ವೃತ್ತಿಜೀವನದ 8 ನೇ ಶತಕವಾಗಿದ್ದು, ಇದಕ್ಕೂ ಮುನ್ನ ಅವರು ತಮ್ಮ ಕೊನೆಯ ಏಕದಿನ ಪಂದ್ಯದಲ್ಲಿಯೂ ಇಂಗ್ಲೆಂಡ್ ವಿರುದ್ಧ ಶತಕ ಸಿಡಿಸಿದ್ದರು. ಇಷ್ಟೇ ಅಲ್ಲ, ಗಿಲ್ ಕಳೆದ 4 ಏಕದಿನ ಇನ್ನಿಂಗ್ಸ್‌ಗಳಲ್ಲಿ 50+ ರನ್‌ಗಳ ಗಡಿಯನ್ನು ದಾಟಿದ್ದಾರೆ,

**ಧವನ್ ದಾಖಲೆ ಮುರಿದ ಗಿಲ್:** ಈ ಪಂದ್ಯದಲ್ಲಿ ಶುಭ್‌ಮನ್ ಗಿಲ್ 129 ಎಸೆತಗಳಲ್ಲಿ ಅಜೇಯ 101 ರನ್ ಗಳಿಸಿ ಟೀಂ ಇಂಡಿಯಾವನ್ನು ಗೆಲುವಿನತ್ತ ಕೊಂಡೊಯ್ದರು. ಈ ಗೆಲುವಿನ ಇನ್ನಿಂಗ್ಸ್‌ನೊಂದಿಗೆ ಗಿಲ್ ತಮ್ಮ ಹೆಸರಿನಲ್ಲಿ ಒಂದು ದೊಡ್ಡ ದಾಖಲೆಯನ್ನೂ ನಿರ್ಮಿಸಿದರು. ಅದೇನೆಂದರೆ, ಭಾರತ ಪರ ಏಕದಿನ ಪಂದ್ಯಗಳಲ್ಲಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ 8 ಶತಕಗಳನ್ನು ಬಾರಿಸಿದ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಗಿಲ್ ಪಾತ್ರರಾಗಿದ್ದಾರೆ.

# ನಿರ್ದೇಶಕನಾಗಬೇಕಿದ್ದ ಸುದೀಪ್ ಹೀರೋ ಆಗಿದ್ದು

ಕಿಚ್ಚ ಸುದೀಪ್ ಕನ್ನಡ ಚಿತ್ರರಂಗದ ಸ್ಟಾರ್ ನಟ ಮಾತ್ರವಲ್ಲದೆ ಸ್ಟಾರ್ ಪ್ಯಾನ್ ಇಂಡಿಯಾ ನಟರೂ ಸಹ ಹೌದು. ಆದರೆ ಸುದೀಪ್‌ಗೆ ನಟನೆ ಇಷ್ಟವಿರಲಿಲ್ಲ, ಅವರಿಗೆ ತಾವೊಬ್ಬ ಒಳ್ಳೆಯ ಸಿನಿಮಾ ನಿರ್ದೇಶಕ ಆಗಬೇಕು ಎಂಬ ಆಸೆಯಿತ್ತು. ಸುದೀಪ್ ಅವರು ನಟನಾಗಿ, ನಿರ್ದೇಶಕನಾಗಿ, ನಿರ್ಮಾಪಕನಾಗಿ ಗಮನ ಸೆಳೆದಿದ್ದಾರೆ. ಅವರು ಅನೇಕ ಸೂಪರ್ ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಕಳೆದ ವರ್ಷ ರಿಲೀಸ್ ಆದ 'ಮ್ಯಾಕ್ಸ್' ಸಿನಿಮಾ ಯಶಸ್ಸು ಕಂಡಿದೆ. ಅವರು ಹೀರೋ ಆಗೋಕೆ ಕಾರಣ ಆಗಿದ್ದು ಉಪೇಂದ್ರ ಎಂಬ ವಿಚಾರ ನಿಮಗೆ ಗೊತ್ತೇ? ಆ ಬಗ್ಗೆ ನಾವು ಹೇಳುತ್ತಿದ್ದೇವೆ ಕೇಳಿ. ಈ ವಿಚಾರವನ್ನು ಉಪೇಂದ್ರ ಅವರು ಅನೇಕ ಬಾರಿ ಹೇಳಿಕೊಂಡಿದ್ದಾರೆ. ಕಿಚ್ಚ ಸುದೀಪ್ ಅವರು ಹೀರೋ ಆಗಿ ಮಿಂಚುತ್ತಿದ್ದಾರೆ. ಆದರೆ, ಮೊದಲು ಅವರಲ್ಲಿ ಆ ರೀತಿಯ ಆಸೆಗಳೇ ಇರಲಿಲ್ಲ. ಅವರು ನಿರ್ದೇಶಕರಾಗಬೇಕು ಎಂದುಕೊಂಡಿದ್ದರು. ಇದನ್ನು ಉಪೇಂದ್ರ ಅವರು ಒಮ್ಮೆ ರಿವೀಲ್ ಮಾಡಿದ್ದರು. ಸುದೀಪ್ ಚಿತ್ರರಂಗಕ್ಕೆ ಬರುವಾಗ ಉಪೇಂದ್ರ ನಿರ್ದೇಶನದಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಈ ಕಾರಣಕ್ಕೆ ಉಪೇಂದ್ರ ಬಳಿ ಅವಕಾಶ ಕೇಳಿಕೊಂಡು ಸುದೀಪ್ ಹೋಗಿದ್ದರಂತೆ. 'ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಲು ಅವಕಾಶ ಕೊಡಿ' ಎಂದು ಉಪೇಂದ್ರ ಬಳಿ ಸುದೀಪ್ ಅವರು ಕೋರಿದ್ದರು. ಅವರ ಎತ್ತರ ಹಾಗೂ ಪರ್ಸನಾಲಿಟಿ ನೋಡಿ 'ನೀವು ಯಾಕೆ ಡೈರೆಕ್ಟರ್ ಆಗ್ತೀರಾ. ಇಷ್ಟು ಹೈಟ್ ಇದೆ ಹೀರೋ ಆಗಿ' ಎಂದು ಕಿವಿಮಾತು ಹೇಳಿ ಕಳುಹಿಸಿದ್ದರು. ಈ ಕಿವಿಮಾತು ಕೆಲಸ ಮಾಡಿತ್ತು. ಸುದೀಪ್ ಅವರು ಹೀರೋ ಆದರು. ಸುದೀಪ್ ಅವರು ಹೀರೋ ಆದ ಹೊರತಾಗಿಯೂ ನಿರ್ದೇಶಕನಾಗಬೇಕು ಎಂಬ ಆಸೆಯನ್ನು ಬಿಟ್ಟಿಲ್ಲ. ಹೀರೋ ಆಗಿ ಯಶಸ್ಸು ಕಂಡ ಬಳಿಕ ಅವರು ಡೈರೆಕ್ಷನ್‌ಗೆ ಇಳಿದರು. ಡೈರೆಕ್ಷನ್ ಮಾಡಿ ಅವರು ಫೇಮಸ್ ಆದರು. ಹಲವು ಹಿಟ್ ಚಿತ್ರಗಳನ್ನು ಡೈರೆಕ್ಟ್ ಮಾಡಿದ್ದಾರೆ.

ಸದ್ಯ ಸುದೀಪ್ ಅವರು 'ಮ್ಯಾಕ್ಸ್' ಸಿನಿಮಾ ಗೆಲುವಿನ ಅಲೆಯಲ್ಲಿ ತೇಲುತ್ತಿದ್ದಾರೆ. ಈ ಚಿತ್ರದ ಬಳಿಕ ಅವರು 'ಬಿಲ್ಲರಂಗ ಭಾಷ' ಸಿನಿಮಾಗಳಲ್ಲಿ ಮಾಡುತ್ತಿದ್ದಾರೆ. ಈ ಚಿತ್ರದ ಬಳಿಕ ಅವರು ಒಂದು ಚಿತ್ರವನ್ನು ನಿರ್ದೇಶನ ಕೂಡ ಮಾಡಬೇಕಿದೆ.




# ನಿಧಿ ಮನೆ ಗೇಟಿಗೆ ಪಟಾಕಿ ಹಚ್ಚಿದ್ದ ಯಶ್

ಯಶ್ ನಟನೆಯ 'ರಾಜಾ ಹುಲಿ' ಸಿನಿಮಾ ನೆನಪಿದೆಯೇ ಆ ಸಿನಿಮಾದ ರೀತಿಯೇ ನಿಜ ಜೀವನದಲ್ಲಿಯೂ ಯಶ್ ಗೆಳೆಯರಿಗಾಗಿ ಡೇರಿಂಗ್ ಕೆಲಸಗಳನ್ನು ಮಾಡಿದ್ದಾರೆ. ಒಮ್ಮೆಯಂತೂ ಯಾರೋ ಗೆಳೆಯ ಹೇಳಿದ ಎಂದು ಮೈಸೂರಿನಲ್ಲಿ ನಟಿ ನಿಧಿ ಸುಬ್ಬಯ್ಯ ಮನೆ ಮೇಲೆ ಪಟಾಕಿ ಸರ ಹಚ್ಚಿ ಎಸೆದಿದ್ದರಂತೆ. ಯಶ್ ಅವರು ಶ್ರೀಮಂತ ಕುಟುಂಬ ಹಿನ್ನೆಲೆಯಿಂದ ಬಂದವರಲ್ಲ. ಅವರು ಸಾಕಷ್ಟು ಕಷ್ಟಗಳನ್ನು ನೋಡಿ ಆ ಬಳಿಕ ಚಿತ್ರರಂಗಕ್ಕೆ ಕಾಲಿಟ್ಟರು.




ಯಶ್ ಅವರು ಕಾಲೇಜಿನಲ್ಲಿ ಇರುವಾಗ ಎಲ್ಲಾ ಹುಡುಗರಂತೆ ತರಲೆಗಳನ್ನು ಮಾಡಿಕೊಂಡು ಬಂದವರು. ಈ ಬಗ್ಗೆ ಶೋ ಒಂದರಲ್ಲಿ ಯಶ್ ಹೇಳಿದ್ದರು. ಅಚ್ಚರಿಯ ವಿಚಾರ ಏನೆಂದರೆ ನಟಿ ನಿಧಿ ಸುಬ್ಬಯ್ಯ ಅವರ ಮನೆಯ ಗೇಟ್ಗೆ ಪಟಾಕಿ ಹಚ್ಚಿದ್ದರು. ಆಗಿನ್ನೂ ನಿಧಿ ಹೀರೋಯಿನ್ ಆಗಿರಲಿಲ್ಲ. ಈ ವಿಚಾರವನ್ನು ಈಗ ನೆನಪಿಸಿಕೊಳ್ಳೋಣ. ಯಶ್ ಅವರು ಓದಿದ್ದು ಮೈಸೂರಿನಲ್ಲಿ. ಕಾಲೇಜಿನಲ್ಲಿ ಇರುವಾಗ ಸಾಕಷ್ಟು ಫನ್ ಮೂಮೆಂಟ್‌ನ ಅವರು ಅನುಭವಿಸಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಅವರು ಸಾಕಷ್ಟು ಫನ್ ಆಕ್ಟಿವಿಟಿ ಕೂಡ ಮಾಡಿದ್ದರು ಎಂಬುದುನ್ನು ಇಲ್ಲಿ ಗಮನಿಸಬೇಕಾದ ವಿಚಾರ. 'ಹುಡುಗಿ ಮನೆಗೆ ಪಟಾಕಿ ಹಚ್ಚಿದ್ದೆ. ಈ ಹುಡುಗಿ ಈಗ ನಟಿ. ಅವರು ಬೇರಾರೂ ಅಲ್ಲ ನಿಧಿ ಸುಬ್ಬಯ್ಯ. ಅವರು ನಮ್ಮ ಕಾಲೇಜ್ನಲ್ಲಿ ಓದಿದ್ದರು. ನನ್ನ ಫ್ರೆಂಡ್ ಲವ್ ಮಾಡ್ತಾ ಇದ್ದ. ಅವನಿಗೆ ನಾವು ಸಹಾಯ ಮಾಡುತ್ತಿದ್ದೆವು. ಆಗ ನಿಧಿ ಸುಬ್ಬಯ್ಯ, ಈ ಹುಡುಗರು ಸರಿ ಇಲ್ಲ ಎಂದು ಫಿಟ್ಟಿಂಗ್ ಇಟ್ಟಿದ್ದರು. ಆಗ ನಾನು ಹಾಗೂ ನನ್ನ ಗೆಳೆಯರು ಹೋಗಿ ಅವರ ಮನೆಯ ಗೇಟ್ಗೆ ಪಟಾಕಿ ಹಚ್ಚಿದ್ದೆವು. ಬರುವಾಗ ಲೈಟ್ ಎಲ್ಲಾ ಆನ್ ಆಗಿತ್ತು. ಜಸ್ಟ್ ಮಿಸ್' ಎಂದರು ಯಶ್. 'ಸುಮಾರು ವರ್ಷ ಆದ ಬಳಿಕ ನಿಧಿ ಸಿಕ್ಕರು. ನೀವು ನನ್ನ ಕಾಲೇಜ್ ಅಲ್ಲಿ ಓದಿದ್ರಿ ಅಲ್ವಾ ಅಂತ ಕೇಳಿದ್ರು.



# ದೃಶ್ಯಂ 3 ಸಿನಿಮಾ ಕನ್ಫರ್ಮ್ ಕ್ಲೈಮ್ಯಾಕ್ಸ್ ಬಗ್ಗೆ ಹೆಚ್ಚಾಯ್ತು

ಮಲಯಾಳಂ ಸೂಪರ್ ಸ್ಟಾರ್ ಮೋಹನ್ ಲಾಲ್ ಹಾಗೂ ಖ್ಯಾತ ನಿರ್ದೇಶಕ ಜೀತು ಜೋಸೆಫ್, ಬ್ಲಾಕ್‌ಬಸ್ಟರ್ ಕ್ರೈಮ್ ಥ್ರಿಲ್ಲರ್ ಸಿನಿಮಾದ 3ನೇ ಭಾಗಕ್ಕೆ ಕೈಜೋಡಿಸಿದ್ದಾರೆ. ಹೌದು. ದೃಶ್ಯಂ 3 ಸಿನಿಮಾದಲ್ಲಿ ಒಟ್ಟಿಗೆ ಕೆಲಸ ಮಾಡಲಿದ್ದಾರೆ. ಫೆಬ್ರವರಿ 20 ರಂದು ನಿರ್ದೇಶಕ ಜೀತು ಜೋಸೆಫ್ ಮತ್ತು ನಿರ್ಮಾಪಕ ಆಂಥೋನಿ ಪೆರುಂಬವೂರ್ ಅವರೊಂದಿಗೆ ಫೋಟೋ ಹಂಚಿಕೊಳ್ಳುವ ಮೂಲಕ ಮೋಹನ್ ಲಾಲ್ ತಮ್ಮ ಸಿನಿಮಾವನ್ನು ಅಧಿಕೃತವಾಗಿ ಘೋಷಿಸಿದ್ದಾರೆ.



ಈ ಫೋಟೋವನ್ನು ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡ ನಟ ಮೋಹನ್ ಲಾಲ್, ಪಾಸ್ಟ್ ಎಂದಿಗೂ ಮೌನವಾಗಿರುವುದಿಲ್ಲ. ದೃಶ್ಯಂ 3 ಕನ್ಫರ್ಮ್ ಎಂಬ ಕ್ಯಾಪ್ಷನ್‌ಕೊಟ್ಟಿದ್ದಾರೆ. ಪೋಸ್ಟ್ ಹಂಚಿಕೊಂಡ ಕೂಡಲೇ ಅಭಿಮಾನಿಗಳು ಕಾಮೆಂಟ್‌ಗಳ ವಿಭಾಗದಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಳ್ಳಲು ಶುರು ಮಾಡಿದ್ದಾರೆ. ವಾಹ್, ಬಿಗ್ಗೆಸ್ಟ್ ಬ್ರ್ಯಾಂಡ್ ಸೀಕ್ವೆಲ್ ಈಸ್‌ಬ್ಯಾಕ್ (ಫೈಯರ್‌ಎಮೋಜಿಯೊಂದಿಗೆ) ಎಂದು ಬರೆದುಕೊಂಡಿದ್ದಾರೆ.

ಮಲಯಾಳಂ ಭಾಷೆಯಲ್ಲಿ ತೆರೆ ಕಂಡು ದೇಶಾದ್ಯಂತ ಸಂಚಲನ ಮೂಡಿಸಿದ್ದ ದೃಶ್ಯಂ 1, 2 ಸಿನಿಮಾ ಬೇರೆ ಭಾಷೆಗಳಿಗೂ ರಿಮೇಕ್ ಆಗಿತ್ತು. ಇದೀಗ ಬಾಗ-2 ಯಶಸ್ಸಿನ ಬೆನ್ನಲ್ಲೇ 3ನೇ ಭಾಗವನ್ನ ಬೆಳ್ಳಿ ತೆರೆಗೆ ತರಲು ಚಿತ್ರತಂಡ ಸಜ್ಜಾಗಿದೆ.



# ರಚಿತಾ ಅದ್ಭುತ ನೋಟಕ್ಕೆ ಅಭಿಮಾನಿಗಳು ಫಿದಾ!

**ಬುಲ್ ಬುಲ್ ಮಾತಾಡಕ್ಕಿಲ್ವಾ ಎಂದ ಫ್ಯಾನ್ಸ್!**

ಬುಲ್ ಬುಲ್ ರಚಿತಾ ರಾಮ್ ಒಂದಷ್ಟು ಫೋಟೋ ಶೇರ್ ಮಾಡಿದ್ದಾರೆ. ಮಸ್ಟರ್ಡ್ ಕಲರ್ ಸೀರೆಯುಟ್ಟ ಈ ಫೋಟೋಗಳಲ್ಲಿ ಅದ್ಭುತ ಅನಿಸೋ ನೋಟವನ್ನು ಬೀರಿದ್ದಾರೆ. ತಮ್ಮ ಎಂದಿನ ಹೇರ್ ಸ್ಟೈಲ್ ಅಲ್ಲೂ ಕಂಗೊಳಿಸಿದ್ದಾರೆ. ಈ ಎಲ್ಲವೂಗಳನ್ನ ನೋಡಿದ ಫ್ಯಾನ್ಸ್ ಕಮಲ ದೇವತೆ ಅಂತಲೇ ಬಣ್ಣಿಸಿದ್ದಾರೆ. ರಚಿತಾ ಅಭಿಮಾನಿಗಳು ಈ ರೀತಿ ಕರೆಯಲು ಕಾರಣ ಕೂಡ ಇದೆ. ಆ ಕಾರಣ ಏನು ಗೊತ್ತೇ ಹೌದು, ರಚಿತಾ ರಾಮ್ ತಮ್ಮ ಈ ಫೋಟೋಗಳನ್ನ ಶುಕ್ರವಾರದ ದಿನವೇ ಶೇರ್ ಮಾಡಿಕೊಂಡಿದ್ದಾರೆ. ಅದಕ್ಕೇನೆ ರಚ್ಚು ಸೆಲೆಬ್ರಿಟಿಗಳು ರಚಿತಾ ರಾಮ್ ಅವರನ್ನ ಶುಕ್ರವಾರದ ಕಮಲ ದೇವತೆ ಅಂತಲೂ ಹೊಗಳಿದ್ದಾರೆ. ರಚಿತಾ ರಾಮ್ ಮಾಡ್ರನ್ ಡ್ರೆಸ್ ಅಲ್ಲಿ ಅಷ್ಟೇನೂ ಸೂಪರ್ ಅನಿಸೋದಿಲ್ಲ. ಆದರೆ, ಸೀರೆ ಅಂತ ಬಂದ್ರೆ ರಚ್ಚುಗೆ ರಚ್ಚುನೇ ಸಾಟಿ ನೋಡಿ. ಅಷ್ಟು ವಿಶೇಷವಾಗಿಯೇ ಕಾಣಿಸುತ್ತಾರೆ. ಒಳ್ಳೆ ಹೈಟ್ ಕೂಡ ಇರೋದ್ರಿಂದಲೇ ಸೀರೆಗಳು ರಚಿತಾ ರಾಮ್ ಅವರಿಗೆ ತುಂಬಾನೆ ಚೆನ್ನಾಗಿಯೇ ಒಪ್ಪುತ್ತೆ ಬಿಡಿ.

ರಚಿತಾ ರಾಮ್ ಅವರ ಸೀರೆ ಸೌಂದರ್ಯಕ್ಕೋ ಅಥವಾ ಹಾಡು ಬರೆದ್ಮೇಲೆ ಸೀರೆ ಪ್ಲಾನ್ ಮಾಡಿದ್ರೋ ಗೊತ್ತಿಲ್ಲ. ಆದರೆ, ರನ್ನ ಚಿತ್ರದ ಸೀರೆಲಿ ಹುಡುಗಿಯ ನೋಡಲೇ ಬಾರದು ಅಂತ ಹಾಡು ಬಂದೆ ಬಿಡ್ತು.



# ರಾಖಿ ಸಾವಂತ್‌ಗೆ ಸಮನ್ಸ್

**ಅಶ್ಲೀಲ ಹೇಳಿಕೆ ನೀಡಿದ್ದ ಪ್ರಕರಣ**

ಇಂಡಿಯಾಸ್ ಗಾಟ್ ಲ್ಯಾಟೆಂಟ್ ಕಾರ್ಯಕ್ರಮದ ಇತ್ತೀಚಿನ ಸಂಚಿಕೆಯಲ್ಲಿ ಯೂಟ್ಯೂಬರ್ ರಣವೀರ್ ಅಲಹಬಾದಿಯಾ ಅಶ್ಲೀಲ ಹೇಳಿಕೆಗಳನ್ನು ನೀಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟಿ ರಾಖಿ ಸಾವಂತ್‌ಗೆ ಮಹಾರಾಷ್ಟ್ರ ಸೈಬರ್ ಪೊಲೀಸರು ಸಮನ್ಸ್ ನೀಡಿದ್ದಾರೆ. ಇದೇ ಫೆ.27 ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆ ದಾಖಲಿಸುವಂತೆ ನಟಿಗೆ ಸಮನ್ಸ್ ನೀಡಿದ್ದಾರೆ. ಇದೇ ವೇಳೆ ರಣವೀರ್ ಅಲಹಬಾದಿಯಾ, ಸಮಯ್ ರೈನಾ, ಆಶಿಶ್ ಚಂಚಲಾನಿ, ಅಪೂರ್ವ ಮುಖಿಜಾ ಮತ್ತು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಇತರ ಪ್ಯಾನಲಿಸ್ಟ್‌ಗಳಿಗೂ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ಸಮನ್ಸ್ ಜಾರಿಗೊಳಿಸಿದ್ದಾರೆ ಎಂದು ವರದಿಯಾಗಿದೆ.

ಇತ್ತೀಚೆಗೆ ನಡೆದಿದ್ದ ಇಂಡಿಯಾಸ್ ಗಾಟ್ ಟ್ಯಾಲೆಂಡ್ ಶೋನಲ್ಲಿ ರಾಖಿ ಸಾವಂತ್ ಅತಿಥಿಯಾಗಿ ಭಾಗವಹಿಸಿದ್ದರು. ಈ ಹಿನ್ನೆಲೆ ರಾಖಿ ಸಾವಂತ್‌ಗೆ ನೋಟಿಸ್ ನೀಡಲಾಗಿದೆ.

ಯುಟ್ಯೂಬ್ ಚಾನೆಲ್‌ನಲ್ಲಿ ಮೂಡಿಬಂದ ಇಂಡಿಯಾಸ್ ಗಾಟ್ ಲ್ಯಾಟೆಂಟ್ ಕಾಮಿಡಿ ರಿಯಾಲಿಟಿ ಶೋಗೆ ಬಂದಿದ್ದ ಸ್ಪರ್ಧಿಯೊಬ್ಬರ ಬಳಿ ಪೋಷಕರ ಲೈಂಗಿಕತೆಯ ಬಗ್ಗೆ ರಣವೀರ್ ಕೇಳಿದ್ದರು.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**